**ಸಂಪುಟ:** 04 **ಸಂಚಿಕೆ:** 299 **ಪುಟಗಳು:** 08 **ಶನಿವಾರ** 11 **ಜನವರಿ** 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಜೀವನ ಎನ್ನುವುದು
ಬುದ್ಧಿವಂತನಿಗೆ ಕನಸು,
ಮೂರ್ಖನಿಗೆ ಆಟ
ಸಿರಿವಂತನಿಗೆ ತಮಾಷೆ
ಮತ್ತು ಬಡವನಿಗೆ ದುರಂತ

## ಡಿ.ಕೆ ಶಿವಕುಮಾರ್ ಸಿಎಂ ಆಗ್ತಾರೆ

• **ಉದಯವಾಹಿನಿ ಬೆಳಗಾವಿ**

ಡಿಸಿಎಂ ಡಿ.ಕೆ ಶಿವಕುಮಾರ್ ಟೆಂಪಲ್ ರನ್ ನಲ್ಲಿದ್ದಾರೆ. ಇದೇ ಸಂದರ್ಭದಲ್ಲಿ ವಿನಯ್ ಗುರೂಜಿ ಅವರು ಗುರುಗಳ ದಯೆಯಿಂದ ಡಿಕೆ ಶಿವಕುಮಾರ್ ಸಿಎಂ ಆಗುತ್ತಾರೆ ಎಂಬುದಾಗಿ ಭವಿಷ್ಯ ನುಡಿದಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು ಡಿ.ಕೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವಂತ ಯೋಗವಿದೆ. ಗುರುಗಳ ದಯೆ, ಬಲದಿಂದ ಮುಖ್ಯಮಂತ್ರಿ ಆಗಲಿದ್ದಾರೆ ಎಂಬುದಾಗಿ ಭವಿಷ್ಯ ನುಡಿದಿದ್ದಾರೆ. ಮತ್ತೊಂದೆಡೆ ಉಪ ಮುಖ್ಯಮಂತ್ರಿ, ಡಿ.ಕೆ ಶಿವಕುಮಾರ್ ಅವರು ತಮಿಳುನಾಡಿನಲ್ಲಿ ಟೆಂಪಲ್ ರನ್ ನಡೆಸುತ್ತಿದ್ದಾರೆ. ವಿವಿಧ ದೇವಾಲಯಗಳಿಗೆ ಭೇಟಿ ನೀಡುತ್ತಿದ್ದಾರೆ. ಕೂಡ ಟೆಂಪಲ್ ರನ್ ಮುಂದುವರೆಸಿದ್ದಾರೆ.

## ರೂ.100 ಕೋಟಿ ಖರ್ಚು ಮಾಡಿದ ಎಚ್ ಡಿಕೆ ಪಡೆದ ಕಮಿಷನ್ ಎಷ್ಟು?

• **ಉದಯವಾಹಿನಿ ಬೆಂಗಳೂರು**

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ತಮ್ಮ ಮಗನ ಚುನಾವಣೆಗೆ ರೂ.100 ಕೋಟಿ ಖರ್ಚು ಮಾಡಿದ್ದಾರೆ.ಅಷ್ಟು ಹಣ ಖರ್ಚು ಮಾಡಲು ಎಷ್ಟು ಕಮಿಷನ್ ತೆಗೆದು ಕೊಂಡಿದ್ದಾರೆ' ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಪ್ರಶ್ನಿಸಿದರು.ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಶೇಕಡ 60ರಷ್ಟು ಲಂಚದ ಆರೋಪ ಮಾಡಿದ್ದಾರೆ. ಅದಕ್ಕೂ ಮೊದಲು ರೂ.100 ಕೋಟಿ ಖರ್ಚು ಮಾಡಿದ್ದಾರೆ ಎಂದು ಜನ ಹೇಳುತ್ತಿದ್ದಾರೆ. ಆದ್ದರಿಂದ, ಜನರಿಗೆ ವಿವರಣೆ ಕೊಡಲಿ' ಎಂದರು.ನಾನು ಕೂಡ ಚನ್ನಪಟ್ಟಣದವನೇ. ಮೊದಲೆಲ್ಲ ಚುನಾವಣೆ ಸಮಯದಲ್ಲಿ ಹತ್ತು ರೂಪಾಯಿ ಖರ್ಚು ಮಾಡದ ಕುಮಾರಸ್ವಾಮಿ ಈಗ ಅಷ್ಟು ಹಣ ಖರ್ಚು ಮಾಡಲು ಎಷ್ಟು ಕಮಿಷನ್ ತೆಗೆದುಕೊಂಡಿದ್ದಾರೆ. ಅವರೇನು ಆಲೂಗಡ್ಡೆ ಮಾರಿ ಅಷ್ಟು ಹಣ ಸಂಪಾದಿಸಿದ್ದಾರಾ' ಎಂದು ಅವರು ಪ್ರಶ್ನಿಸಿದರು.

## 5 ವರ್ಷ ಪೂರ್ತಿ ಸಿದ್ದರಾಮಯ್ಯ ಅವರೇ ಸಿಎಂ: ಎಂ.ಬಿ.ಪಾಟೀಲ್

• **ಉದಯವಾಹಿನಿ ಹೊಸಪೇಟೆ**

ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಸಿದ್ದರಾಮಯ್ಯ ಅವರೇ ಪೂರ್ತಿ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಹೇಳಿದರು.ಇಲ್ಲಿ ಶುಕ್ರವಾರ ಸಿರಸಂಗಿ ಲಿಂಗರಾಜ ದೇಸಾಯಿ ಅವರ 164ನೇ ಜಯಂತ್ಯೋತ್ಸವ ಪ್ರಯುಕ್ತ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವ ಬಗ್ಗೆ ಯಾವ ಒಪ್ಪಂದ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ, ಪೂರ್ತಿ ಅವಧಿಗೆ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂದರು. ಡಿನ್ನರ್ ಪಾರ್ಟಿ ಮಾಡುವುದರಲ್ಲಿ ತಪ್ಪೇನಿಲ್ಲ, ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ ಎಂದರು. ಕನ್ನಡ ವಿವಿ ನೆಲ ಸಂರಕ್ಷಣೆಗೆ ಬದ್ಧ ಹಂಪಿ ಕನ್ನಡ ವಿಶ್ವವಿದ್ಯಾಲಯ ಸಮೀಪ ನಿರ್ಮಾಣವಾಗಲಿರುವ ರೆಸಾರ್ಟ್ ಒಂದಕ್ಕಾಗಿ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಸ್ಥಳ ಕಬಳಿಸಲು ಅವಕಾಶ ನೀಡುವುದಿಲ್ಲ, ಕೆಐಎಡಿಬಿ ಈ ನಿಟ್ಟಿನಲ್ಲಿ ನೋಟಿಸ್ ನೀಡಿದ್ದರೂ ವಿಶ್ವವಿದ್ಯಾಲಯಕ್ಕೆ ಸೇರಿದ ಸ್ಥಳಕ್ಕೆ ಚ್ಯುತಿ ಬರಲು ಬಿಡುವುದಿಲ್ಲ ಎಂದರು.

## ಮುಂದಿನ ವಾರ ಮುಖಂಡರ ಜೊತೆ ರಾಜ್ಯ ಪ್ರವಾಸ

• **ಉದಯವಾಹಿನಿ ಬೆಂಗಳೂರು**

ಮುಂದಿನ ವಾರ ಮುಖಂಡರ ಜೊತೆ ಸೇರಿ ರಾಜ್ಯ ಪ್ರವಾಸ ಮಾಡುವುದಾಗಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಘೋಷಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು, ಮುಂದಿನ ವಾರ ಮುಖಂಡರ ಜೊತೆಗೆ ಸೇರಿ ರಾಜ್ಯ ಪ್ರವಾಸ ಕೈಗೊಳ್ಳಲಿದ್ದೇನೆ. 2 ಜಿಲ್ಲೆಯಂತೆ ಪ್ರಮುಖ ಕಾರ್ಯಕರ್ತರ ಜೊತೆಗೆ ಪ್ರವಾಸ ಮಾಡುವುದಾಗಿ ತಿಳಿಸಿದರು. ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಗ್ರಾಮ ಪಂಚಾಯ್ತಿ ಚುನಾವಣೆ ಬರುತ್ತಿದೆ. ಈ ಹಿನ್ನಲೆಯಲ್ಲಿ ರಾಜ್ಯ ಪ್ರವಾಸ ಮಾಡಲು ನಾನು ನಿರ್ಧರಿಸಿದ್ದೇನೆ. ಮುಂದಿನ ವಾರ ದಿನಾಂಕ ನಿಶ್ಚಯ ಮಾಡಿ ಪ್ರವಾಸ ಮಾಡುತ್ತೇನೆ. ಒಂದು ದಿನಕ್ಕೆ ಎರಡು ಜಿಲ್ಲೆಗಳಲ್ಲಿ ಪ್ರವಾಸ ಮಾಡುವುದಾಗಿ ಘೋಷಿಸಿದರು.

## ಅಧಿಕಾರಕ್ಕಾಗಿಯೇ ಶತ್ರು ಸಂಹಾರ ಪೂಜೆ: ಕುಮಾರಸ್ವಾಮಿ

• **ಉದಯವಾಹಿನಿ ಬೆಂಗಳೂರು**

ಶತ್ರುಗಳ ಸಂಹಾರ, ಅಧಿಕಾರಕ್ಕಾಗಿ ಡಿಕೆಶಿ ಶತ್ರು ಸಂಹಾರ ಪೂಜೆ ಮಾಡಿಸಿದ್ದಾರೆ ಅಂತ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ. ಡಿಕೆಶಿಯಿಂದ ಶತ್ರು ಸಂಹಾರ ಪೂಜೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಎಲ್ಲರನ್ನು ದೇವರೇ ಕಾಪಾಡಬೇಕು. ಅಧಿಕಾರ ಬೇಕು ಅಂತ ಅಲ್ಲಿ ಎಲ್ಲೋ ಶತ್ರು ನಾಶಕ್ಕೆ ಹೋಗುವುದು. ಅಲ್ಲೂ ಕೂಡಾ ದೇವರನ್ನ ಕೇಳೋದು ಅಧಿಕಾರ ಕೊಡಪ್ಪ, ಶತ್ರು ನಾಶ ಮಾಡು ಅಂತಾನೆ ಅನ್ನೋ ಮೂಲಕ ಹೆಸರು ಹೇಳದೇ ಡಿಕೆಶಿ ಶತ್ರು ಸಂಹಾರ ಪೂಜೆ ಮಾಡಿದ್ದಾರೆ ಅಂತ ತಿಳಿಸಿದರು.

# ಚಳಿ ಅಬ್ಬರ ಜನ ತತ್ತರ



## ರಾಜ್ಯದಲ್ಲೂ ಚಳಿ ಬಲು ಜೋರು

ಕೊರೆಯುವ ಚಳಿಯಿಂದಾಗಿ ಕರ್ನಾಟಕದಾದ್ಯಂತ ಜನರಲ್ಲಿ ನಡುಗು ಉಂಟಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಥಂಡಿಯ ವಾತಾವರಣವಿದೆ. ರಾಜ್ಯದಲ್ಲಿ ಪ್ರತಿ ಬಾರಿಗಿಂತ ಹೆಚ್ಚು ಚಳಿ ವಾತಾವರಣ ನಿರ್ಮಾಣವಾಗಿದೆ. ಹಲವು ಜಿಲ್ಲೆಗಳಲ್ಲಿ ಸರಾಸರಿ ತಾಪಮಾನ ಸಾಮಾನ್ಯಕ್ಕಿಂತ 3ರಿಂದ 6 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನವೂ 1ರಿಂದ 2 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿದೆ. ಬೀದರ್ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ 3 ರಿಂದ 5 ಡಿಗ್ರಿ ಸೆಲ್ಸಿಯಸ್ ಕಡಿಮೆ ಇರುತ್ತದೆ. ಧಾರವಾಡ, ಗದಗ, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2 ರಿಂದ 4 ಡಿಗ್ರಿ ಸೆಲ್ಸಿಯಸ್ ಕಡಿಮೆ ಇರುವ ಸಾಧ್ಯತೆ ಇದೆ. ಉಳಿದ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನದಲ್ಲಿ ಹೆಚ್ಚಿನ ಬದಲಾವಣೆ ಇಲ್ಲ ಎಂದು ಹವಾಮಾನ ಇಲಾಖೆ ತನ್ನ ಮುನ್ಸೂಚನೆ ವರದಿಯಲ್ಲಿ ತಿಳಿಸಿದೆ.

### ದೆಹಲಿ-ಎನ್‌ಸಿಆರ್ ಆವರಿಸಿದ ದಟ್ಟ ಮಂಜು ವಿಮಾನ, ರೈಲು ಸಂಚಾರದಲ್ಲಿ ವ್ಯತ್ಯಯ, ಕುಸಿದ ವಾಯುಗುಣಮಟ್ಟ 100ಕ್ಕೂ ಹೆಚ್ಚು ವಿಮಾನಗಳ ಸೇವೆ ವಿಳಂಬ



• **ಉದಯವಾಹಿನಿ ನವದೆಹಲಿ**

ರಾಷ್ಟ್ರ ರಾಜಧಾನಿಯಲ್ಲಿ ದಟ್ಟ ಮಂಜು ಮುಸುಕಿದ ವಾತಾವರಣ ಮುಂದುವರೆದಿದ್ದು, ಶುಕ್ರವಾರ ಶೂನ್ಯ ವೀಕ್ಷಣಾ ಸಾಮರ್ಥ್ಯ ದಾಖಲಾಗಿದೆ. ಇದರ ಪರಿಣಾಮವಾಗಿ, ವಿಮಾನ ಹಾಗೂ ರೈಲು ಸಂಚಾರ ಬಂದ್ ಆಗಿದೆ. ಭಾರತೀಯ ಹವಾಮಾನ ಇಲಾಖೆ ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನ ಸೇರಿದಂತೆ ಉತ್ತರ ಭಾರತದ ಹಲವೆಡೆ ಸಾಧಾರಣದಿಂದ ದಟ್ಟ ಮಂಜಿನ ವಾತಾವರಣ ಮುಂದುವರೆಯಲಿದೆ ಎಂದು ಮುನ್ಸೂಚನೆ ನೀಡಿದೆ.

**1** ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಚಳಿ ಹೆಚ್ಚಳ ಜೀವನ ಸಂಪೂರ್ಣ ಅಸ್ತವ್ಯಸ್ಥ

**2** ವಿಮಾನ,ರೈಲು ಸಂಚಾರದಲ್ಲಿ ಬಾರಿ ವ್ಯತ್ಯಯ

**3** ದೆಹಲಿಯಲ್ಲಿ ೧೦೦ಕ್ಕೂ ಅಧಿಕ ವಿಮಾನಗಳ ಸಂಚಾರಕ್ಕೆ ಪರಿಣಾಮ ೨೬ಕ್ಕೂ ಅಧಿಕ ರೈಲುಗಳ ವೇಳಾಪಟ್ಟಿ ಬದಲು ವಿಮಾನ ಪ್ರಯಾಣದ ವಿಳಂಬಕ್ಕೆ ವಿಮಾನ ಯಾನ ಸಂಸ್ಥೆಗಳಿಗೆ ಕ್ಷಮೆ ಪರಿಸ್ಥಿತಿ ನೋಡಿಕೊಂಡು ಹೊರ ಬರಲು ಸಲಹೆ

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಜಾಲತಾಣದ ಪ್ರಕಾರ, ದೆಹಲಿಯಲ್ಲಿ ಶುಕ್ರವಾರ ವಾಯು ಗುಣಮಟ್ಟ ಸೂಚ್ಯಂಕ 408 ದಾಖಲಾಗುವ ಮೂಲಕ ವಾಯುಮಾಲಿನ್ಯ ಕಳಪೆ ವರ್ಗದಲ್ಲಿದೆ. ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಟ್ಟ ಮಂಜು ಆವರಿಸಿದ ಹಿನ್ನೆಲೆ ವಿಮಾನ ಹಾರಾಟದ ಮೇಲೆ ಪರಿಣಾಮ ಬೀರಿದೆ. ಫ್ಲೈಟ್‌ರಾಡರ್24 ವಿಮಾನಯಾನ ವೆಬ್ ಸೈಟ್ ಪ್ರಕಾರ, ವಿಮಾನಗಳು ಸರಿಸುಮಾರು 41 ನಿಮಿಷ ತಡವಾಗಿ ಕಾರ್ಯಾಚರಣೆ ಮಾಡಿವೆ. ಕಳೆದ ವಾರವೂ ಕೂಡ ಉತ್ತರ ಭಾರತದಲ್ಲಿ ದಟ್ಟ ಮಂಜಿನ ವಾತಾವರಣಲಿತ್ತು. ಅನೇಕ ವಿಮಾನ ಮತ್ತು ರೈಲು ಸೇವೆಯಲ್ಲಿ ಅಸ್ತವ್ಯಸ್ತವಾಗಿತ್ತು.

ದಟ್ಟವಾದ ಮಂಜಿನಿಂದಾಗಿ ಗೋಚರತೆ ಕಾಣದ ಪರಿಸ್ಥಿತಿಯಿಂದ ದೆಹಲಿ ವಿಮಾನ ನಿಲ್ದಾಣದಲ್ಲಿ 100 ಕ್ಕೂ ಹೆಚ್ಚು ವಿಮಾನಗಳ ಸೇವೆ ವಿಳಂಬಗೊಂಡಿದೆ.

ಇಂಡಿಗೋ ಸಂಸ್ಥೆ ಎಕ್ಸ್ ನಲ್ಲಿ ಬೆಳಿಗ್ಗೆ 5.04 ಕ್ಕೆ ಪೋಸ್ಟ್‌ನಲ್ಲಿ, ವಿಮಾನ ನಿಲ್ದಾಣಕ್ಕೆ ಹೋಗುವ ಮೊದಲು ವಿಮಾನದ ಸ್ಥಿತಿಯನ್ನು ನವೀಕರಿಸಲು ಪ್ರಯಾಣಿಕರನ್ನು ಕೇಳಿದೆ.ದಟ್ಟವಾದ ಮಂಜಿನಿಂದಾಗಿ, ವಿಮಾನ ನಿರ್ಗಮನದ ಮೇಲೆ ಪರಿಣಾಮ ಬೀರಿದೆ. ವಿಮಾನಗಳು ದೆಹಲಿ



**ವಾಹನ ಸಂಚಾರಕ್ಕೆ ಎಫೆಕ್ಟ್, ಟ್ರಾಫಿಕ್ ಜಾಮ್**

ಉತ್ತರ ಭಾರತದಲ್ಲಿ ತೀವ್ರ ಚಳಿ ವಾತಾವರಣ ಮುಂದುವರಿದಿರುವ ನಡುವೆಯೇ ಶುಕ್ರವಾರ ದೆಹಲಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ದಟ್ಟವಾದ ಮಂಜು ಮುಸುಕಿದ ವಾತಾವರಣದಿಂದಾಗಿ ಎದುರಿನ ರಸ್ತೆಯೇ ಕಾಣಿಸದಂತಾಗಿ ವಾಹನ ಸವಾರರು ಪರದಾಡುವಂತಾಗಿದೆ. ಅಲ್ಲದೇ ಝೀರೋ ವಿಸಿಬಿಲಿಟಿಯಿಂದಾಗಿ 270ಕ್ಕೂ ಅಧಿಕ ವಿಮಾನಗಳು ನಿಲ್ದಾಣಕ್ಕೆ ವಿಳಂಬವಾಗಿ ಆಗಮಿಸಿರುವುದಾಗಿ ವರದಿ ತಿಳಿಸಿದೆ. ನೀಡಲಾಗಿದೆ.

**200ಕ್ಕೂ ಅಧಿಕ ವಿಮಾನಗಳು ವಿಳಂಬ**

ದಟ್ಟ ಮಂಜು ಕವಿದ ವಾತಾವರಣದಿಂದ ವಿಮಾನ, ರೈಲು ಸಂಚಾರ ಹಾಗೂ ವಾಹನ ಸವಾರರ ಮೇಲೆ ಪರಿಣಾಮ ಬೀರಿರುವುದಾಗಿ ವರದಿ ವಿವರಿಸಿದೆ. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ದಾಖಲೆ ಪ್ರಮಾಣ ಝೀರೋ ವಿಸಿಬಿಲಿಟಿ ದಾಖಲಾಗಿತ್ತು. ದಟ್ಟ ಮಂಜು ಕವಿದ ವಾತಾವರಣದ ಜತೆಗೆ ಭಾರತೀಯ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಇಂದಿರಾಗಾಂಧಿ ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ 200ಕ್ಕೂ ಅಧಿಕ ವಿಮಾನಗಳು ವಿಳಂಬವಾಗಿದ್ದು, 5 ವಿಮಾನ ಸಂಚಾರ ರದ್ದುಪಡಿಸಲಾಗಿದೆ ಎಂದು ವರದಿ ತಿಳಿಸಿದೆ.

ವಿಮಾನ ನಿಲ್ದಾಣದಿಂದ ಇಳಿಯಲು ಮತ್ತು ನಿರ್ಗಮಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಲಾಗಿತ್ತು. ಫ್ಲೈಟ್ ಟ್ರ್ಯಾಕಿಂಗ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ, ವಿಮಾನ ನಿಲ್ದಾಣದಲ್ಲಿ 100 ಕ್ಕೂ ಹೆಚ್ಚು ವಿಮಾನಗಳು ವಿಳಂಬವಾಗಿವೆ. ದೆಹಲಿ ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್ ಅಪ್‌ಡೇಟ್ ಮಾಡಲಾದ ವಿಮಾನ ಮಾಹಿತಿಗಾಗಿ ಸಂಬಂಧಿಸಿದ ವಿಮಾನಯಾನ ಸಂಸ್ಥೆಗಳನ್ನು ಸಂಪರ್ಕಿಸಲು ಪ್ರಯಾಣಿಕರನ್ನು ಕೇಳಿದೆ ಮತ್ತು ಪ್ರಯಾಣಿಕರಿಗೆ ಉಂಟಾದ ಯಾವುದೇ ಅನಾನುಕೂಲತೆಗಾಗಿ ವಿಷಾದಿಸಿದೆ. ದೆಹಲಿಯಲ್ಲಿ ಮಂಜಿನ ಪರಿಸ್ಥಿತಿಗಳು ಗೋಚರತೆಯನ್ನು ಕಡಿಮೆ ಮಾಡುವುದರಿಂದ ಮತ್ತು ದಟ್ಟಣೆಯನ್ನು ನಿಧಾನಗೊಳಿಸುವುದರಿಂದ ವಿಮಾನ ನಿಲ್ದಾಣಕ್ಕೆ ನಿಮ್ಮ ಪ್ರಯಾಣಕ್ಕಾಗಿ ಹೆಚ್ಚುವರಿ ಸಮಯ ಯೋಜಿಸಲು ನಾವು ಬಲವಾಗಿ ಶಿಫಾರಸು ಮಾಡುತ್ತೇವೆ. ರಾಷ್ಟ್ರ ರಾಜಧಾನಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿದಿನ ಸುಮಾರು 1,300 ವಿಮಾನಗಳ ಚಲನೆಯನ್ನು ನಿರ್ವಹಿಸುತ್ತದೆ.

## ರಾಜ್ಯ ಸಾವಿನ ಮನೆಯಾಗಿದ್ದರೂ, ಸರ್ಕಾರ ಸಂಬಂಧವಿಲ್ಲದಂತೆ ಡಿನ್ನರ್ ಪಾರ್ಟಿ ಮಾಡ್ತಿದೆ: ಸಿ.ಟಿ ರವಿ

• **ಉದಯವಾಹಿನಿ, ವಿಜಯಪುರ**

ರಾಜ್ಯ ಸಾವಿನ ಮನೆಯಾಗಿದ್ದರೂ ಸರ್ಕಾರ ಸಂಬಂಧವಿಲ್ಲದ ರೀತಿಯಲ್ಲಿದೆ. ಜೊತೆಗೆ ಡಿನ್ನರ್ ಪಾರ್ಟಿ ನಡೆಸಿದ್ದಾರೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಕಿಡಿಕಾರಿದ್ದಾರೆ.

ಜಿಲ್ಲೆಯಲ್ಲಿ ಮಾತನಾ ಡಿದ ಅವರು, ರಾಜ್ಯ ಸರ್ಕಾರ ಸಾವಿನ ಮನೆಯಾಗಿದೆ. ಬಾಣಂತಿಯರ ಸಾವು, ಹಸುಗೂಸುಗಳ ಸಾವಿಗೆ ಕಾರಣ ಗೊತ್ತಾಗುತ್ತಿಲ್ಲ. ರೈತರ ಆತ್ಮಹತ್ಯೆಗಳಾಗುತ್ತಿವೆ. ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಆಳುವ ಸರ್ಕಾರಕ್ಕೆ ಇದೆಲ್ಲ ಕಾಣುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು. ರೋಮ್ ದೇಶ ಹೊತ್ತಿ ಉರಿಯುವಾಗ ದೊರೆ ಪಿಟೀಲು ನುಡಿಸುತ್ತಿ ದ್ದನಂತೆ ಎಂಬ ಗಾದೆ ಮಾತಿನಂತೆ ರಾಜ್ಯ ಸಾವಿನ ಮನೆಯಾಗಿದ್ದರೂ ಸರ್ಕಾರ ಸಂಬಂಧವಿಲ್ಲದ ರೀತಿಯಲ್ಲಿದೆ. ಇವರು ಡಿನ್ನರ್ ಪಾರ್ಟಿ ನಡೆಸಿದ್ದಾರೆ.

ಕರುಣೆ ಇದ್ದರೆ ಬಾಣಂತಿಯರ ಸಾವಿಗೆ ಕಾರಣ ಕಂಡುಕೊಳ್ಳಲಿ. ಸಾವಿನ ಸರಣಿ ಇನ್ನೂ ನಿಂತಿಲ್ಲ. ಸಾವುಗಳಿಗೆ ಆಸ್ಪತ್ರೆ, ಔಷಧ, ವೈದ್ಯರು ಯಾರು ಕಾರಣ ಎಂಬುವುದನ್ನು ಕಂಡು ಹಿಡಿಯಲಿ ಎಂದರು.ಬಾಣಂತಿಯರ ಸಾವಿನ ಕುರಿತು ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತಜ್ಞರ ಸಮಿತಿ ಆಗಲಿ. ಸರ್ಕಾರದ ಸಚಿವರ ಮೇಲೆ ನಮಗೆ ನಂಬಿಕೆಯಿಲ್ಲ. ಎಕ್ಸ್ಪರ್ಟ್ ಕಮಿಟಿ ತನಿಖೆ ಮಾಡಲಿ ಎಂದು ಹೇಳಿದರು.

> **ಅತಿಮಾನುಷ ಶಕ್ತಿಗಳು ಸರ್ಕಾರಿ ಆಸ್ಪತ್ರೆ ಗಳಲ್ಲಿ ಬಾಣಂತಿಯರ ಸಾವಿಗೆ ಕಾರಣವಾ? ಔಷಧಿ ಕಾರಣವಾಗಿದ್ದರೆ ಪೂರೈಕೆದಾರರ ಮೇಲೆ ಕ್ರಮವಾಗಲಿ. ವೈದ್ಯರಾಗಿದ್ದರೆ ಅವರ ಮೇಲೂ ಕ್ರಮವಾಗಲಿ. ಎರಡನೇ ಬಾರಿ ಸಿಎಂ ಆಗಿರುವ ಸಿದ್ದರಾಮಯ್ಯ ಕಲ್ಲಿನ ಹೃದಯದವರಾಗಿದ್ದಾರೆ.**



## ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆ ಸಿದ್ದಪಡಿಸಿ

• **ಉದಯವಾಹಿನಿ, ಬೆಂಗಳೂರು**


ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಆಧರಿಸಿ 2025-26ನೇ ಸಾಲಿನ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧ ಪಡಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸೂಚಿ ಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

**ಕ್ರಿಯಾ ಯೋಜನೆ ಅಳವಡಿಕೆ**

ಕರ್ನಾಟಕ ಗ್ರಾಮ ಸ್ವರಾಜ್, ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 309(ಬಿ) ಅಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಮುಂದಿನ ಐದು ವರ್ಷದ ದೂರದೃಷ್ಟಿ ಯೋಜನೆಯನ್ನು ಗ್ರಾಮ ಯೋಜನಾ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಯೋಜನಾ ಸಮಿತಿಗಳ ಸಹಕಾರದೊಂದಿಗೆ ಸಿದ್ಧಪಡಿಸಿದೆ. ದೂರದೃಷ್ಟಿ ಯೋಜನೆಯಲ್ಲಿ 9 ಆದ್ಯತಾ ವಲಯಗಳನ್ನು ಗುರುತಿಸಲಾಗಿದ್ದು ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಗಳನ್ನು ಯೋಜನೆಯಲ್ಲಿ ಗುರುತಿಸಿ 2023- 24ನೇ ಸಾಲಿ ನಿಂದ 2028-29ನೇ ಸಾಲಿನವರೆಗೆ ದೂರದೃಷ್ಟಿ ಯೋಜ ನೆಯನ್ನು ಸಿದ್ಧಪಡಿಸಲಾಗಿದೆ. 2025-26ನೇ ಸಾಲಿನ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಪಾಲಿಸಬೇಕೆಂದು ಸಚಿ ವರು ಹೇಳಿದ್ದಾರೆ.

ಗ್ರಾಮ ಪಂಚಾಯಿತಿಯ ಎಲ್ಲಾ ಅನುದಾನದ ಮೂಲಗಳು ಒಳಗೊಂಡಂತೆ ಒಂದು ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವುದು. ಗ್ರಾಮ ಪಂ. ದೂರದೃಷ್ಟಿ ಯೋಜನೆಯಲ್ಲಿ ಇರುವಂತೆ ಗ್ರಾಮ ಪಂಚಾಯಿತಿ ಹಂತದ ಇತರೆ ಅಭಿವೃದ್ಧಿ ಇಲಾಖೆ ಗಳ ಅನುದಾನ, ಯೋಜನೆಗಳು, ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು, ಗ್ರಾಮ ಪಂಚಾಯಿತಿ ಹಂತದಲ್ಲಿ ಕೈಗೊಳ್ಳಲಾಗುವ ಕಡಿಮೆ ಖರ್ಚಿನಲ್ಲಿ ನಿರ್ವಹಿಸುವ ಚಟುವಟಿಕೆಗಳು, ವೆಚ್ಚಗಳನ್ನು ಭರಿಸದೆ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ಗುರುತಿಸುವುದು.

> **ಈ ದೂರದೃಷ್ಟಿ ಯೋಜನೆ ಆಧರಿಸಿ ಗ್ರಾಮ ಪಂಚಾಯಿತಿಗಳು ಸಮಗ್ರ ಭಾಗವಹಿಸುವಿಕೆಯನ್ನು ಒಳಗೊಂಡ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಬೇಕು, ಅದಕ್ಕೂ ಮುನ್ನ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವ ಸಲುವಾಗಿ ಸರಣಿ ಚಟುವಟಿಕೆಗಳನ್ನು ಅಭಿಯಾನದ ರೂಪದಲ್ಲಿ ಹಮ್ಮಿಕೊಳ್ಳಬೇಕು**
> -ಪ್ರಿಯಾಂಕ್ ಖರ್ಗೆ, ಸಚಿವ



## ರಾಜ್ಯದಲ್ಲಿ ಪ್ರತಿಯೊಂದಕ್ಕೂ ರೇಟ್ ಫಿಕ್ಸ್ ಆಗಿದೆ: ಎಚ್‌ಡಿಕೆ ಗಂಭೀರ ಆರೋಪ

### • ಕೆಂಪಣ್ಣ ಅವರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಪಡೆದು ಕೊಳ್ಳಬೇಕಿತ್ತಲ್ಲವೇ?

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಪ್ರತಿಯೊಂದಕ್ಕೆ ರೇಟ್ ಕಾರ್ಡ್ ಫಿಕ್ಸ್ ಆಗಿದೆ. ಕಂದಾಯ ಇಲಾಖೆಯಲ್ಲಿ ಎಲ್ಲಾ ಪೋಸ್ಟ್‌ಗಳಿಗೂ ರೇಟ್ ನಿಗದಿ ಮಾಡಲಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದರು. ಬೆಂಗಳೂರಿನಲ್ಲಿ ಶನಿವಾರ ಬೆಳಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, 60% ಕಮೀಷನ್ ಆರೋಪವನ್ನು ಪುನರುಚ್ಚರಿಸಿದರು. 60% ಕಮೀಷನ್ ಆರೋಪಕ್ಕೆ ಕುಮಾರಸ್ವಾಮಿ ದಾಖಲೆ ಕೊಡಲಿ ಎಂದು ಹೇಳುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದ ಮುಖಂಡರು, ಗುತ್ತಿಗೆದಾರರೇ ಪರ್ಸಂಟೇಜ್ ಆರೋಪ ಮಾಡುತ್ತಿದ್ದಾರೆ. ಅವರನ್ನು ಪರ್ಸಂಟೇಜ್ ಕೇಳದಿದ್ದರೆ ಅವರು ಯಾಕೆ ಆರೋಪ ಮಾಡುತ್ತಿದ್ದರು. ಸರ್ಕಾರ ಅವರನ್ನೇ ಕೇಳಿ ದಾಖಲೆ ಪಡೆದುಕೊಳ್ಳಬೇಕು ಎಂದರು ಕೇಂದ್ರ ಸಚಿವರು. ಸಿದ್ದರಾಮಯ್ಯ ಅವರು ಮಹಾನ್ ನಾಯಕರು. ಪೇ ಸಿಎಂ ಅಂತ ಪೋಸ್ಟರ್ ಅಂಟಿಸಲು ಹೋಗಿದ್ದರು. ಅವರು ಇಲ್ಲಿಯವರೆಗೆ ಯಾವ ದಾಖಲೆ ಇಟ್ಟಿದ್ದಾರೆ ಜನರ ಮುಂದೆ. ಕೆಂಪಣ್ಣ ಹೇಳಿದರು.

ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ, ಕೆಂಪಣ್ಣ ಅವರಿಂದ ಸಿದ್ದರಾಮಯ್ಯ ಅವರು ದಾಖಲೆ ಪಡೆದು ಕೊಳ್ಳಬೇಕಿತ್ತಲ್ಲವೇ? ಈಗ ಕಂಟ್ರಾಕ್ಟರ್‌ಗಳೇ 60% ವಸೂಲಿ ಬಗ್ಗೆ ಆರೋಪ ಮಾಡುತ್ತಿದ್ದಾರೆ. ಅದಕ್ಕಿಂತ ಸಾಕ್ಷಿ ಬೇಕಾ ಇವರಿಗೆ? ಈ ಆಟ ಸರಕಾರ ಬಿಡಬೇಕು ಎಂದು ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

**ಕೃಷ್ಣ ಬೈರೇಗೌಡ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ:** ಮಗ ಸೋತಿರುವುದಕ್ಕೆ ಹತಾಶರಾಗಿ ಕುಮಾರಸ್ವಾಮಿ 60% ಆರೋಪ ಮಾಡುತ್ತಿದ್ದಾರೆ ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ. ನಾನು ಮಗ ಸೋತಿರುವುದಕ್ಕೆ ಹತಾಶನಾಗಿದ್ದೇನೋ ಇಲ್ಲವೋ. ಎಂಬುದು ಇರಲಿ. ಅದನ್ನು ಬಿಟ್ಟು ಮೊದಲು 60% ಕಮೀಷನ್ ಬಗ್ಗೆ ಉತ್ತರ ಹೇಳಲಿ ಎಂದು ಸಚಿವರು ಸವಾಲು ಹಾಕಿದರು.

ಕಂದಾಯ ಇಲಾಖೆ ಸತ್ಯ ಮಾರ್ಗದಲ್ಲಿ ನಡೆಯುತ್ತಿದೆಯಾ? ಬೆಂಗಳೂರು ಪೋಸ್ಟ್‌ಗೆ ಎಷ್ಟು ದುಡ್ಡು ತೆಗೆದುಕೊಳ್ಳುತ್ತಿದ್ದೀರಿ? ಎಷ್ಟು ರೇಟ್ ಫಿಕ್ಸ್ ಮಾಡಿಕೊಂಡಿದ್ದೀರಾ? ಆ ಹಣ ಯಾರು ಯಾರಿಗೆ ಹೋಗುತ್ತದೆ? ಏನೇನು ದಂಧೆ ನಡೆಸುತ್ತಿದ್ದೀರಿ ಎನ್ನುವುದು ನಮಗೆ ಗೊತ್ತಿಲ್ಲವಾ? ಎಂದು ಕಂದಾಯ ಇಲಾಖೆಯಲ್ಲಿ ಅಕ್ರಮ ನಡೆಯುತ್ತಿದೆ ಎಂದು ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು. ಡಿ.ಕೆ.ಶಿವಕುಮಾರ್ ತಮಿಳುನಾಡಿನಲ್ಲಿ ಶತ್ರು ಸಂಹಾರ ಪೂಜೆ ವಿಚಾರದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಕೇಂದ್ರ ಸಚಿವರು; ಎಲ್ಲರನ್ನೂ ದೇವರೇ ಕಾಪಾಡಬೇಕು. ಅಧಿಕಾರ ಬೇಕು ಎಂದು ದೇವರ ಮೊರೆ ಹೋಗಿದ್ದು ಸಾಮಾನ್ಯ. ಆದರೆ, ಎಲ್ಲೋ ಶತ್ರುನಾಶಕ್ಕೆ ಹೋಗುವುದು ನನಗೆ ಗೊತ್ತಿಲ್ಲ ಎಂದರು. ಇವತ್ತು ಲಕ್ಷಾಂತರ ಜನ ವೈಕುಂಠ ಏಕಾದಶಿ. ವೈಕುಂಠದ ಬಾಗಿಲು ತೆರೆಯುತ್ತದೆ ಎನ್ನುವ ನಂಬಿಕೆ ಇದೆ. ದೇವರಲ್ಲಿ ಪ್ರಾರ್ಥನೆ ಮಾಡಿ, ಎಲ್ಲರಿಗೂ ಒಳ್ಳೆಯದು ಮಾಡು ತಂದೆ ಎಂದು ಬೇಡಿಕೊಂಡೆ ಎಂದು ಅವರು ಹೇಳಿದರು.

> **ನಾನು ಸತ್ಯ ಹರಿಶ್ಚಂದ್ರ ಎಂದು ಎಲ್ಲೂ ಹೇಳಿಲ್ಲ. ಇವತ್ತಿನ ರಾಜಕಾರಣಕ್ಕೆ ದುಡ್ಡು ಬೇಕು. ಪ್ರೀತಿ ವಿಶ್ವಾಸದಿಂದ ನಾವು ಕೆಲಸ ಮಾಡಿದಾಗ ಚುನಾವಣೆ ಸಮಯದಲ್ಲಿ ಯಾರೋ ನಾಲ್ವರು ಸಹಾಯ ಮಾಡುತ್ತಾರೆ. ಆದರೆ ಅಧಿಕಾರ ಇಟ್ಟುಕೊಂಡು ಪ್ರತಿದಿನ ನನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ. ಈ ಸರಕಾರ ಪ್ರತಿಯೊಂದಕ್ಕೂ ತನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿದೆ.**



**ಸರಕಾರ ಸಹಿ ಮಾರಾಟಕ್ಕೆ ಇಟ್ಟಿದೆ**

ನಾನು ಕೂಡ ಎರಡು ಸಿಎಂ ಆಗಿ ಅಧಿಕಾರ ನಡೆಸಿದ್ದೇನೆ. ನಾನು ಹರಿಶ್ಚಂದ್ರ ಎಂದು ಎಲ್ಲೂ ಹೇಳಿಲ್ಲ. ವಿಧಾನಸಭೆಯಲ್ಲಿಯೇ ಈ ಮಾತು ಹೇಳಿದ್ದೇನೆ. ಚುನಾವಣೆ ನಡೆಸಬೇಕಾದರೆ ಇನ್ನೊಬ್ಬರ ಹತ್ತಿರ ಕೈ ಚಾಚಲೇಬೇಕು. ಆದರೆ ನಾನು ಅಧಿಕಾರ ನಡೆಸುವಾಗ ನನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ. ಈ ಸರಕಾರ ಪ್ರತಿಯೊಂದಕ್ಕೂ ಸಹಿಯನ್ನು ಮಾರಾಟಕ್ಕೆ ಇಟ್ಟಿದೆ. ಪ್ರತಿಯೊಂದಕ್ಕೂ ಲೂಟಿ ಹೊಡೆದುಕೊಂಡು ಕೂತಿದ್ದಾರೆ. ಈ ಸರಕಾರದಲ್ಲಿ ರೇಟ್ ಕಾರ್ಡ್ ಮೊದಲೇ ಫಿಕ್ಸ್ ಆಗಿ ಹೋಗಿದೆ. ನಾನು ಪ್ರಾರಂಭದಲ್ಲೇ ಈ ಸರ್ಕಾರದ ರೇಟ್ ಕಾರ್ಡ್ ಬಗ್ಗೆ ಹೇಳಿದ್ದೆ ಎಂದು ಕುಮಾರಸ್ವಾಮಿ ಅವರು ಕಿಡಿಕಾರಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹7,947/Gram24ct ₹7,285/Gram22ct ಬೆಳ್ಳಿ: ₹93.50/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಅಯ್ಯಪ್ಪಸ್ವಾಮಿ ಉಳಿಸಲಿಲ್ಲ

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಅಡುಗೆ ಸಿಲಿಂಡರ್ ಸ್ಫೋಟಗೊಂಡು ಎಂಟು ಜನ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಮೃತಪಟ್ಟರು. ಇದಕ್ಕೆ ಜಾಲತಾಣದ ಕುಹಕಿಯೊಬ್ಬ ಮಾಲಾಧಾರಿಗಳನ್ನು ಅಯ್ಯಪ್ಪ ಸ್ವಾಮಿ ಉಳಿಸಲಿಲ್ಲ ಎಂದು ಕುಟುಕಿದ್ದ. ಸ್ವಾಮಿ ಭಗವಂತ ಪರಮಾತ್ಮ ದೇವರು ಇರುವುದೇ ನಿಜವಾಗಿದ್ದಲ್ಲಿ ಆತನ ಭಕ್ತರನ್ನು ಕಾಪಾಡಬೇಕಿತ್ತು. ಕಾಪಾಡಲಿಲ್ಲ ಎಂದ ಬಳಿಕ ಆತ ಇರುವನೆಂಬುದು ಸುಳ್ಳು ಎಂಬುದು ಈ ಕುಹಕಿಗಳ ವಾದ. ಧರ್ಮಾಭಿಮಾನಶೂನ್ಯರು, ಪರ ಧರ್ಮವಿರೋಧಿಗಳು ಈ ಗುಂಪಿಗೆ ಸೇರುತ್ತಾರೆ. ವಿಜ್ಞಾನದ ಒಂದು ಪ್ರಗತಿ ಸಿಲಿಂಡರ್. ಅದೇಕೆ ಸ್ಫೋಟಗೊಂಡು ಸಾಯಿಸಬೇಕು? ವಿಜ್ಞಾನ ಏಕೆ ಕಾಪಾಡಲಿಲ್ಲ? ಮಧ್ಯಪ್ರದೇಶದ ಭೂಪಾಲ್ ಅನಿಲ ದುರಂತದಿಂದ 2259 ಜನ ಸತ್ತರು. ವಿಜ್ಞಾನ ಏಕೆ ರಕ್ಷಿಸಲಿಲ್ಲ? ಆಸ್ಪತ್ರೆಯಲ್ಲಿ ಪ್ರತಿನಿತ್ಯ ಸಾಯುತ್ತಾರೆ. ಕೊರೋನಾದಿಂದ ಲಕ್ಷ ಲಕ್ಷ ಜನ ಸತ್ತರು. ವೈದ್ಯರು ಔಷಧಿಗಳು ಏಕೆ ಬದುಕಿಸುತ್ತಿಲ್ಲ ಬದುಕಿಸಲಿಲ್ಲ? ವಿಮಾನ ಅಪಘಾತದಿಂದ ನೂರಾರು ಜನ ಸಾಯುತ್ತಾರೆ. ಕಾಪಾಡಬೇಕಾದವರು ಯಾರು? ಸಾವು ಎಲ್ಲರಿಗೂ ಇದೆ. ಏಕೆ? ಕೆಟ್ಟವರಿಗೆ ಮಾತ್ರ ಇರಬೇಕಿತ್ತಲ್ಲವೇ? ಯಾವುದಾದರೂ ಧರ್ಮದ ದೇವರು ಮುಂತಾದವರು ಸಾವನ್ನೇ ತಡೆಯಬಹುದೇ? ಸಾವು ತಂದವೆಂದು ಸಿಲಿಂಡರ್ ಬಸ್ ಕಾರ್ ಸ್ಕೂಟರ್ ವಿಮಾನ ತೊರೆಯಬೇಕೆ? ಇಂಥ ಹತ್ತು ಹಲವು ಪ್ರಶ್ನೆಗಳಿಗೆ ಈ ಕುಹಕಿಗಳಲ್ಲಿ ಉತ್ತರ ಇದೆಯೇ? ಸಾವು ಪ್ರಕೃತಿ ಧರ್ಮ. ದೇವರು ಧರ್ಮ ಅಧ್ಯಾತ್ಮ ನಮ್ಮ ಮನಶ್ಶಾಂತಿಗಾಗಿ ಆಯ್ದುಕೊಂಡ ಸಾಧನಾ ಮಾರ್ಗಗಳು.

## 20 ವರ್ಷಗಳಿಂದ ನೀವೇ ಮುಡಾ ಸದಸ್ಯರಾಗಿದ್ದೀರಿ, ಆದ್ರೂ ಯಾಕಿಂಗಾಯ್ತು?

### ವಿದ್ಯುತ್ ಸಂಪರ್ಕ, ರಸ್ತೆ, ಒಳಚರಂಡಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದು ಬಡಾವಣೆ ಅಭಿವೃದ್ಧಿ ಮಾಡುವವರ ಜವಾಬ್ದಾರಿ

• ಉದಯವಾಹಿನಿ, ಬೆಂಗಳೂರು

20 ವರ್ಷಗಳಿಂದ ನೀವೇ ಮುಡಾ ಸದಸ್ಯರಾಗಿದ್ದೀರಿ. ಆದ್ರೂ ಯಾಕಿಂಗಾಯ್ತು. ಇಷ್ಟೆಲ್ಲಾ ಅವ್ಯವಸ್ಥೆ ಯಾಕಾಯ್ತು ಎಂದು ಬಿಜೆಪಿ-ಜೆಡಿಎಸ್-ಕಾಂಗ್ರೆಸ್ ಶಾಸಕರುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಗೃಹ ಕಚೇರಿ ಕೃಷ್ಣದಲ್ಲಿ ಮೈಸೂರು ಅಭಿವೃದ್ಧಿ ಸಂಬಂಧ ಜಿಲ್ಲೆಯ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರುಗಳ ಜೊತೆ ನಡೆದ ಸಭೆಯಲ್ಲಿ ಮೇಲಿನಂತೆ ಪ್ರಶ್ನಿಸಿದರು ಮೈಸೂರಿನ ಖಾಸಗಿ ಬಡಾವಣೆಗಳಲ್ಲಿನ ಮೂಲಭೂತ ಸವಲತ್ತುಗಳ ಕೊರತೆ, ಕಸಪೆ ನಿರ್ವಹಣೆ, ನೀರು-ಒಳಚರಂಡಿ ವ್ಯವಸ್ಥೆ ಸರಿಯಾಗಿ ಇಲ್ಲದಿರುವ ಬಗ್ಗೆ ಶಾಸಕರು ಮುಖ್ಯಮಂತ್ರಿಗಳ ಗಮನಕ್ಕೆ ತಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಅಶ್ರೀ ಎಲ್ಲಾ ಪಕ್ಷದ ಶಾಸಕರು ನೀವುಗಳೇ ಸುಮಾರು 20 ವರ್ಷಗಳಿಂದ ಮುಡಾ ಸದಸ್ಯರಿದ್ದೀರಿ. ನೀವು ಗಳು ಸದಸ್ಯರಾಗಿದ್ದೂ ಯಾಕಿಂಗಾಯ್ತು? ಯಾಕೆ ಅವ್ಯವಸ್ಥೆ ಆಗಲು ಬಿಟ್ಟಿದ್ದೀರಿ ಎಂದು ಮುಖ್ಯಮಂತ್ರಿಗಳು ಕೇಳಿದರು. ಹೊಸ ಬಡಾವಣೆ ಮಾಡುವಾಗ ವಿದ್ಯುತ್ ಸಂಪರ್ಕ, ರಸ್ತೆ, ಒಳಚರಂಡಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದು ಬಡಾವಣೆ ಅಭಿವೃದ್ಧಿ ಮಾಡುವವರ ಜವಾಬ್ದಾರಿ. ಬಳಿಕ ಅದನ್ನು ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಬೇಕಾಗಿತ್ತು. ಆದರೆ ಇಂತಹ ಸುಮಾರು 950 ಬಡಾವಣೆಗಳನ್ನು ಹಸ್ತಾಂತರಿಸದೇ ಇರುವುದರಿಂದ ಸಮಸ್ಯೆ ಮುಂದುವರೆದಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬಳಿಕ ನಗರಪಾಲಿಕೆ, ಮುಡಾ ಕುರಿತಾಗಿ ಪ್ರತ್ಯೇಕ ಸಭೆ ಕರೆಯಲು ಮುಖ್ಯಮಂತ್ರಿಗಳು ಸೂಚನೆ ನೀಡಿದರು. ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಯೋಜನೆ ತ್ವರಿತವಾಗಿ ಆಗದೆ ಕುಂಟುತ್ತಿರುವ ಬಗ್ಗೆ ಕೇಂದ್ರದ ಮತ್ತು ರಾಜ್ಯದ ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಕೇಂದ್ರದ ಸಚಿವರಿಗೆ ವಿವರವಾದ ಪತ್ರ ಬರೆಯಲು ಮತ್ತು ಅನುಷ್ಠಾನ ಕುರಿತು ಕೇಂದ್ರ ವಿಮಾನಯಾನ ಸಚಿವರನ್ನು ಜ 15 ರಂದು ಭೇಟಿಯಾಗಿ ಮಾತುಕತೆ ನಡೆಸಲು ತೀರ್ಮಾನಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇಂದು ಕೃಷ್ಣಾದಲ್ಲಿ ನಡೆದ ಮೈಸೂರು ಜಿಲ್ಲಾಭಿವೃದ್ಧಿ ಕುರಿತಾದ ಸಭೆಯ ಇತರೆ ಮುಖ್ಯಾಂಶಗಳು ವಿಮಾನ ನಿಲ್ದಾಣ ವಿಸ್ತರಣೆ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಪೂರ್ಣಗೊಳಿಸಲಿದೆ. ಯೋಜನೆಯಡಿ ಇನ್ನೂ 46 ಎಕ್ರೆ ಭೂಸ್ವಾಧೀನ ಆಗಬೇಕಿದೆ. ಈಗಾಗಲೇ 111 ಎಕ್ರೆ ಭೂಸ್ವಾಧೀನಕ್ಕೆ ಪಾವತಿ ಮಾಡಲಾಗಿದೆ. ಇನ್ನೂ 95 ಎಕ್ರೆ ಪಾವತಿ ಆಗಬೇಕಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಶಿಥಿಲಗೊಂಡಿರುವ ಲಾನ್ಸ್‌ಡೌನ್ ಕಟ್ಟಡವನ್ನು ತೆರವುಗೊಳಿಸಿ ಅದೇ ಮಾದರಿಯಲ್ಲಿ ಕಟ್ಟಡ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು.

ಈ ಕುರಿತಾದ ಎಲ್ಲಾ ಕಾನೂನು ತೊಡಕುಗಳನ್ನು ಬಗೆಹರಿಸಬೇಕು. ಶಿಥಿಲ ಪರಿಸ್ಥಿತಿಯಲ್ಲಿರುವ ದೇವರಾಜ ಅರಸು ಮಾರುಕಟ್ಟೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ದಳವಾಯಿ ಕೆರೆಗೆ ಕೊಳಚೆ ನೀರು ಸೇರುವುದನ್ನು ತಡೆಗಟ್ಟಿ ಅಭಿವೃದ್ಧಿಪಡಿಸಲು ರೂ. 25 ಕೋಟಿ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ. ಇದೇ ರೀತಿ ಕುಕ್ಕರಹಳ್ಳಿ ಕೆರೆ ಪುನಶ್ಚೇತನಕ್ಕೆ ಕ್ರಮ. ಇದಕ್ಕಾಗಿ ಕೆರೆ ಅಭಿವೃದ್ಧಿ ಶುಲ್ಕ ಬಳಸಿಕೊಳ್ಳಲು ಸೂಚನೆ. ಮೈಸೂರು ನಗರ ಹಾಗೂ ಹೊಸದಾಗಿ ನಿರ್ಮಿಸಲಾಗಿರುವ ಬಡಾವಣೆಗಳಲ್ಲಿ ಒಳಚರಂಡಿ ನಿರ್ಮಾಣ, ಕೊಳಚೆ ನೀರು ಸಂಸ್ಕರಣೆ ಯೋಜನೆ ಜಾರಿಗೆ ರೂ.670 ಕೋಟಿ ಡಿಪಿಆರ್ ಸಿದ್ಧಪಡಿಸಲಾಗಿದ್ದು, ಅದನ್ನು ಸಂಪುಟದ ಮುಂದೆ ಮಂಡಿಸಲು ಸೂಚನೆ.

**ಕೋಚನಹಳ್ಳಿಯಲ್ಲಿ ಕೆಐಎಡಿಬಿಗೆ 404 ಎಕ್ರೆ ಜಮೀನು ಸ್ವಾಧೀನ ಕುರಿತಾಗಿ ಈಗಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಫಿಲ್ಮ್ ಸಿಟಿ ನಿರ್ಮಾಣ ಕಾರ್ಯವನ್ನು ಆದಷ್ಟು ಬೇಗನೆ ಆರಂಭಿಸಲು ಕ್ರಮ ಕೈಗೊಳ್ಳಬೇಕು. ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಮ್ಯೂಸಿಯಂ ಆಗಿ ಪರಿವರ್ತಿಸಲು ರೂ.13 ಕೋಟಿ ಯೋಜನೆ ಸಿದ್ಧಪಡಿಸಲಾಗಿದೆ.**



**ಪ್ರಸ್ತಾವನೆ ಸಲ್ಲಿಸಲು ಸೂಚನೆ**

**ಅಂಬೇಡ್ಕರ್ ಭವನ ಕಾಮಗಾರಿಯನ್ನು ರೂ.23.83 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸುವ ಯೋಜನೆಯನ್ನು ಮುಂದಿನ ಸಚಿವ ಸಂಪುಟದಲ್ಲಿ ಮಂಡಿಸಲು ಸೂಚನೆ. ಸಾಲಿಗ್ರಾಮ ತಾಲ್ಲೂಕಿನಲ್ಲಿ 50 ಕೋಟಿ ವೆಚ್ಚದಲ್ಲಿ ತಾಲ್ಲೂಕು ಆಸ್ಪತ್ರೆ, ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣ. ಇದೇ ರೀತಿ ಪಿರಿಯಾಪಟ್ಟಣದಲ್ಲಿ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚನೆ. ಮೈಸೂರು ನಗರದಲ್ಲಿ 46 ಕಿಮೀ ವ್ಯಾಪ್ತಿಯಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಅನುಮತಿ ನೀಡಲಾಗಿದೆ.**

## ಒಕ್ಕಲಿಗರನ್ನು ಎದುರು ಹಾಕೊಂಡ್ರೆ ಸರ್ಕಾರ ಉರುಳುತ್ತೆ ಹುಷಾರ್

• ಉದಯವಾಹಿನಿ, ಬೆಂಗಳೂರು



ಕರ್ನಾಟಕದಲ್ಲಿ ಒಕ್ಕಲಿಗರನ್ನು ಎದುರು ಹಾಕಿಕೊಂಡರೆ ಎಷ್ಟು ಸರ್ಕಾರ ಬಿದ್ದಿವೆ ಎಂಬುದು ಚರಿತ್ರೆಯಿಂದ ತಿಳಿಯುತ್ತೆ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗ ಕೆಂಚಪ್ಪ ಗೌಡ ಹೇಳಿದ್ದಾರೆ.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿ ಹತ್ತು ವರ್ಷ ಆಗಿದೆ. ಜಾತಿಗಣತಿಗೆ ವರದಿ ಹಾಗೂ ಕ್ಯಾಬಿನೆಟ್‌ನಲ್ಲಿ ಸಲ್ಲಿಕೆ ಮಾಡುವ ಬಗ್ಗೆ ಸಿಎಂ ಸಿದ್ಧರಾಮಯ್ಯ ಮೊನ್ನೆ ಹೇಳಿಕೆ ಕೊಟ್ಟಿದ್ದಾರೆ. ಇವರು ಮನೆ ಮನೆ ಸಮೀಕ್ಷೆ ಸರಿಯಾಗಿ ಮಾಡಿಲ್ಲ ಎಂದು ಆರೋಪಿಸಿದರು. ಜಾತಿಗಣತಿ ಸಮೀಕ್ಷೆ ಲೋಪದೋಷದಿಂದ ಕೂಡಿದೆ. 5 ಕೋಟಿ 98 ಲಕ್ಷ ಜನ ಇದ್ದಾರೆ ಎಂದು ಸಮೀಕ್ಷೆಯಲ್ಲಿ ತಿಳಿಸಿದ್ದಾರೆ.

ಆದರೆ ಈಗ 7 ಕೋಟಿ ಜನಸಂಖ್ಯೆ ಇದೆ ಎಂದು ಮಾಧ್ಯಮದಲ್ಲಿ ಬರುತ್ತಿದೆ. 114 ಉಪಪಂಗಡಗಳು ನಮ್ಮಲ್ಲಿದೆ. ಆದರೆ ಇವುಗಳನ್ನು ಸರಿಯಾಗಿ ಪರಿಗಣಿಸಿಲ್ಲ ಎಂದು ಟೀಕಿಸಿದರು. ಭಾನುವಾರ 12 ಗಂಟೆಗೆ ಬೆಂಗಳೂರು ಕಿಮ್ಸ್ ಆವರಣದಲ್ಲಿ ರಾಜ್ಯ ಒಕ್ಕಲಿಗರ ಸಂಘದಿಂದ ಸಮುದಾಯದ ಎಲ್ಲಾ ಶಾಸಕರು ಹಾಗೂ ಸಚಿವರ ಸಭೆ ನಡೆಯಲಿದೆ.

ಆದಿ ಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಸಭೆ ನಡೆಯಲಿದ್ದು, ಸಭೆಯಲ್ಲಿ ಚಂದ್ರಶೇಖರನಾಥ ಸ್ವಾಮೀಜಿ ಹಾಗೂ ನಂಜಾವಧೂತ ಸ್ವಾಮೀಜಿ ಕೂಡ ಭಾಗಿಯಾಗಲಿದ್ದಾರೆ. ಒಕ್ಕಲಿಗ ಸ್ವಾಮೀಜಿ, ಎಲ್ಲಾ ರಾಜಕೀಯ ಮುಖಂಡರು ಸೇರಿ ಸಭೆ ನಡೆಸಲಿದ್ದೇವೆ ಎಂದರು. ಜಾತಿಗಣತಿ ಬಗ್ಗೆ ಸಿಎಂ ಪಟ್ಟು ಹಿಡಿದಿರಬಹುದು ಆದರೆ ನಮ್ಮ ನಾಯಕರ ಧ್ವನಿಯೂ ಮಂಕಾಗಿಲ್ಲ.

**ನಿರ್ಮಲಾನಂದ ಸ್ವಾಮೀಜಿ ಮುಖಂಡತ್ವದಲ್ಲಿ ಜ.12 ರಂದು ಸಭೆ ನಡೆಯಲಿದ್ದು ಮಾಜಿ ಪ್ರಧಾನಿ ದೇವೇಗೌಡ, ಕುಮಾರಸ್ವಾಮಿ, ಶಿವಕುಮಾರ್, ಆರ್.ಅಶೋಕ್ ಅಶ್ವಥ್ ನಾರಾಯಣ್ ಸೇರಿದಂತೆ ಎಲ್ಲಾ ಪಕ್ಷಗಳ ಮುಖಂಡರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.**

**ಸರ್ಕಾರಕ್ಕೆ ಎಚ್ಚರ ನೀಡಿದ್ದು ಯಾಕೆ ಗೊತ್ತಾ?**

## ನನ್ನ ರಕ್ಷಣೆಗೆ, ಮನಸ್ಸಿನ ನೆಮ್ಮದಿಗೆ ಹೋಮ ನೆರವೇರಿಸಿರುವೆ: ಡಿಸಿಎಂ

• ಉದಯವಾಹಿನಿ, ಬೆಂಗಳೂರು

ನನ್ನ ರಕ್ಷಣೆಗಾಗಿ, ಮನಸ್ಸಿನ ನೆಮ್ಮದಿಗೆ, ಸಮಾಧಾನಕ್ಕಾಗಿ ಹೋಮ ಮಾಡಿಸಿದ್ದೇನೆ. ನಾನು ಪ್ರತಿದಿನವೂ ಪೂಜೆ, ಹೋಮ, ದೇವರ ದರ್ಶನ ಮಾಡುವ ವ್ಯಕ್ತಿ ಎಂದು ಹೇಳಿದರು. ವೈಕುಂಠ ಏಕಾದಶಿಯ ಪ್ರಯುಕ್ತ ಮಲ್ಲೇಶ್ವರದ ವೆಂಕಟೇಶ್ವರ ದೇಗುಲದಲ್ಲಿ ದೇವರ ದರ್ಶನದ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದರು.ಗುರುವಾರ ತಮಿಳುನಾಡಿನ ದೇವಸ್ಥಾನಗಳಲ್ಲಿ ಹೋಮ ಮಾಡಿಸಿರುವ ಬಗ್ಗೆ ಕೇಳಿದಾಗ, ದೇವರ ಮೇಲೆ ನಂಬಿಕೆಯಿಟ್ಟಿರುವ ವ್ಯಕ್ತಿ ನಾನು. ನನಗೆ ಧರ್ಮ, ದೇವರು, ನಮ್ಮ ಆಚರಣೆಗಳ ಮೇಲೆ ನಂಬಿಕೆಯಿದೆ. ಇದರಲ್ಲಿ ಯಾವುದೇ ವಿಶೇಷವಿಲ್ಲ.

ನಾನು ಪ್ರತಿದಿನ ದೇವರಿಗೆ ನಮಸ್ಕಾರ ಮಾಡದೇ ಮನೆಯಿಂದ ಹೊರಗೆ ಬರುವುದಿಲ್ಲ. ನಾನು ಯಾವ ಶಕ್ತಿಯನ್ನು ನಂಬುತ್ತೇನೆಯೊ ಅದರ ಮೇಲೆ ಭಕ್ತಿ, ಪ್ರೀತಿ ಇದ್ದೇ ಇರುತ್ತದೆ ಎಂದು ಹೇಳಿದರು.

ಶತ್ರುಗಳ ನಾಶಕ್ಕೆ ಶಿವಕುಮಾರ್ ಹೋಮ ಮಾಡಿಸಿದ್ದಾರೆ ಎನ್ನುವ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ನಾನು ಪ್ರತಿ ದಿನವೂ ನನಗೆ ಒಳ್ಳೆಯದಾಗಲಿ ಎಂದು ಪೂಜೆ ಮಾಡುತ್ತಿರುತ್ತೇನೆ.

ನನಗೆ ಯಾರ್‍ಯಾರು ತೊಂದರೆ ಕೊಡುತ್ತಾರೆಯೋ ಅವರಿಂದ ನನಗೆ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಿರುತ್ತೇನೆ ಎಂದು ಹೇಳಿದರು.



**ವೆಂಕಟೇಶ್ವರನ ಜೊತೆ ಲಕ್ಷ್ಮಿ ಸೇರಿದಂತೆ ವೈಕುಂಠ ಏಕಾದಶಿಯ ದಿನದಂದು ಈ ರಾಜ್ಯದ ಎಲ್ಲರ ಮನೆಯಲ್ಲೂ ಐಶ್ವರ್ಯ ಹೆಚ್ಚಾಗಲಿ ಎಂದು ಪ್ರಾರ್ಥಿಸುತ್ತೇನೆ. ಇದು ನಮ್ಮ ನಂಬಿಕೆ, ಆಚಾರ ವಿಚಾರ. ಧರ್ಮೋ ರಕ್ಷತಿ ರಕ್ಷಿತಃ ಅಂದರೆ ಧರ್ಮವನ್ನು ನಾವು ಉಳಿಸಿದರೆ ಧರ್ಮವು ನಮ್ಮನ್ನು ಉಳಿಸುತ್ತದೆ. ವಿಷ್ಣುವಿನ ಸ್ವರೂಪವಾದ ವೆಂಕಟೇಶ್ವರನ ದರ್ಶನವನ್ನು ರಾಜ್ಯದ ನಾನಾ ಕಡೆಗಳಲ್ಲಿ ಜನರು ಮಾಡುತ್ತಿದ್ದಾರೆ. ಎಲ್ಲರಿಗೂ ದೇವರ ಅನುಗ್ರಹ ದೊರೆಯಲಿ' ಎಂದು ಪ್ರಾರ್ಥಿಸಿದ್ದೇನೆ**

**-ಡಿ.ಕೆ.ಶಿವಕುಮಾರ್, ಡಿಸಿಎಂ**

**ನಿಮ್ಮಿಂದಲೂ ನಮಗೆ ರಕ್ಷಣೆ ಸಿಗಲಿ**

**ಇದರಲ್ಲಿ ಯಾವುದೇ ಮುಚ್ಚುಮರೆಯಿಲ್ಲ ನೀವು (ಮಾಧ್ಯಮ)ಗಳು ಸಹ ನನಗೆ ಬೇಕಾದಷ್ಟು ತೊಂದರೆ ಕೊಡುತ್ತಿರುತ್ತೀರಿ. ಇಲ್ಲದೇ ಇರುವ ಹೊಸ ಸುದ್ದಿಗಳನ್ನು ಸೃಷ್ಟಿ ಮಾಡುತ್ತಾ ಇರುತ್ತೀರಿ. ಅದಕ್ಕಾಗಿ ನಿಮ್ಮಿಂದಲೂ ನಮಗೆ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಿರುತ್ತೇನೆ**

## ಕರ್ನಾಟಕ ಹವಾಮಾನ: ಈ ದಿನದ ಬಳಿಕ ರಾಜ್ಯದಲ್ಲಿ ಈ ಭಾಗಗಳಲ್ಲಿ ಮಳೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ತೀವ್ರ ಚಳಿಯ ಬಳಿಕ ಮತ್ತೆ ಅಕಾಲಿಕ ಮಳೆಯಾಗುವ ಸೂಚನೆಯಿದೆ. ಈ ದಿನದಿಂದ ರಾಜ್ಯದ ಈ ಭಾಗಗಳಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ. ಕರ್ನಾಟಕದಲ್ಲಿ ನಿನ್ನೆಯಿಂದ ವಿಪರೀತ ಚಳಿಯ ಜೊತೆಗೆ ಮೋಡ ಕವಿದ ವಾತಾವರಣವಿದೆ. ನಾಲ್ಕು ದಿನ ವಿಪರೀತ ಚಳಿಯಿರಲಿದ್ದು, ಅದಾದ ಬಳಿಕ ಮಳೆಯ ಮುನ್ಸೂಚನೆ ಸಿಕ್ಕಿದೆ. ಅಂದರೆ ಜನವರಿ 14 ರಿಂದ ಮಳೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಎರಡು ದಿನ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು, ಕೊಡಗು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಮಳೆಯಾಗುವ ಮುನ್ಸೂಚನೆ ದೊರೆತಿದೆ. ಆದರೆ ಉತ್ತರ ಒಳನಾಡಿನ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬೀದರ್, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿಯಲ್ಲಿ ಯಥಾಪ್ರಕಾರ ಚಳಿಯ ವಾತಾವರಣ ಮುಂದುವರಿಯಲಿದೆ.

## ಮದ್ಯದ ಬೆಲೆಯನ್ನೂ ಏರಿಸಿದ ರಾಜ್ಯ ಸರ್ಕಾರ ಬೆಲೆ ಏರಿಕೆಗಳ ಪಟ್ಟಿಗೆ ಮತ್ತೊಂದು ಸೇರ್ಪಡೆ

• ಉದಯವಾಹಿನಿ, ಬೆಂಗಳೂರು

ಬಸ್ ಟಿಕೆಟ್ ದರ ಹೆಚ್ಚಳ ಬೆನ್ನಲ್ಲೇ ರಾಜ್ಯ ಸರ್ಕಾರ ಈಗ ಬಿಯರ್ ಬೆಲೆಯನ್ನೂ ಹೆಚ್ಚಿಸಿದೆ. ಇದರೊಂದಿಗೆ ರಾಜ್ಯ ಸರ್ಕಾರದ ಬೆಲೆ ಏರಿಕೆಗಳ ಪಟ್ಟಿಗೆ ಮತ್ತೊಂದು ಸೇರ್ಪಡೆಯಾದಂತಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರ ಬಸ್ ಟಿಕೆಟ್ ದರ, ಬಸ್ ಪಾಸ್ ದರ ಹೆಚ್ಚಳ ಮಾಡಿತ್ತು. ನಂದಿನಿ ಹಾಲು, ಬೆಂಗಳೂರಿಗರಿಗೆ ನೀರಿನ ಬೆಲೆ ಏರಿಕೆಯೂ ಸದ್ಯದಲ್ಲೇ ಕಾದಿದೆ. ಇದರ ನಡುವೆ ಈಗ ಮದ್ಯ ಬೆಲೆಯೂ ಹೆಚ್ಚಳವಾದಂತಾಗಿದ್ದು ಜನರಿಗೆ ಮತ್ತೊಂದು ಬೆಲೆ ಏರಿಕೆಯ ಬರೆ ಎಳೆದಂತಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ 9 ತಿಂಗಳಲ್ಲಿ ಅಬಕಾರಿ ಇಲಾಖೆಯಿಂದ ನಿರೀಕ್ಷಿತ ಆದಾಯ ಬಂದಿಲ್ಲ. ಈ ಕಾರಣಕ್ಕೆ ಮದ್ಯದ ಬೆಲೆ ಏರಿಕೆ ಮಾಡಲಾಗಿದೆ. ಆದಾಯ ಕೊರತೆಯ ಹೊರೆ ಗ್ರಾಹಕರ ಜೇಬಿಗೆ ಬಿದ್ದಿದೆ.
**ಯಾವುದಕ್ಕೆ ಎಷ್ಟು ದರ?:** ಪ್ರೀಮಿಯಂ ಮದ್ಯದ ಬಾಟಲ್ ಗೆ 10 ರೂ.ನಿಂದ 50 ರೂ. ಹೆಚ್ಚಳವಾಗಿದೆ. ಪ್ರತೀ ಬಿಯರ್ ನಲ್ಲಿ ಆಲೋಹಾಲ್ ಅಂಶಕ್ಕೆ ಅನುಗುಣವಾಗಿ ಬೆಲೆ ಏರಿಕೆಯಾಗಿದೆ. ಆದರೆ ಭಾರತೀಯ ನಿರ್ಮಿತ ಮದ್ಯದ ಬೆಲೆ ಕಡಿಮೆಯಾಗುವ ಸಾಧ್ಯತೆಯಿದೆ. ಭಾರತೀಯ ಮದ್ಯದ ಉತ್ಪನ್ನವನ್ನು ಉತ್ತೇಜಿಸುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಜನವರಿ 20 ರಿಂದ ಹೊಸ ದರ ಜಾರಿಗೆ ಬರಲಿದೆ.

## ಗ್ಯಾರಂಟಿ ಹೊರೆ ಅಲ್ಲಾಂದ್ರೆ, ಬೆಲೆ ಏರಿಕೆ ಯಾಕೆ ಮಾಡ್ತೀರಿ: ಸಿದ್ದರಾಮಯ್ಯಗೆ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಗ್ಯಾರಂಟಿ ಯೋಜನೆಗಳಿಂದಾಗಿ ಕರ್ನಾಟಕ ಅಭಿವೃದ್ಧಿಗೆ ಹಣ ಕೊರತೆಯಾಗಿದೆಯೇ ನೋವೇ ಭಾನೋ ಇಲ್ಲ ಎಂದಿದ್ದಾರೆ ಸಿಎಂ ಸಿದ್ದರಾಮಯ್ಯ ಇದಕ್ಕೆ ನೆಟ್ಟಿಗರ ಪ್ರತಿಕ್ರಿಯೆ ಏನು ನೋಡಿ. ಸಿಎಂ ಸಿದ್ದರಾಮಯ್ಯ ತಮ್ಮ ಸೋಷಿಯಲ್ ಮೀಡಿಯಾ ಪುಟದಲ್ಲಿ ಗ್ಯಾರಂಟಿಯಿಂದಾಗಿ ಕರ್ನಾಟಕದ ಅಭಿವೃದ್ಧಿಗೆ ಅಡ್ಡಿಯಾಗುತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ. ವಿಡಿಯೋವೊಂದನ್ನು ಪ್ರಕಟಿಸಿ ಗ್ಯಾರಂಟಿ ಬಗ್ಗೆ ನೈಜ ಸತ್ಯವೇನು ಎಂದು ಬರೆದುಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗಳಿಂದಾಗಿ ಕರ್ನಾಟಕದ ಅಭಿವೃದ್ಧಿಗೆ ಯಾವುದೇ ಸಮಸ್ಯೆಯಾಗಿಲ್ಲ. ನೈಜ ವಿಚಾರವೇನೆಂದರೆ ಗ್ಯಾರಂಟಿ ನಮ್ಮ ಬಜೆಟ್ ನ ಕೇವಲ 14% ಹಣವನ್ನು ಮಾತ್ರ ವಿನಿಯೋಗ ಮಾಡುತ್ತಿದೆ. ಇದು ನಮಗೆ ಭರಿಸಲಾಗದ ಖರ್ಚೇನೂ ಅಲ್ಲ ಎಂದು ಹೇಳಿಕೊಂಡಿದ್ದಾರೆ. ಆದರೆ ಇದಕ್ಕೆ ನೆಟ್ಟಿಗರು ಮಾತ್ರ ಸಖತ್ ಕೌಂಟರ್ ಕೊಟ್ಟಿದ್ದಾರೆ. ಕರ್ನಾಟಕದ ಬಜೆಟ್ ಇರುವುದೇ 3 ಲಕ್ಷ ಕೋಟಿ. ಇದರಲ್ಲಿ 59000 ಕೋಟಿ ರೂ. ಗ್ಯಾರಂಟಿಗೆ ಬಳಕೆಯಾಗುತ್ತಿದೆ. ಅಂದರೆ ಅದು ಶೇ.14 ಅಲ್ಲ, ಶೇ.20 ಎಂದು ಒಬ್ಬರು ಕಾಮೆಂಟ್ ಮಾಡಿದ್ದಾರೆ.

ಚೆನ್ನಾಗಿ ಹೇಳಿದ್ದೀರಿ, ಒಮ್ಮೆ ಇಡೀ ಬೆಂಗಳೂರು ರೌಂಡ್ಸ್ ಬಂದು ನೋಡಿ. ಯಾವ ರಸ್ತೆ ಎಷ್ಟು ಹದಗೆಟ್ಟಿದೆ ಗೊತ್ತಾಗುತ್ತದೆ ಮುಂದೊಂದು ದಿನ ಇದೇ ಗ್ಯಾರಂಟಿ ನಮ್ಮನ್ನು ದಿವಾಳಿ ಮಾಡುತ್ತದೆ. ಆಗ ಜನಕ್ಕೆ ಬುದ್ಧಿ ಬರುತ್ತದೆ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಿಜವಾಗಿ ಗ್ಯಾರಂಟಿ ಹೊರ ಅಲ್ಲದೇ ಇದ್ದರೆ ಬೆಲೆ ಏರಿಕೆ ಯಾಕೆ ಮಾಡುತ್ತಿದ್ದೀರಿ ಎಂದೂ ಹಲವರು ಪ್ರಶ್ನೆ ಮಾಡಿದ್ದಾರೆ.

## ಗೌರವಧನ ಹೆಚ್ಚಳಕ್ಕೆ ಸಿಎಂ ಒಪ್ಪಿಗೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲ ದಿನಗಳಿಂದ ತಮ್ಮ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಮುಷ್ಕರ ನಡೆಸುತ್ತಿದ್ದಾರೆ. ಇವರ ಬೇಡಿಕೆಯಲ್ಲಿ ಒಂದಾಗಿರುವಂತ ಗೌರವಧನ ಹೆಚ್ಚಳಕ್ಕೆ ಸಿಎಂ ಸಿದ್ದರಾಮಯ್ಯ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗುತ್ತಿದೆ. ಈ ಹಿನ್ನಲೆಯಲ್ಲಿ ಆಶಾ ಕಾರ್ಯಕರ್ತೆಯರ ಮುಷ್ಕರವನ್ನು ವಾಪಾಸ್ಸು ಪಡೆದಿರುವುದಾಗಿ ತಿಳಿದು ಬಂದಿದೆ. ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ 15,000 ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸುತ್ತಿದ್ದಾರೆ. ಈಗಾಗಲೇ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಂಘಟನೆಯೊಂದಿಗೆ ಮಾತುಕತೆ ನಡೆಸಿ ಗೌರವಧನ ಹೆಚ್ಚಳದ ಭರವಸೆ ನೀಡಿದ್ದರು. ಶುಕ್ರವಾರ ಆಶಾ ಕಾರ್ಯಕರ್ತೆಯರ ಸಂಘಟನೆಯ ಮುಖಂಡರ ಜೊತೆಗಿನ ಸಿಎಂ ಸಿದ್ದರಾಮಯ್ಯ ನಡೆಸಿದಂತ ಸಂಧಾನ ಯಶಸ್ವಿಯಾಗಿದೆ. ಅವರ ಗೌರವಧನ ಹೆಚ್ಚಳಕ್ಕೆ ಸಿಎಂ ಸಿದ್ದರಾಮಯ್ಯ ಗ್ರೀನ್ ಸಿಗ್ನಲ್ ನೀಡಿದ್ದಾರೆ ಎನ್ನಲಾಗಿದೆ. ಈ ಕಾರಣದಿಂದ ಆಶಾ ಕಾರ್ಯಕರ್ತೆಯರ ಮುಷ್ಕರ ವಾಪಸ್ ಪಡೆಯಲು ನಿರ್ಧಾರಿಸಿದ್ದಾಗಿ ತಿಳಿದು ಬಂದಿದೆ.

## ಕೆರೆ ಜಾಗ ಒತ್ತುವರಿ ಮಾಡಿದ್ದವರಿಗೆ ಕೋರ್ಟ್ ಶಾಕ್

• ಉದಯವಾಹಿನಿ ಬೆಂಗಳೂರು



ಸರ್ಕಾರಿ ಕೆರೆಯ ಜಮೀನನ್ನು ಒತ್ತುವರಿ ಮಾಡಿ ಶೌಚಾಲಯ, ಮನೆಗಳನ್ನು ನಿರ್ಮಾಣ ಮಾಡಿದ್ದ 3 ಆರೋಪಿಗಳಿಗೆ 1 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಆದೇಶಿಸಿದೆ.

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೇ ನಂ.159 ರ 32 ಎಕರೆ 13 ಗುಂಟೆ ಸರ್ಕಾರಿ ಕೆರೆಯ ಜಮೀನನ್ನು ಆರೋಪಿಗಳಾದ ಎ1 - ಕೃಷ್ಣಪ್ಪ, ಎ2 - ನಂಜಪ್ಪ, ಎ3 - ರಾಮಯ್ಯ, ಎ4 - ಎಂ.ವೆಂಕಟೇಶ್, ಎ5 - ಹೆಚ್.ಎಂ.ಸುಬ್ಬಣ್ಣ, ಎ6 - ಲಕ್ಷ್ಮೀದೇವಿ, ಎ7 - ಪಿಳ್ಳಪ್ಪ ರವರುಗಳು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಶೌಚಾಲಯ ಮತ್ತು ವಾಸದ ಮನೆಗಳನ್ನು ನಿರ್ಮಾಣ ಮಾಡಿದ್ದು, ಸದರಿ ರವರ ವಿರುದ್ಧ ಬಿಎಂಟಿಎಫ್ ಪೊಲೀಸ್ ಠಾಣೆ ಮೊ.ಸಂ: 19/2012 : 192(ಎ) ಕೆ.ಎಲ್.ಆರ್ ಆಕ್ಟ್ ರೀತ್ಯಾ ದಿನಾಂಕ: 22-02-2012 ಪ್ರಕರಣ ದಾಖಲಾಗಿ ಬಿಎಂಟಿಎಫ್ ಪೊಲೀಸ್ ಠಾಣೆಯಲ್ಲಿ ತನಿಖೆ ಕೈಗೊಳ್ಳಲಾಗಿತ್ತು.

ಸದರಿ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ಸಾಕ್ಷಾಧಾರಗಳನ್ನು, ದಾಖಲಾತಿಗಳನ್ನು ಸಂಗ್ರಹಿಸಿ ಆರೋಪಿಗಳ ವಿರುದ್ಧ ಮಾನ್ಯ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ, ಬೆಂಗಳೂರು ರಲ್ಲಿ ಸದರಿ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ಘನ ನ್ಯಾಯಾಲಯವು ವಿಚಾರಣೆ ನಡೆಸಿರುತ್ತದೆ.

ಈ ವಿಚಾರಣಾ ಕಾಲದಲ್ಲಿ ಆರೋಪಿಗಳು ಸರ್ಕಾರಿ ಕೆರೆಯ ಸ್ವತ್ತನ್ನು ಅಕ್ರಮವಾಗಿ ಒತ್ತುವರಿ ಮಾಡಿ ಶೌಚಾಲಯ ಮತ್ತು ಮನೆಗಳನ್ನು ನಿರ್ಮಾಣ ಮಾಡಿರುವುದು ಧೃಡಪಟ್ಟಿದ್ದರಿಂದ ಸದರಿ ಆರೋಪಿಗಳಾದ ಎ4 - ಎಂ.ವೆಂಕಟೇಶ್, ಎ5 - ಹೆಚ್.ಎಂ.ಸುಬ್ಬಣ್ಣ ಮತ್ತು ಎಂ-ಲಕ್ಷ್ಮೀದೇವಿ ರವರುಗಳಿಗೆ 1 ವರ್ಷ ಸಜೆ ಮತ್ತು 5,000/-ರೂ ದಂಡ ವಿಧಿಸಿ, ದಿನಾಂಕ: 13-12-2024 ರಂದು ಮಾನ್ಯ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಆದೇಶಿಸಿರುತ್ತದೆ.

## ಬೆಂಗಳೂರಿನಲ್ಲಿ ರೋಗನಿರ್ಣಯ ಪ್ರಯೋಗಾಲಯ

• ಉದಯವಾಹಿನಿ, ಬೆಂಗಳೂರು

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ದಕ್ಷಿಣ ಭಾರತದಲ್ಲಿ ಮೊದಲ ಸಾಂಕ್ರಾಮಿಕ ರೋಗ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯಗಳನ್ನು ಸ್ಥಾಪಿಸಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು ಆಯ್ಕೆ ಮಾಡಿದೆ.

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಈ ರೀತಿಯ ಕೇಂದ್ರ ಬೆಂಗಳೂರಿನಲ್ಲಿ ಆರಂಭವಾಗಲಿದ್ದು, ಇದರಿಂದ ರಾಜ್ಯದಲ್ಲಿ ಸಂಶೋಧನೆ ಕ್ಷೇತ್ರಕ್ಕೆ ನೆರವಾಗಲಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ.
**ಪ್ರಯೋಗಾಲಯದ ಪ್ರಯೋಜನಗಳು:** ಕೇಂದ್ರ ಸರ್ಕಾರವು ವಿವಿಧ ರಾಜ್ಯಗಳ ವೈದ್ಯಕೀಯ ಕಾಲೇಜುಗಳಲ್ಲಿ ಸಾಂಕ್ರಾಮಿಕ ರೋಗ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯಗಳನ್ನು ಸ್ಥಾಪಿಸಲು ಮುಂದಾಗಿದೆ. ಬ್ಯಾಕ್ಟೀರಿಯಾಲಜಿ, ಮೈಕಾಲಜಿ ಮತ್ತು ಪ್ಯಾರಾಸಿಟಾಲಜಿಗೆ ಸಂಬಂಧಿಸಿದಂತೆ ವೈರಸ್ ಸಂಶೋಧನೆ, ರೋಗನಿರ್ಣಯ ಪ್ರಯೋಗಾಲಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ರೋಗ ನಿರ್ಣಯದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಇದರಿಂದ ಸಾಧ್ಯವಾಗಲಿದೆ, ಈ ನಿಟ್ಟಿನಲ್ಲಿ ನಮ್ಮಲಿನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಲಾಗಿದೆ.

ಉದಯವಾಹಿನಿ ಚಿತ್ರ



## ನಟ ದರ್ಶನ್ ಗೆ ಮತ್ತೊಂದು ರಿಲೀಫ್

• ಉದಯವಾಹಿನಿ, ಬೆಂಗಳೂರು

ನಟ ದರ್ಶನ್ ನ್ಯಾಯಾಂಗ ವ್ಯಾಪ್ತಿಯನ್ನು ಬಿಟ್ಟು ಬೇರೆಡೆಗೆ ತೆರಳದಂತೆ ಷರತ್ತು ವಿಧಿಸಿ ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ಜಾಮೀನು ನೀಡಿತ್ತು. ಇಂದು ನಟ ದರ್ಶನ್‌ಗೆ ಕೊಂಚ ರಿಲೀಫ್ ಎನ್ನುವಂತೆ ಐದು ದಿನಗಳ ಕಾಲ ಮೈಸೂರಿಗೆ ತೆರಳೋದಕ್ಕೆ ಕೋರ್ಟ್ ಅನುಮತಿ ನೀಡಿದೆ.

ಶುಕ್ರವಾರ ಬೆಂಗಳೂರಿನ ಸಿಸಿಹೆಚ್ 57ನೇ ನ್ಯಾಯಾಲಯದಲ್ಲಿ ಮೈಸೂರಿಗೆ ತೆರಳೋದಕ್ಕೆ ಅವಕಾಶ ನೀಡುವಂತೆ ನಟ ದರ್ಶನ್ ಅವರು ಸಲ್ಲಿಸಿದ್ದಂತ ಅರ್ಜಿಯ ವಿಚಾರಣೆ ನಡೆಸಲಾಯಿತು. ಮೈಸೂರಿನ ದೇವಸ್ಥಾನಗಳಿಗೆ ತೆರಳು ಕೋರ್ಟ್ ನಟ ದರ್ಶನ್ ಅವರಿಗೆ ಅನುಮತಿ ನೀಡಿದೆ. ಜನವರಿ 12ರಿಂದ 5 ದಿನಗಳ ಕಾಲ ಮೈಸೂರಿಗೆ ತೆರಳಲು ಕೋರ್ಟ್ ಅನುಮತಿ ನೀಡಿದೆ. ಇನ್ನೂ ಆರೋಪಿ ಪವಿತ್ರಾ ಗೌಡ ಅವರ ರಾಜರಾಜೇಶ್ವರಿ ನಗರದಲ್ಲಿರುವಂತ ರೆಡ್ ಕಾರ್ಪೆಂಟ್ ಶೋರೂಂಗೆ ಮುಂಬೈ, ದೆಹಲಿಗೆ ವ್ಯವಹಾರಿಕ ಉದ್ದೇಶಕ್ಕೆ ತೆರಳಿ ವಸ್ತುಗಳನ್ನು ಖರೀದಿಸಿ ತರಲು ಕೋರ್ಟ್ ಅನುಮತಿ ನೀಡಿದೆ. ರೆಡ್ ಕಾರ್ಪೆಟ್ ಶೋರೂಂಗೆ ಐಟಂ ತರಲು ಅವಕಾಶವನ್ನು ನೀಡಿದೆ.

## ಬೆಂಗಳೂರಿನಲ್ಲಿ ಡ್ರೋನ್, ಬಲೂನ್‌ಗಳಿಗೆ ನಿಷೇಧ

• ಉದಯವಾಹಿನಿ, ಬೆಂಗಳೂರು

ಏರೋ ಇಂಡಿಯಾ 2025 ಕಾರ್ಯಕ್ರಮದ ಸಂದರ್ಭದಲ್ಲಿ ಫೆಬ್ರವರಿ 10 ರಿಂದ 14 ರವರೆಗೆ ಬೆಂಗಳೂರಿನಲ್ಲಿ ಎಲ್ಲಾ ಸಾಂಪ್ರದಾಯಿಕ ವೈಮಾನಿಕ ವೇದಿಕೆಗಳ ಹಾರಾಟವನ್ನು ಕರ್ನಾಟಕ ಸರ್ಕಾರ ನಿಷೇಧಿಸಿದೆ. ಡ್ರೋಣ್, ಪ್ಯಾರಾಗ್ಲೈಡರ್‌ಗಳು, ಬಲೂನ್‌ಗಳಂತಹ ಉಪ- ಸಾಂಪ್ರದಾಯಿಕ ವೈಮಾನಿಕ ವೇದಿಕೆಗಳನ್ನು ನಿಷೇಧಿಸಲಾಗಿದೆ.

ಏಕೆಂದರೆ ಅವುಗಳನ್ನು ಕಣ್ಗಾವಲು ಅಥವಾ ದಾಳಿಗೆ ಬಳಸಬಹುದು. ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾಂ ಅಡಿಯಲ್ಲಿ ಭದ್ರತಾ ಕಾರಣಗಳನ್ನು ಉಲ್ಲೇಖಿಸಿ ಈ ಆದೇಶ ಹೊರಡಿಸಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಉನ್ನತ ಮಟ್ಟದ ಕಾರ್ಯಕ್ರಮದ ಸಂದರ್ಭದಲ್ಲಿ ಅಹಿತಕರ ಘಟನೆ ಗಳನ್ನು ತಡೆಗಟ್ಟಲು ನಿಷೇಧ ಅತ್ಯಗತ್ಯ ಎಂದು ಆಯುಕ್ತರು ಒತ್ತಿ ಹೇಳಿದರು.

ಯಲಹಂಕ ವಾಯುನೆಲೆಯಲ್ಲಿ ದ್ವೈವಾರ್ಷಿಕ ಏರೋಸ್ಪೇಸ್ ಪ್ರದರ್ಶನ ನಡೆಯಲಿದ್ದು ಭಾರತವನ್ನು ಮಿಲಿಟರಿ ವಿಮಾನಗಳು, ಹೆಲಿಕಾಪ್ಟರ್‌ಗಳು ಮತ್ತು ಸುಧಾರಿತ ಏವಿಯಾನಿಕ್ಸ್ ತಯಾರಿಸುವ ಕೇಂದ್ರವಾಗಿ ಸ್ಥಾಪಿಸುವ ಗುರಿಯನ್ನು ಹೊಂದಿದೆ. ಏಷ್ಯಾದ ಅತಿದೊಡ್ಡ ಏರೋ ಶೋ ಏರೋ ಇಂಡಿಯಾದ 15 ನೇ ಆವೃತ್ತಿ ಫೆಬ್ರವರಿ 10 ರಿಂದ 14 ರವರೆಗೆ ನಡೆಯಲಿದೆ. ಐದು ದಿನಗಳ ಈ ಕಾರ್ಯಕ್ರಮದಲ್ಲಿ ಪರದೆ ಎತ್ತುವ, ಉದ್ಘಾಟನಾ ಸಮಾರಂಭ ರಕ್ಷಣಾ ಸಚಿವರ ಸಮಾವೇಶ, ಸಿಇಒಗಳ ದುಂಡು ಮೇಜಿನ ಸಭೆ ಮತ್ತು ಐಡಿಇಎಕ್ಸ್ ಸ್ಟಾರ್ಟ್ ಅಪ್ ಪ್ರದರ್ಶನ ಸೇರಿದಂತೆ ಸರಣಿ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮವು ರೋಮಾಂಚಕ ಏರ್ ಶೋಗಳನ್ನು ಸಹ ಆಯೋಜಿಸುತ್ತದೆ, ಇದು ಪ್ರದರ್ಶನದ ಗಮನ ಸೆಳೆಯುತ್ತದೆ.



## ಬಿವೈ ವಿಜಯೇಂದ್ರ ಸಭೆಗೆ ನಿರೀಕ್ಷೆಗೂ ಮೀರಿ ಬೆಂಬಲ

### ಭೋಜನಕೂಟಕ್ಕೆ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಪ್ರಮುಖರು ಭಾಗವಹಿಸುವ ಮೂಲಕ ವಿಜಯೇಂದ್ರ ನಾಯಕತ್ವಕ್ಕೆ ಬಹುಪರಾಕ್

• ಉದಯವಾಹಿನಿ, ಬೆಂಗಳೂರು

ಮುಂಬರುವ ಜಿಲ್ಲಾ, ತಾಲ್ಲೂಕು ಪಂಚಾಯತ್, ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಹತ್ವದ ಸಭೆ ನಡೆಸಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಕರೆಯಲಾಗಿದ್ದ ಮಾಜಿ ಶಾಸಕರು, ಮಾಜಿ ವಿಧಾನಪರಿಷತ್ ಸದಸ್ಯರು, ಪಕ್ಷದ ಕೆಲವು ಪದಾಧಿಕಾರಿಗಳಿಗೆ ಮಾತ್ರ ಭೋಜನಕೂಟಕ್ಕೆ ಆಹ್ವಾನ ಕೊಡಲಾಗಿತ್ತು. ವಿಜಯೇಂದ್ರ ರಾಜ್ಯಾಧ್ಯಕ್ಷರಾದ ನಂತರ ನಡೆದ ಮೊದಲ ಭೋಜನಕೂಟಕ್ಕೆ ಮಾಜಿ ಶಾಸಕರು, ಮಾಜಿ ವಿಧಾನಪರಿಷತ್‌ಸದಸ್ಯರು, ಪಕ್ಷದ ಪ್ರಮು ಖರು ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ಮೇಲ್ನೋಟಕ್ಕೆ ಇದೊಂದು ಪಕ್ಷ ಸಂಘಟನೆ ಕುರಿತಾಗಿ ನಡೆಯಲಿರುವ ಸಭೆ ಎಂದು ಹೇಳಲಾಗಿತ್ತಾದರೂ ತಮ್ಮ ನಾಯಕತ್ವದ ವಿರುದ್ಧ ಕತ್ತಿ ಮಸೆಯುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ ಸೇರಿದಂತೆ ಮತ್ತಿತರ ಭಿನ್ನಮತೀಯರಿಗೆ ತಿರುಗೇಟು ನೀಡುವ ನೆಪದಲ್ಲೇ ಸಭೆ ಆಯೋಜಿಸಲಾಗಿತ್ತು.

ವಿಜಯೇಂದ್ರ ಬಣದಲ್ಲಿ ಗುರುತಿಸಿಕೊಂಡಿರುವ ಪ್ರಮುಖರೊಬ್ಬರು ಖುದ್ದು ಆಸಕ್ತಿ ವಹಿಸಿ ಮಾಜಿ ಶಾಸಕರು, ಮಾಜಿ ವಿಧಾನಪರಿಷತ್ ಸದಸ್ಯರು, ಮಾಜಿ ಸಚಿವರನ್ನು ಸಭೆಗೆ ಆಹ್ವಾನಿಸಿದ್ದರು. ಭೋಜನ ಕೂಟಕ್ಕೆ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಪ್ರಮುಖರು ಭಾಗವ ಹಿಸುವ ಮೂಲಕ ವಿಜಯೇಂದ್ರ ನಾಯಕತ್ವಕ್ಕೆ ಬಹು ತೇಕರು ಬಹು ಪರಾಕ್ ಹೇಳಿದ್ದಾರೆ.

2028ರ ವಿಧಾನಸಭಾ ಚುನಾವಣೆವರೆಗೂ ವಿಜಯೇಂದ್ರ ನಾಯಕತ್ವ ಬದಲಾವಣೆ ಮಾಡಬಾರದು. ಅವರ ಮುಂದಾಳ ತ್ವದಲ್ಲೇ ಚುನಾವಣೆ ಎದುರಿಸೋಣ. ಸಾಧ್ಯವಾದರೆ ಪಕ್ಷದ ವರಿಷ್ಠರನ್ನು ಭೇಟಿಯಾಗಿ ಮನವರಿಕೆ ಮಾಡಿಕೊಡುವ ತೀರ್ಮಾನಕ್ಕೂ ಬರಲಾಗಿದೆ ಎಂದು ತಿಳಿದುಬಂದಿದೆ.

ಯತ್ನಾಳ್ ಮತ್ತು ಅವರ ತಂಡ ನಡೆಸುತ್ತಿರುವ ಪ್ರತ್ಯೇಕ ಹೋರಾಟಕ್ಕೆ ಶೀಘ್ರದಲ್ಲೇ ಕಡಿವಾಣ ಹಾಕಬೇಕು. ಇದರಿಂದಾಗಿ ಪಕ್ಷದ ಸಂಘಟನೆಗೆ ಹಿನ್ನಡೆಯಾಗಿದೆ. ಪಕ್ಷದ ಚಿಹ್ನೆಯಡಿ ಎಲ್ಲಾ ಹೋರಾಟಗಳು ನಡೆಯಬೇಕು. ಪ್ರತ್ಯೇಕವಾಗಿ, ವೈಯಕ್ತಿಕವಾಗಿ ನಡೆಸಲು ಅವಕಾಶ ಕೊಡದಂತೆ ವರಿಷ್ಠರಿಗೆ ಮನವರಿಕೆ ಮಾಡಿಕೊಡುವುದರ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಯತ್ನಾಳ್ ಮತ್ತು ಅವರ ತಂಡ ಪ್ರತ್ಯೇಕವಾಗಿ ನಡೆಸುತ್ತಿರುವ ಹೋರಾಟದಿಂದಾಗಿ ಪಕ್ಷದ ಸಂಘಟನೆಗೆ ಹಿನ್ನಡೆಯಾಗಿದೆ. ಕಾರ್ಯಕರ್ತರಲ್ಲಿ ಹಿನ್ನಡೆ ಉಂಟಾಗಿದೆ. ನಾವು ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಚಕಾರ ಎತ್ತಿದರೆ ಮೊದಲು ನಿಮ್ಮ ತಟ್ಟೆಯಲ್ಲಿ ಕತ್ತೆ ಬಿದ್ದಿದೆ. ನಮ್ಮ ತಟ್ಟೆಯಲ್ಲಿ ಬಿದ್ದಿರುವ ಹೆಗ್ಗಣವನ್ನು ಏಕೆ ನೋಡುತ್ತೀರಿಎಂದು ಪ್ರಶ್ನಿಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಸಭೆಯಲ್ಲಿ ಒತ್ತಾಯಿಸಿದ್ದಾರೆ. ಇತ್ತೀಚೆಗಷ್ಟೇ ವಿಜಯೇಂದ್ರ ಅವರು ಅಮಿತ್ ಶಾ ಅವರನ್ನು ಭೇಟಿಯಾಗಿ ಯತ್ನಾಳ್ ಬಣದ ವಿರುದ್ಧ ದೂರು ನೀಡಿದ್ದರು. ಜತೆಗೆ ಇದರಿಂದ ಕಾಂಗ್ರೆಸ್ ವಿರುದ್ಧದ ಹೋರಾಟದಲ್ಲಿ ಪಕ್ಷಕ್ಕೆ ಹಿನ್ನಡೆಯಾಗುತ್ತಿದೆ ಎಂದು ಹೇಳಿಕೊಂಡಿದ್ದರು. ಅದಕ್ಕೆ ಪ್ರತಿಯಾಗಿ ಇದೀಗ ಯತ್ನಾಳ್ ಬಣದವರು ಪಕ್ಷದ ವರಿಷ್ಠರಿಗೆ ದೂರು ನೀಡಿರುವುದು ಕುತೂಹಲ ಮೂಡಿಸಿತ್ತು.

ವಿಜಯೇಂದ್ರ ಅವರು ಪಕ್ಷದಲ್ಲಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿಲ್ಲ. ತಮ ಆಪ್ತರನ್ನು, ಬೆಂಬಲಿಗರನ್ನು ಮಾತ್ರ ಜತೆಗೆ ಕರೆದೊಯ್ಯುತ್ತಾರೆ. ಪಕ್ಷದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಾಗ ಎಲ್ಲಾ ನಾಯಕರೊಂದಿಗೆ ಚರ್ಚೆ ನಡೆಸುವುದಿಲ್ಲ, ಇದು ಪಕ್ಷದ ಸಂಘಟನೆ ಮೇಲೆ ದೊಡ್ಡ ಪರಿಣಾಮ ಬೀರುತ್ತಿದೆ. ಜತೆಗೆ, ಆಡಳಿತಾರೂಢ ಕಾಂಗ್ರೆಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಹೀಗಾಗಿ, ಸರ್ಕಾರದ ವೈಫಲ್ಯಗಳ ವಿರುದ್ಧದ ಹೋರಾಟ ತಾರ್ಕಿಕ ಅಂತ್ಯಕ್ಕೆ ತಲುಪುತ್ತಿಲ್ಲ. ಕೇವಲ ಮಾಧ್ಯಮಗಳ ಹೇಳಿಕೆ, ಪ್ರಸಾರಕ್ಕೆ ಮಾತ್ರ ಸೀಮಿತವಾಗುತ್ತಿದೆ ಎಂದು ಯತ್ನಾಳ ಬಣದ ಮುಖಂಡರು ಅಮಿತ್ ಶಾ ಎದುರು ದೂರಿದ್ದರು. ವಿಜಯೇಂದ್ರ ನಾಯಕತ್ವದ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಬಣದ ಮುಖಂಡರು ಅಭಿಪ್ರಾಯ ಸಂಗ್ರಹಿಸಲು ಜಿಲ್ಲಾ ಪ್ರವಾಸ ಆರಂಭಿದ್ದಾರೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಪಕ್ಷದ ಮಾಜಿ ಸಚಿವರು, ಶಾಸಕರ ವಿಶ್ವಾಸ ಗಳಿಸಲು ಈ ಔತಣಕೂಟ ಏರ್ಪಡಿಸಲಾಗಿತ್ತು ಎಂದು ಹೇಳಲಾಗಿದೆ.



ಉದಯವಾಹಿನಿ ಚಿತ್ರ

**ಹೋರಾಟಕ್ಕೆ ಶೀಘ್ರದಲ್ಲೇ ಕಡಿವಾಣ**

**ವಿಜಯೇಂದ್ರ ಮನವರಿಕೆ**

**ಇದನ್ನು ವರಿಷ್ಠರ ಗಮನಕ್ಕೂ ತರಲಾಗಿದೆ. ಶೀಘ್ರದಲ್ಲಿಯೇ ಎಲ್ಲವೂ ಸುಖಾಂತ್ಯ ಕಾಣಲಿದೆ. ಕಾಂಗ್ರೆಸ್ ಸರ್ಕಾರದ ಆಸೆ-ಆಮಿಷಗಳಿಗೆ ಬಲಿಯಾಗಿ ಪಕ್ಷ ಬಿಡದಂತೆ ವಿಜಯೇಂದ್ರ ಮನವರಿಕೆ ಮಾಡಿಕೊಟ್ಟಿದ್ದಾರೆಂದು ಮೂಲಗಳು ತಿಳಿಸಿವೆ. ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಬಣದ ಮುಖಂಡರು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ದೂರು ನೀಡಿದ್ದರು.**

# ಪರೀಕ್ಷಾ ಕೊಠಡಿ ಗೋಡೆಗಳೇ ವಿದ್ಯಾರ್ಥಿಗಳಿಗೆ ನಕಲು ಚೀಟಿ

## • ಕಾಲೇಜಿನ ಬಿಳಿ ಗೋಡೆಗಳು ಗಣಿತ ಮತ್ತು ವಿಜ್ಞಾನದ ಸೂತ್ರ, ಪ್ರಮೇಯ, ಲೆಕ್ಕಗಳಿಂದ ತುಂಬಿ ಹೋಗಿವೆ

• ಉದಯವಾಹಿನಿ ಕೋಲಾರ

ನೂರಕ್ಕೂ ಅಧಿಕ ವರ್ಷಗಳ ಇತಿಹಾಸವಿರುವ ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ (ಬಾಲಕರ ಕಾಲೇಜು) ಬಿಳಿ ಗೋಡೆಗಳು ಗಣಿತ ಮತ್ತು ವಿಜ್ಞಾನದ ಸೂತ್ರ, ಪ್ರಮೇಯ, ಲೆಕ್ಕಗಳಿಂದ ತುಂಬಿ ಹೋಗಿವೆ. ಬರೀ ಗೋಡೆ ಮಾತ್ರವಲ್ಲ, ಟೇಬಲ್, ಬೆಂಚ್‌ಗಳೂ ಉತ್ತರಗಳಿಂದ ಅಲಂಕೃತಗೊಂಡಿವೆ, ಕಾಲೇಜಿನ ಕೆಲ ಪರೀಕ್ಷಾ ಕೊಠಡಿಗಳಲ್ಲಿನ ಗೋಡೆಗಳ ತುಂಬೆಲ್ಲಾ 'ಸಿದ್ಧ ಉತ್ತರಗಳ ಪ್ಯಾಕೇಜ್' ಸಿಗುತ್ತದೆ.

ಬಿಳಿ ಗೋಡೆಗಳ ಮೇಲೆ ಖಾಲಿ ಜಾಗ ಸ್ವಲ್ಪವೂ ಸಿಗಲ್ಲ. ಆ ರೀತಿ ವಿದ್ಯಾರ್ಥಿಗಳು ದಪ್ಪ ಅಕ್ಷರಗಳಲ್ಲಿ ಉತ್ತರ ಬರೆದಿಟ್ಟುಕೊಂಡಿದ್ದಾರೆ.

ಪದವಿ ಕೋರ್ಸ್‌ಗಳ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಗೋಡೆ, ಬೆಂಚ್ ಬರಹಗಳನ್ನು ಯಥಾವತ್ತಾಗಿ ನಕಲು ಮಾಡುತ್ತಿದ್ದಾರೆ. ಈ ವಿಚಾರ ಕಾಲೇಜಿನ ಪ್ರಾಂಶುಪಾಲರಿಗೆ, ಅಧ್ಯಾಪಕರಿಗೆ, ಇನ್ವಿಜಿಲೇಟರ್‌ಗಳಿಗೆ ಹಾಗೂ ಸ್ಕ್ವ್ಯಾಡ್ ಗಳಿಗೆ ಗೊತ್ತು. ಹೀಗಿದ್ದರೂ ಗೋಡೆಯಲ್ಲಿ ಬರೆದಿರುವ ಉತ್ತರಗಳನ್ನು ಅಳಿಸಿ ಹಾಕುವ ಗೋಜಿಗೆ ಹೋಗಿಲ್ಲ. ಕಾಲೇಜಿನ ಕೆಲ ಅಧ್ಯಾಪಕರು ಪ್ರತಿನಿಧಿಗೆ ಇದನ್ನು ತೋರಿಸಿ ಬೇಸರ, ಅಸಮಾಧಾನ ಹಾಗೂ ಅಸಹಾಯಕತೆ ವ್ಯಕ್ತಪಡಿಸಿದರು. ಹಲವು ವರ್ಷಗಳಿಂದ ಇದು ಹೀಗೆಯೇ ನಡೆಯುತ್ತಿದೆ ಹೇಳುವವರು, ಕೇಳುವವರು ಯಾರೂ ಇಲ್ಲ. ಗೋಡೆಗಳ ಮೇಲೆ ಬರೆದಿರುವುದು ಎಲ್ಲರಿಗೂ ಗೊತ್ತಿದ್ದರೂ, ವಿದ್ಯಾರ್ಥಿಗಳು ಅದನ್ನು ನಕಲು ಮಾಡಿ ಪರೀಕ್ಷೆ ಬರೆಯುತ್ತಿದ್ದರೂ ಸುಮ್ಮನಿದ್ದಾರೆ' ಎಂದರು. ವಿವಿಧ ವಿಷಯಗಳ ಪ್ರಶ್ನೆಗಳಿಗೆ ಗೋಡೆಗಳ ಮೇಲೆ ಉತ್ತರಗಳನ್ನು ಬರೆದಿಡಲಾಗಿದೆ. ಪರೀಕ್ಷೆ ನಡೆಯುವ ಕೊಠಡಿಗಳ ಇಡೀ ಗೋಡೆಗಳನ್ನು ಚಿತ್ರ ವಿಚಿತ್ರ ಪ್ರಮೇಯ, ಲೆಕ್ಕ, ಸೂತ್ರ ಗಳನ್ನು ಬರೆದು ತುಂಬಿಸಿದ್ದಾರೆ. ಇನ್ನು ಕಾಲೇಜಿನ ಆವರಣದಲ್ಲಿ ಕಿಟಕಿಗಳ ಹೊರಗೆ ಬಿದ್ದಿರುವ ಕಾಪಿ ಚೀಟಿಗಳನ್ನೂ ಸ್ಕ್ವಾಡ್ ತೋರಿಸಿದರು. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಜೊತೆ ಉತ್ತರವಿರುವ ಮೈಕ್ರೋ ಜೆರಾಕ್ಸ್ ಪ್ರತಿಯೂ ಲಭ್ಯವಾಗಿವೆ.

ಇದಕ್ಕೆ ಕೆಲ ಇನ್ವಿಜಿಲೇಟರ್‌ಗಳು ಸಹಕಾರ ನೀಡುತ್ತಿರುವುದನ್ನು ಸ್ಕ್ವಾಡ್ ಬಹಿರಂಗಪಡಿಸಿದರು.

ಬಾಲಕರ ಕಾಲೇಜಿನಲ್ಲಿ ಗೋಡೆಗಳ ಮೇಲೆ ಉತ್ತರ ಬರೆದಿರುವ ಫೋಟೊ ನನ್ನ ಬಳಿಯೂ ಇದೆ. ಪರೀಕ್ಷೆಗಳಿಗೂ ಮುನ್ನ ಸುಣ್ಣ ಬಣ್ಣ ಬಳಿಸಿ ಉತ್ತರ ಅಳಿಸಿ ಹಾಕುವಂತೆ ಕಾಲೇಜಿಗೆ ಪತ್ರ ಕೂಡ ಬರೆದಿದ್ದೇನೆ. ಆದರೂ ಕ್ರಮ ವಹಿಸಿಲ್ಲ. ಹೀಗೆಯೇ ಮುಂದುವರಿದರೆ ಕಾಲೇಜಿನ ಪರೀಕ್ಷಾ ಕೇಂದ್ರವನ್ನೇ ರದ್ದು ಮಾಡಬೇಕಾಗುತ್ತದೆ. ಈ ವಿಚಾರವನ್ನು ಸಿಂಡಿಕೇಟ್ ಸಭೆಗೂ ತಿಳಿಸಲಾಗುವುದು. ನಕಲು ನಿಯಂತ್ರಣಕ್ಕೆ ಕ್ರಮ ವಹಿಸಿದ್ದೇವೆ. ಸ್ಕ್ವಾಡ್ ಗಳನ್ನು ಹೆಚ್ಚಿಸಲಾಗಿದೆ. ವಿಶ್ವವಿದ್ಯಾಲಯ ಮಟ್ಟದಲ್ಲಿ ಯಾವತ್ತೂ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ. ಕಾಲೇಜು ಮಟ್ಟದಲ್ಲಿ ನಕಲಿಗೆ ಕಡಿವಾಣ ಹಾಕಬೇಕು ಪ್ರೊ. ಕೆ.ತಿಪ್ಪೇಸ್ವಾಮಿ ಕುಲಸಚಿವ (ಮೌಲ್ಯಮಾಪನ) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಸಂಪನ್ಮೂಲ ಕೊರತೆ ವಿದ್ಯಾರ್ಥಿಗಳು ಗೋಡೆಗಳ ಮೇಲೆ ಉತ್ತರ ಬರೆದಿರುವುದನ್ನು ನೋಡಿದ್ದೇನೆ. ಆದರೆ ಇದು ಈಗಿನದ್ದಲ್ಲ. ಬಹಳ ಹಳೆಯದ್ದು. ಸುಣ್ಣ ಬಣ್ಣ ಬಳಿಸಲು ಕಾಲೇಜಿನಲ್ಲಿ ಸಂಪನ್ಮೂಲ ಕೊರತೆ ಇದೆ. ಶೀಘ್ರದಲ್ಲೇ ಸರಿಪಡಿಸುತ್ತೇವೆ.

### ಇನ್ವಿಜಿಲೇಟರ್ ಬುಕ್ಕಿಂಗ್

ನಕಲು ಮಾಡಲು ನಮ್ಮ ಕಾಲೇಜಿನಲ್ಲಿ ಅವಕಾಶ ಕೊಡಲ್ಲ. ಸಿಟ್ಟಿಂಗ್ ಸ್ಕ್ವಾಡ್ ಇರುತ್ತಾರೆ. ವಿದ್ಯಾರ್ಥಿಗಳು ಕಾಪಿ ಮಾಡುವುದು ಗಮನಕ್ಕೆ ಬಂದರೆ ಅಂಥ ವಿದ್ಯಾರ್ಥಿಗಳನ್ನು ಡಿಬಾರ್ ಮಾಡುತ್ತಾರೆ ತ್ಯಾಗರಾಜ್ ಎಸ್. ಪ್ರಾಂಶುಪಾಲ ಬಾಲಕರ ಕಾಲೇಜು ಖಾಸಗಿ ಕಾಲೇಜು-ಇನ್ವಿಜಿಲೇಟರ್ ಬುಕ್ಕಿಂಗ್ 'ಕೆಲ ಖಾಸಗಿ ಕಾಲೇಜಿನವರು ಪರೀಕ್ಷಾ ಕೊಠಡಿಯ ಇನ್ವಿಜಿಲೇಟರ್‌ಗಳನ್ನೇ (ಮೇಲ್ವಿಚಾರಕರು) ಬುಕ್ ಮಾಡಿ ಕೊಂಡಿರುತ್ತಾರೆ.






☛ ಉದಯವಾಹಿನಿ ಚಿತ್ರ

ಕೆಲ ಇನ್ವಿಜಿಲೇಟರ್‌ಗಳು ವಿದ್ಯಾರ್ಥಿಗಳು ಕಾಪಿ ಮಾಡಲು ಅವಕಾಶ ಮಾಡಿಕೊಡುತ್ತಾರೆ. ಸ್ಕ್ವ್ಯಾಡ್ ಬಂದಾಗ ಅವರು ಮಕ್ಕಳಿಗೆ ಸೂಚನೆ ಕೊಡುತ್ತಾರೆ. ಅವರನ್ನು ಪರೀಕ್ಷೆ ನಡೆಸುವ ಕಾಲೇಜಿನವರೇ ನೇಮಕ ಮಾಡಿರುತ್ತಾರೆ' ಎಂದು ಸಿಟ್ಟಿಂಗ್ ಸ್ಕ್ವ್ಯಾಡ್‌ವೊಬ್ಬರು ತಿಳಿಸಿದರು.

**ಸಿದ್ಧ ಉತ್ತರಗಳ ಪ್ಯಾಕೇಜ್**

ಪ್ರಶ್ನೆ ಪತ್ರಿಕೆ ಬೆಳಿಗ್ಗೆ 9.30ಕ್ಕೆ ವಿದ್ಯಾರ್ಥಿಗಳ ಕೈ ಸೇರುತ್ತದೆ. ಆಗ ಪರೀಕ್ಷಾ ಕೇಂದ್ರದ ಕೆಲ ಅಧ್ಯಾಪಕರು ಪ್ರಶ್ನೆ ಪತ್ರಿಕೆ ಪಡೆದು ಅರ್ಧಗಂಟೆಯಲ್ಲಿ ಉತ್ತರಗಳನ್ನು ಸಿದ್ಧಪಡಿಸಿ ಆ ಚೀಟಿಯನ್ನು ವಿದ್ಯಾರ್ಥಿಗಳಿಗೆ ಕೊಡುತ್ತಾರೆ' ಎಂದು ಪರೀಕ್ಷಾ ಕೇಂದ್ರದ ಸ್ಕ್ವ್ಯಾಡ್ ವೊಬ್ಬರು ಹೇಳಿದರು. ಬಾಲಕರ ಕಾಲೇಜಿನಲ್ಲಿ ಇಂಗ್ಲಿಷ್ ಪತ್ರಿಕೆ ಪರೀಕ್ಷೆ ನಡೆದಿದ್ದು, ಖಾಸಗಿ ಕಾಲೇಜಿನ ಹಲವರು ನಕಲು ಮಾಡುತ್ತಿದ್ದದ್ದು ಪತ್ತೆಯಾಯಿತು. ಈ ರೀತಿ ಆದಾಗ ಕಷ್ಟಪಟ್ಟು ಓದುವ ವಿದ್ಯಾರ್ಥಿಗಳ ಪಾಡೇನು' ಎಂದು ಅವರು ಪ್ರಶ್ನಿಸಿದರು

---

# ಬದುಕಿಗೆ ನಾದಸ್ವರವೇ ಊರುಗೋಲು

• ಉದಯವಾಹಿನಿ ಬಾಗೇಪಲ್ಲಿ

ಸ್ಯಾಕ್ಸೋಫೋನ್ನಲ್ಲಿ ಇವರು ಕಲಾ ಪ್ರವೀಣೆ. ಈ ಕಲೆಯಲ್ಲಿ ಪ್ರಾವೀಣ್ಯತೆ ಸಾಧಿಸಿ ಜಿಲ್ಲಾ, ರಾಜ್ಯ ಮಟ್ಟದ ಸಮಾರಂಭಗಳಲ್ಲಿ ಕಾರ್ಯಕ್ರಮ ನೀಡಿರುವ ಕವಿತಾ, ಎಲ್ಲರೂ ಹುಬ್ಬೇರುವಂತೆ ಮಾಡಿರುವ ಕಲಾ ಸಾಧಕಿ. ಇವರ ಪತಿ ಪಟ್ಟಣದ 10 ನೇ ವಾರ್ಡ್ ಡಿಸಿಸಿ ರಸ್ತೆ ನಿವಾಸಿ ಗಣೇಶ್. ಅವರು 25 ವರ್ಷದಿಂದ ಕ್ಷೌರಿಕ ಕಾಯಕ ಮಾಡುತ್ತಿದ್ದು, 2006ರಲ್ಲಿ ಆಂಧ್ರಪ್ರದೇಶದ ನಲ್ಲಚರವು ಮಂಡಲದ ಯರಗಂಟಿಪಲ್ಲಿ ಕವಿತಾ ಅವರನ್ನು ವಿವಾಹವಾದರು.

ಕವಿತಾ ಆಂಧ್ರಪ್ರದೇಶದ ತೆಲುಗು ಮಾಧ್ಯಮದಲ್ಲಿ 10ನೇ ತರಗತಿವರೆಗೂ ಕವಿತಾ ಓದಿದ್ದಾರೆ. ಕುಟುಂಬ ನಿರ್ವಹಣೆ, ಪೋಷಕರ ಆರೈಕೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಕುಟುಂಬದಲ್ಲಿ ತೊಂದರೆ ಇದ್ದರಿಂದ ಸಮುದಾಯದ ಕುಲ ವೃತ್ತಿ ನಾದಸ್ವರ ಕಲಿತಿದಿದ್ದಾರೆ. ಅದರಲ್ಲೂ ಸ್ಯಾಕ್ಸೋಫೋನ್ ವಾದನ ಕಲಿತು ಸೈ ಎನಿಸಿಕೊಂಡಿದ್ದಾರೆ. ನೆರೆಯ ಆಂಧ್ರಪ್ರದೇಶದ ಚಿಲಮತ್ತೂರಿನ ಗೋಪಾಲಪ್ಪ ಎಂಬುವವರ ಬಳಿ ನಾದಸ್ವರ ಕಲಿತರು.

ಪ್ರತಿದಿನ ಬೆಳಗ್ಗೆಯಿಂದ ಸಂಜೆಯವರೆಗೂ 2 ವರ್ಷಗಳ ಕಾಲ ತಮ್ಮ ಗುರಿ ಸಾಧನೆಗಾಗಿ ಶ್ರಮಿಸಿದರು. 2008ರಲ್ಲಿ ಕವಿತಾ ಚಿಕ್ಕಪ್ಪನ ಜತೆ ಮದುವೆ, ಗೃಹ ಪ್ರವೇಶ ಸೇರಿದಂತೆ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ನಾದಸ್ವರ ನುಡಿಸುವ ಮೂಲಕ ವೃತ್ತಿಯನ್ನು ಮೈಗೂಡಿಸಿಕೊಂಡರು. ಆದಿತಾಳ, ವರ್ಣಂ ಸ್ವರಗಳ ಲಯ, ತೆಲುಗು ಹಾಗೂ ಕನ್ನಡ ಸಿನಿಮಾ ಹಾಡುಗಳ ರಾಗಗಳ ವಾದನ ಅಭ್ಯಾಸ ಮಾಡಿದ್ದಾರೆ. ನಂತರ ಬಾಗೇಪಲ್ಲಿ, ತುಮಕೂರು, ಬಳ್ಳಾರಿ, ಬೆಂಗಳೂರು, ಮೈಸೂರು, ಆಂಧ್ರಪ್ರದೇಶದ ತಿರುಪತಿ, ಪುಲಿವೆಂದುಲ, ಕದಿರಿ, ಧರ್ಮಾವರಂ ಸೇರಿದಂತೆ ತಮಿಳುನಾಡಿನ ಕೊಯಮತ್ತೂರು ವಿವಿಧ ಕಡೆ ನಡೆಯುವ ಶುಭ ಸಮಾರಂಭ, ಸಂಗೀತ ಕಚೇರಿಗಳಲ್ಲಿ ಭಾಗವಹಿಸಿ ತಮ್ಮ ನಾದಸ್ವರ ವಾದನ ಪ್ರದರ್ಶನ ನೀಡಿದ್ದಾರೆ.

ವಾತಾಪಿ ಗಣಪತಿ, ತ್ಯಾಗರಾಜ, ಕೈವಾರ ತಾತಯ್ಯ ಕೀರ್ತನೆಗಳನ್ನು ನಾದಸ್ವರದ ಮೂಲಕ ವಾದನ ಮಾಡುವ ಕಲೆ, ಕೌಶಲ ಅವರಿಗೆ ಸಿದ್ಧಿಸಿದೆ. ಪಟ್ಟಣದ ಮಹಿಳಾ ನಾದಸ್ವರ ವಾದಕಿ ಲಕ್ಷ್ಮಿ ನೇತ್ರ ಅವರ ಜತೆ ಕವಿತಾ ಅನೇಕ ಗೃಹಪ್ರವೇಶ, ಮದುವೆ, ಸಂಗೀತ ಕಾರ್ಯಕ್ರಮಗಳಲ್ಲೂ ಭಾಗಿಯಾಗಿದ್ದಾರೆ. ಚಿಕ್ಕಬಳ್ಳಾಪುರದ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನಡೆದ 2019 – 2024ರ ನೂತನ ಜವಳಿ ನೀತಿ ಅಡಿಯಲ್ಲಿ ನೀಡಿದ ತರಬೇತಿಯಲ್ಲಿ ಕವಿತಾ ಭಾಗವಹಿಸಿದ್ದಾರೆ. ಎಸ್‌ಎಂಓನ ಕೌಶಲ ತರಬೇತಿ ಪಡೆದಿದ್ದಾರೆ.

ವಿವಿಧ ಸಂಗೀತ ಕಚೇರಿಯಲ್ಲಿ ಭಾಗವಹಿಸಿ ಉತ್ತಮ ಮಹಿಳಾ ನಾದಸ್ವರ ವಾದಕಿ ಪ್ರಶಸ್ತಿ ರೂ.ಭಾಜನರಾಗಿದ್ದಾರೆ. ಮಹಿಳೆಯರು ಮನಸ್ಸು ಮಾಡಿದರೆ ಏನನ್ನಾದರೂ ಸಾಧನೆ ಮಾಡುತ್ತಾರೆ ಎಂಬುದಕ್ಕೆ ಕವಿತಾ ಅವರ ಸಾಧನೆ ಉದಾಹರಣೆ ಎಂದು ಪಟ್ಟಣದ ಹಿರಿಯ ನಾದಸ್ವರ ಕಲಾವಿದ ಲಕ್ಷ್ಮೀನರಸಪ್ಪ ಹೇಳುತ್ತಾರೆ.



☛ ಉದಯವಾಹಿನಿ ಚಿತ್ರ

ಕುಟುಂಬಸ್ಥರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಇಲ್ಲ. ವಾಸ ಮಾಡಲು ಮನೆ ಇಲ್ಲ. ಕುಟುಂಬದ ಜವಾಬ್ದಾರಿ ಇದೆ. ಬಾಡಿಗೆ ಮನೆ ಹಾಗೂ ಸಲೂನ್ ಅಂಗಡಿಗೆ ಬಾಡಿಗೆ ಕಟ್ಟಲು ದುಡಿಮೆ ಹಣ ಸಾಕಾಗುತ್ತಿಲ್ಲ. ಕಾರ್ಯಕ್ರಮಗಳಲ್ಲಿ ನಾದಸ್ವರ ವಾದನದ ದುಡಿದ ಹಣ ಕುಟುಂಬ ಪೋಷಣೆ ಮಾಡಲು ಆಗುತ್ತಿಲ್ಲ. ಸರ್ಕಾರ ನಮ್ಮಂತಹ ಮಹಿಳೆಯರಿಗೆ ವಾಸ ಮಾಡಲು ಮನೆ ನಿರ್ಮಿಸಿಕೊಡಿ -ಕವಿತಾ

---

# ಭವನಗಳ ನಿರ್ಮಾಣ ಕಾಮಗಾರಿಗೆ 2 ಕೋಟಿ

• ಉದಯವಾಹಿನಿ ಮಡಿಕೇರಿ

ವಿರಾಜಪೇಟೆ ಕ್ಷೇತ್ರದ ವಿವಿಧ ಸಮುದಾಯಗಳ ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಒಟ್ಟು 2 ಕೋಟಿಯನ್ನು ಬಿಡುಗಡೆ ಮಾಡಿದೆ. ಶ್ರೀ ನಾರಾಯಣ ಗುರು ಸಮುದಾಯ ಭವನದ ಕಾಮಗಾರಿಗೆ 1 ಕೋಟಿ, ಹಾಕತ್ತೂರು ತೊಂಬತ್ತು ಮನೆ ಸಮುದಾಯ ಭವನ ಮುಂದುವರಿದ ಕಾಮಗಾರಿಗೆ 5 ಲಕ್ಷ, ನಾಪೋಕ್ಲು ಇಂದಿರಾ ನಗರದಲ್ಲಿ ಸಮುದಾಯ ಭವನ ಕಾಮಗಾರಿಗೆ 10 ಲಕ್ಷ, ಚೆನ್ನಯ್ಯನ ಕೋಟೆ ಸಮುದಾಯ ಭವನಕ್ಕೆ 5 ಲಕ್ಷ ಕೆದಮುಳ್ಳೂರು ದವಸ ಭಂಡಾರ ಪಕ್ಕ ಸಮುದಾಯ ಭವನ ಕಾಮಗಾರಿಗೆ 15 ಲಕ್ಷ, ಗೋಣಿಕೊಪ್ಪಲಿನಲ್ಲಿ ಸ್ವಾತಂತ್ರ್ಯ ಸಮುದಾಯ ಭವನ ಕಾಮಗಾರಿಗೆ 30 ಲಕ್ಷ, ಪೊನ್ನಂಪೇಟೆ ತಾಲ್ಲೂಕಿನ ಗೋಣಿಕೊಪ್ಪ ಕೊಡವ ಸಮಾಜ ಸಮುದಾಯ ಭವನ ಕಾಮಗಾರಿಗೆ 25 ಲಕ್ಷ, ಪೊನ್ನಂಪೇಟೆ ತಾಲ್ಲೂಕಿನ ಮಾಯಮುಡಿ ಬಸವೇಶ್ವರ ಸಮುದಾಯ ಭವನ ಕಾಮಗಾರಿಗೆ 10 ಲಕ್ಷ ಸೇರಿದಂತೆ ವಿರಾಜಪೇಟೆ ಕ್ಷೇತ್ರದ್ಯಾದಂತ ಒಟ್ಟು ಎಂಟು ಆಯ್ದ ಕಾಮಗಾರಿಗೆ 2 ಕೋಟಿ ಅನುದಾನ ಬಿಡುಗಡೆಯಾಗಿದ್ದು ಮುಂದಿನ ವಾರ ಕಾಮಗಾರಿಗೆ ಚಾಲನೆ ದೊರೆಯಲಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ. 'ಶ್ರೀ ನಾರಾಯಣ ಗುರು ಸಮುದಾಯ ಭವನದ ನಿರ್ಮಾಣಕ್ಕೆ ಸಮುದಾಯದ ಜನರು ಚುನಾವಣಾ ಪೂರ್ವದಲ್ಲಿ ಮನವಿ ಮಾಡಿಕೊಂಡ ಮೇರೆಗೆ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದೆ.

ವಿಧಾನಸಭಾ ಚುನಾವಣಾ ಸಂಧರ್ಭದಲ್ಲಿ ಕ್ಷೇತ್ರದ ಎಲ್ಲಾ ಭಾಗಗಳಿಗೆ ತೆರಳಿ ಅಲ್ಲಿನ ಜನರ ಬೇಡಿಕೆಗಳನ್ನು ಗಮನಿಸಿ ಪ್ರತ್ಯೇಕ ಪ್ರಣಾಳಿಕೆಯನ್ನು ಜನತೆಯ ಮುಂದಿಟ್ಟಿದ್ದ ಅವುಗಳನ್ನು ಈಡೇರಿಸುವುದು ನನ್ನ ಆದ್ಯ ಕರ್ತವ್ಯ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.



☛ ಉದಯವಾಹಿನಿ ಚಿತ್ರ

---

# ಹಾಸ್ಟೆಲ್ ವಾರ್ಡನ್‌ಗೆ ದರ್ಶನ್ ಪುಟ್ಟಣ್ಣಯ್ಯ ತರಾಟೆ

• ಉದಯವಾಹಿನಿ ಪಾಂಡವಪುರ

ತಾಲ್ಲೂಕಿನ ಕೆರೆತೊಣ್ಣೂರು ಮೊರಾರ್ಜಿ ವಸತಿ ಶಾಲೆಗೆ ರಾತ್ರಿ ದಿಢೀರ್ ಭೇಟಿ ನೀಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ. ಅಲ್ಲಿನ ಅವ್ಯವಸ್ಥೆಯನ್ನು ಕಣ್ಣಾರೆ ಕಂಡು ವಾರ್ಡ್‌ನ್‌ಗೆ ದೂರವಾಣಿ ಕರೆ ಮಾಡಿ ತರಾಟೆಗೆ ತೆಗೆದುಕೊಂಡರು. ಶಾಸಕ ಭೇಟಿ ನೀಡಿದ ಸಂದರ್ಭ ವಾರ್ಡನ್ ಇರಲಿಲ್ಲ.ಹಾಸ್ಟೆಲ್ ವಿದ್ಯಾರ್ಥಿಗಳು ಶಾಸಕರ ಬಳಿ ತಮ್ಮ ಸಮಸ್ಯೆಗಳನ್ನು ತೋಡಿಕೊಂಡರು.

ಇದರಿಂದ ಕೆರಳಿದ ಶಾಸಕ ದರ್ಶನ್, ವಾರ್ಡ್‌ನ್ ಅಂದ್ರೆ ನಿನ್ನ ಜವಾಬ್ದಾರಿ ಏನು? ನೀನು ವಾಸ ಎಲ್ಲಿರಬೇಕು. ಮಕ್ಕಳು ಹೇಳುತ್ತಿದ್ದಾರೆ. ನೀನು ನಿನ್ನೆ ಬಂದು ಹೋಗಿದ್ದೀಯ, ಆದರೆ ಇದುವರೆಗೂ ಬಂದಿಲ್ಲ ನಿಮ್ಮ ಅಮ್ಮ ಏಕೆ ಇಲ್ಲಿರಬೇಕು. ನಿಮ್ಮಮ್ಮನಿಗೂ ಹಾಸ್ಟೆಲ್ ಗೂ ಏನು ಸಂಬಂಧ, ಏನ್ ಫ್ಯಾಮಿಲಿ ಬಿಸಿನೆಸ್ ಮಾಡ್ತಿದ್ದೀಯಾ?' ಎಂದು ತರಾಟೆಗೆ ತೆಗೆದುಕೊಂಡರು. **ನಿಮ್ಮಮ್ಮನ ಇಲ್ಲಿ ಬಿಟ್ಟು ನೀನು ಬೇರೆ ಯಾವ ಬಿಸಿನೆಸ್ ಮಾಡ್ತಿದ್ದೀಯಾ?** : ನೀನಾಗಲಿ, ನಿಮ್ಮ ಕುಟುಂಬದವರು ಯಾರೂ ಇನ್ನು ಮುಂದೆ ಇಲ್ಲಿಗೆ ಕಾಲು ಹಾಕುವ ಆಗಿಲ್ಲ. ಬಂದರೆ ಕಾಲು ಕತ್ತರಿಸಿಬಿಡ್ತಿನಿ' ಎಂದು ಗದರಿದರು.ಬಳಿಕ ಮಕ್ಕಳ ಮತ್ತಷ್ಟು ಸಮಸ್ಯೆಗಳನ್ನು ಆಲಿಸಿದರು.

ವಾರ್ಡ್‌ನ್ ಅಮ್ಮ ನಮ್ಮನ್ನು ಗದರಿಸುತ್ತಾರೆ. ಬೆದರಿಕೆಯಿಂದ ನಮ್ಮನ್ನು ಇಟ್ಟಿದ್ದಾರೆ. ಹಾಲಿಗೆ ಹೆಚ್ಚು ನೀರು ಬೆರೆಸಿಕೊಡುತ್ತಾರೆ. ಮಧ್ಯಾಹ್ನದ ಚಪಾತಿಯನ್ನು ರಾತ್ರಿ ಕೊಡುತ್ತಾರೆ. ಮೆನು ಪ್ರಕಾರ ತಿಂಡಿ, ಊಟ ಕೊಡುವುದಿಲ್ಲ ಎಂದು ಸೇರಿದಂತೆ ಹಲವು ಸಮಸ್ಯೆಗಳನ್ನು ಅಲವತ್ತುಕೊಂಡರು ಶಾಸಕರು ಮಾತನಾಡಿ 'ಇನ್ನು ಮುಂದೆ ಹೆದರಬೇಡಿ, ನಿಮಗೆ ಮೆನು ಪ್ರಕಾರವೇ ತಿಂಡಿ, ಊಟ ಕೊಡುತ್ತಾರೆ. ವಾರ್ಡನ್ ಅಮ್ಮ ಇಲ್ಲಿ ಇರುವುದಿಲ್ಲ. ಧೈರ್ಯವಾಗಿರಿ, ನಿಮಗೆ ಸಮಸ್ಯೆ ಎದುರಾದರೆ ತಕ್ಷಣ ನನಗೆ ಕರೆ ಮಾಡಿ' ಎಂದು ಧೈರ್ಯ ತುಂಬಿ ಸಾಂತ್ವನ ಹೇಳಿದರು. ಅಡುಗೆ ಮನೆಗೆ ತೆರಳಿ 'ಮಕ್ಕಳಿಗೆ ಮೆನು ಪ್ರಕಾರವೇ ತಿಂಡಿ ಊಟ ನೀಡಿ, ಯಾರಿಗೂ ಹೆದರಬೇಡಿ, ನಿಮ್ಮ ಸಮಸ್ಯೆಗಳಿದ್ದರೆ ನನ್ನೊಂದಿಗೆ ಹೇಳಿಕೊಳ್ಳಿ' ಎಂದು ಅಡುಗೆ ಮಾಡುವವರಿಗೆ ಧೈರ್ಯ ತುಂಬಿದರು.



☛ ಉದಯವಾಹಿನಿ ಚಿತ್ರ

**ವಾರ್ಡ್‌ನ್ ಅಂದ್ರೆ ನಿನ್ನ ಜವಾಬ್ದಾರಿ ಏನು?**

---

## ಜಾನಪದ ಕಲೆಗೆ ಪ್ರೋತ್ಸಾಹ ಅಗತ್ಯ

• ಉದಯವಾಹಿನಿ ಚನ್ನಪಟ್ಟಣ

ನಾಡಿನ ಶ್ರೀಮಂತ ಕಲೆ ಜಾನಪದಕ್ಕೆ ಪ್ರೋತ್ಸಾಹದ ಅಗತ್ಯವಿದೆ ಎಂದು ರಾಜ್ಯ ಎಸ್‌ಡಿಎಂಸಿ ಸಮನ್ವಯ ಸಮಿತಿ ಉಪಾಧ್ಯಕ್ಷ ನಾಗವಾರ ಶಂಭುಗೌಡ ಅಭಿಪ್ರಾಯಪಟ್ಟರು. ತಾಲ್ಲೂಕಿನ ಕೂಡೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸವಿ ಸಾಂಸ್ಕೃತಿಕ ಕಲಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಸಂಘ–ಸಂಸ್ಥೆಗಳು ಮತ್ತು ಕಲಾವಿದರು ಮಾಡಬೇಕು.

ಕಲಾವಿದರಿಗೆ ಅಗತ್ಯ ಪ್ರೋತ್ಸಾಹ ನೀಡುವುದರ ಜೊತೆಗೆ ಮುಂದಿನ ಪೀಳಿಗೆಗೆ ಕಲೆಯನ್ನು ಕೊಂಡೊಯ್ಯುವ ಕೆಲಸ ಆಗಬೇಕು ಎಂದರು. ಉಪನ್ಯಾಸಕ ಬಿ.ಪಿ. ಸುರೇಶ್ ಮಾತನಾಡಿ, ಜಾನಪದವು ಸಾವಿಲ್ಲದ ಸಾಂಸ್ಕೃತಿಕ ಪಳಿಯುಳಿಕೆ. ಅದನ್ನು ಬೆಳಸುತ್ತಿರುವ ಕಲಾವಿದರು ಈ ನೆಲದ ಸಾಂಸ್ಕೃತಿಕ ನಾಯಕರು. ಜಾನಪದ ಕಲಾವಿದರ ಕಲೆಯನ್ನು ಪ್ರೋತ್ಸಾಹಿಸುವ ಮನೋಭಾವ ಎಲ್ಲರಲ್ಲಿಯೂ ಬೆಳೆಯಬೇಕು ಎಂದರು. ಹಿರಿಯ ಕಲಾವಿದೆ ಯಶೋಧ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಜಾನಪದ ಕಲೆಯಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕಿವಿಮಾತು ಹೇಳಿದರು.

---

# ಅಕ್ರಮ ಅಡ್ಡವಾದ ಇಂದಿರಾ ಕ್ಯಾಂಟೀನ್

• ಉದಯವಾಹಿನಿ ಹಾರೋಹಳ್ಳಿ

ಬಡ ಹಾಗೂ ಮಧ್ಯಮ ವರ್ಗದ ಜನರ ಹೊಟ್ಟೆಗೆ ಕಡಿಮೆ ದರದಲ್ಲಿ ಆಹಾರ ಪೂರೈಸುವ ಹಾರೋಹಳ್ಳಿಯ ಇಂದಿರಾ ಕ್ಯಾಂಟೀನ್ ಉದ್ಘಾಟನೆಗೂ ಮುನ್ನವೇ ಕಿಡಿಗೇಡಿಗಳ ಅಕ್ರಮ ಅಡ್ಡವಾಗಿ ಮಾರ್ಪಟ್ಟಿದೆ. ಹಾರೋಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿರುವ ಕ್ಯಾಂಟೀನ್ ತಾಲ್ಲೂಕು ಕಚೇರಿಯ ಕೂಗಳತೆ ದೂರದಲ್ಲಿದೆ. ಜನಸಾಮಾನ್ಯರ ಅನುಕೂಲಕ್ಕಾಗಿ ರಾಜ್ಯ ಸರ್ಕಾರದ ಇಂದಿರಾ ಕ್ಯಾಂಟೀನ್‌ಗೆ ಇಲ್ಲಿ ಜಾಗ ನೀಡಲಾಗಿದೆ. ಕಳೆದ ಐದಾರು ತಿಂಗಳ ಹಿಂದೆಯೇ ಕಟ್ಟಡ ಪೂರ್ಣಗೊಂಡಿದ್ದು, ಇದಕ್ಕೆ ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳ ಸಂಪರ್ಕ ಇನ್ನೂ ಕಲ್ಪಿಸಲಾಗಿಲ್ಲ. ಹೀಗಾಗಿ, ಈ ಕಟ್ಟಡ ಈಗ ಅಕ್ರಮ ಚಟುವಟಿಕೆಗಳ ತಾಣವಾಗಿದೆ.

ಹಾರೋಹಳ್ಳಿ ಪಟ್ಟಣದಲ್ಲಿ ಪ್ರತಿನಿತ್ಯ ಸಾವಿರಾರು ಕಾರ್ಮಿಕರು, ವಿದ್ಯಾರ್ಥಿಗಳು ಕೆಲಸಕ್ಕೆ ಹಾಗೂ ಶಾಲಾ–ಕಾಲೇಜಿಗೆ ತೆರಳುತ್ತಾರೆ. ಇವರ ಅನುಕೂಲಕ್ಕಾಗಿ ಇಂದಿರಾ ಕ್ಯಾಂಟೀನ್ ಮಾಡಿದ್ದು, ಇದರ ಅಗತ್ಯವೂ ಹೆಚ್ಚಿದೆ. ಖಾಲಿ ಕಟ್ಟಡವನ್ನೇ ಬಂಡವಾಳ ಮಾಡಿಕೊಂಡ ಕಿಡಿಗೇಡಿಗಳು ರಾತ್ರಿಯಾದರೆ ಸಾಕು, ಕುಡಿತ ಹಾಗೂ ಅಕ್ರಮ ಚಟುವಟಿಕೆಗಳ ತಾಣವಾಗಿ ಮಾಡಿಕೊಂಡಿದ್ದಾರೆ.

ಒಂದು ಕಡೆ ಅಕ್ರಮ ಚಟುವಟಿಕೆಯಾದರೆ ಮತ್ತೊಂದು ಕಡೆ ದ್ವಿಚಕ್ರ ವಾಹನ ಸವಾರರ ಪಾರ್ಕಿಂಗ್ ಸ್ಥಳವಾಗಿ ಮಾರ್ಪಟ್ಟಿದೆ. ಈ ಅಕ್ರಮ ಚಟುವಟಿಕೆ ತಡೆಯಲು ಪೊಲೀಸರು ಹಾಗೂ ಸಂಬಂಧಪಟ್ಟ ಪಟ್ಟಣ ಪಂಚಾಯತ್ ಅಧಿಕಾರಿಗಳು ಗಮನಹರಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.



☛ ಉದಯವಾಹಿನಿ ಚಿತ್ರ

---

# ಒತ್ತುವರಿಯಾಗಿದ್ದ ಉದ್ಯಾನದ ಜಾಗ ತೆರವು

• ಉದಯವಾಹಿನಿ ರಾಮನಗರ

ನಗರದ 27ನೇ ವಾರ್ಡ್ ನಲ್ಲಿರುವ ಶಾಂತಿನಗರ ಲೇಔಟ್‌ನಲ್ಲಿ ಒತ್ತುವರಿಯಾಗಿದ್ದ ಉದ್ಯಾನಕ್ಕೆ ಮೀಸಲಿಟ್ಟಿದ್ದ ಅಂದಾಜು 10 ಕೋಟಿ ಬೆಲೆಬಾಳುವ 1 ಎಕರೆ 30 ಗುಂಟೆ ಜಾಗವನ್ನು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತೆರವುಗೊಳಿಸಿದರು. ಒತ್ತುವರಿಯಾಗಿದ್ದ ಜಾಗದಲ್ಲಿ ತಂತಿಬೇಲಿ ನಿರ್ಮಾಣ ಮಾಡಿ, ಸಾರ್ವಜನಿಕ ಉದ್ಯಾನಕ್ಕೆ ಮೀಸಲಿಟ್ಟ ಜಾಗವೆಂಬ ಬೋರ್ಡ್ ಹಾಕಿದರು. ಪ್ರಾಧಿಕಾರದ ಅಧ್ಯಕ್ಷ ಎ.ಬಿ. ಚೇತನ್ ಕುಮಾರ್ ನೇತೃತ್ವದಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಆಯುಕ್ತ ಶಿವನಂಕರಿಗೌಡ, ತಹಶೀಲ್ದಾರ್ ತೇಜಸ್ವಿನಿ ಹಾಗೂ ಪೊಲೀಸರು ಸ್ಥಳೀಯರ ಸಮ್ಮುಖದಲ್ಲಿ ಕಾರ್ಯಾಚರಣೆ ನಡೆಸಿದರು.

ಈ ವೇಳೆ ಮಾತನಾಡಿದ ಚೇತನ್ ಕುಮಾರ್, ಸ್ಥಳೀಯರು ನೀಡಿದ್ದ ದೂರಿನ ಆಧಾರದ ಮೇರೆಗೆ, ತಹಶೀಲ್ದಾರ್ ಅವರು ಸರ್ವೆ ಮಾಡಿಸಿದ್ದರು. ನಂತರ, ಜಾಗದ ಗಡಿಯನ್ನು ಗುರುತಿಸಿ ಪೊಲೀಸರ ನೆರವಿನೊಂದಿಗೆ ಒತ್ತುವರಿ ತೆರವು ಮಾಡಿ, ಜಾಗಕ್ಕೆ ಬೇಲಿ ಹಾಕಿ ಬೋರ್ಡ್ ಸಹ ಹಾಕಿದ್ದೇವೆ. ಕಾರ್ಯಾಚರಣೆಗೆ ಸ್ಥಳೀಯರ ನೀಡಿದ ಸಹಕಾರ ಮರೆಯುವಂತಿಲ್ಲ' ಎಂದರು. ಆಯುಕ್ತರಾದ ಶಿವನಾಂಕರಿಗೌಡ, 'ಸರ್ವೆ ನಂ 72, 73, 74/2, 151, 152 ವ್ಯಾಪ್ತಿಯಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿ 1 ಎಕರೆ 30 ಗುಂಟೆ ಜಾಗವನ್ನು ಉದ್ಯಾನಕ್ಕೆ ಮೀಸಲಿಡಲಾಗಿದ್ದು, ಪ್ರಾಧಿಕಾರದ ಆಯುಕ್ತರ ಹೆಸರಿಗೆ ನೋಂದಣಿಯಾಗಿದೆ. ಆದರೆ, ಕೆಲವರು ಹತ್ತು ವರ್ಷಕ್ಕೆ ಮುಂಚೆಯೇ ಒತ್ತುವರಿ ಮಾಡಿಕೊಂಡಿದ್ದರು' ಎಂದು ತಿಳಿಸಿದರು.

**ಕಡೆಗೂ ಸ್ಪಂದನೆ:** ಒತ್ತುವರಿ ಕುರಿತು ಹಿಂದೆಯೂ ಪ್ರಾಧಿಕಾರಕ್ಕೆ ದೂರು ಕೊಟ್ಟಿದ್ದೆವು. ಯಾರೂ ಸ್ಪಂದಿಸಿರಲಿಲ್ಲ. ಆಗ ಒತ್ತುವರಿದಾರರು ನಮ್ಮ ಮೇಲೆಯೇ ಗಲಾಟೆ ಮಾಡಿದ್ದರು. ಇದೀಗ ಅಧ್ಯಕ್ಷರು ಹಾಗೂ ಆಯುಕ್ತರು ಒತ್ತುವರಿ ತೆರವು ಮಾಡುವ ಮೂಲಕ ಉದ್ಯಾನಕ್ಕೆ ಮೀಸಲಾಗಿದ್ದ ಜಾಗ ಬಿಡಿಸಿದ್ದಾರೆ. ಅವರಿಗೆ ಅಭಿನಂದನೆಗಳು' ಎಂದು ಜಿಗೇನಹಳ್ಳಿ ವಾರ್ಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ಕೃತಜ್ಞತೆ ಸಲ್ಲಿಸಿದರು.



☛ ಉದಯವಾಹಿನಿ ಚಿತ್ರ

**10 ಕೋಟಿ ಬೆಲೆಬಾಳುವ 1 ಎಕರೆ 30 ಗುಂಟೆ ಜಾಗ**

---

# ಕೊಲೆ ಆರೋಪಿ ಬಂಧನ

• ಉದಯವಾಹಿನಿ ವಿರಾಜಪೇಟೆ

ಕೆದಮುಳ್ಳೂರು ಗ್ರಾಮದಲ್ಲಿ ಅಭಿ ಎಂಬಾತ ಹೆಂಡತಿಯ ಸಹೋದರ ಮಂಜುನನ್ನು (22) ಕೊಲೆ ಮಾಡಿರುವ ಬಗ್ಗೆ ದೂರು ದಾಖಲಾಗಿದೆ. ಪೊಲೀಸರು ಮೃತ ಮಂಜುವಿನ ಭಾವ ಅಭಿ ಎಂಬಾತನನ್ನು ಬಂಧಿಸಿದ್ದಾರೆ. ಗ್ರಾಮದ ತೋಟವೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭ ಇಬ್ಬರ ನಡುವೆ ಜಗಳವುಂಟಾಗಿ ಅಭಿ ಮಂಜುವನ್ನು ಕೊಲೆ ಮಾಡಿ ಮೃತದೇಹವನ್ನು ಹುಲ್ಲಿನ ಬಣವೆಯಲ್ಲಿ ಬಚ್ಚಿಟ್ಟಿದ್ದ. ಮಂಜು ಕಾಣದಿದ್ದರಿಂದ ಆತನ ತಂದೆ ಪೊಲೀಸರಿಗೆ ದೂರು ನೀಡಿದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

---

# ಗೋಮಾಳ ಒತ್ತುವರಿ ಆರೋಪ: ರಾತ್ರೋರಾತ್ರಿ ಮರಗಳು ನೆಲಸಮ

## ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಗೋಮಾಳ ಜಮೀನು ಒತ್ತುವರಿ ಮಾಡಿಕೊಂಡಿದ್ದರೂ ಅಧಿಕಾರಿಗಳು ಸುಮ್ಮನ್ನಿದ್ದಾರೆ

• ಉದಯವಾಹಿನಿ ಬಂಗಾರಪೇಟೆ

ತಾಲ್ಲೂಕಿನ ಕಾಮಸಮುದ್ರ, ಹೋಬಳಿಯ ವರದಾಪುರ ಗ್ರಾಮದಲ್ಲಿರುವ ಕೋಟ್ಯಂತರ ರೂಪಾಯಿ ಬೆಲೆ ಬಾಳುವ 142 ಎಕರೆ ಗೋಮಾಳ ಜಮೀನನ್ನು ಭೂಗಳ್ಳರು ರಾತ್ರೋರಾತ್ರಿ ಒತ್ತುವರಿ ಮಾಡಿಕೊಂಡಿದ್ದಾರೆ.

ಈ ಗೋಮಾಳ ಜಮೀನಿನಲ್ಲಿ ಹಲವು ಹಳೆಯ ಮರಗಳಿದ್ದವು. ರಾತ್ರೋರಾತ್ರಿ ಮರಗಳನ್ನು ಕಡಿದು ಸಾಗಿಸಿರುವ ಭೂಗಳ್ಳರು ಜಮೀನಿನಲ್ಲಿ ಉಳುಮೆ ಮಾಡಲು ಮುಂದಾಗಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 2 ಕೋಟಿ ನಷ್ಟ ಉಂಟು ಮಾಡಿದ್ದಾರೆ ಬತ್ತಲಾಯೂರಿನ ತನಿಮಡಗು, ಮುಷ್ಟ್ರಹಳ್ಳಿ ಗುಂಡಾರ್ಲಹಳ್ಳಿ ಬಾದಗುಟ್ಟಹಳ್ಳಿ ಗ್ರಾಮಗಳ ಜಾನುವಾರು ಮೇಯಿಸಲು ಗೋಮಾಳ ಜಾಗ ಕಾಯ್ದಿರಿಸಲಾಗಿದೆ. ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಗೋಮಾಳ ಜಮೀನು ಒತ್ತುವರಿ ಮಾಡಿಕೊಂಡಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ಸುಮ್ಮನ್ನಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಹೊರ ರಾಜ್ಯದ ಶ್ರೀಮಂತರು ರಾಜ್ಯದ ಜಮೀನಿನ ಮೇಲೆ ಕಣ್ಣು ಹಾಕಿದ್ದು, ರಾತ್ರೋರಾತ್ರಿ ಜಮೀನು ನನ್ನದು ಎಂದು ವಾದ ಮಾಡಿಕೊಂಡು ಮರಗಳನ್ನು ಕಡಿದು ಹಾಕಿದ್ದಾರೆ ಉಳುಮೆ ಮಾಡುವ ಮೂಲಕ ಜಮೀನಿನ ಮೇಲಿನ ಹಕ್ಕು ಪ್ರತಿಪಾದಿಸುತ್ತಿದ್ದಾರೆ.

ಆದರೆ ಸಂಬಂಧಪಟ್ಟ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂಬುದು ಗ್ರಾಮಸ್ಥರ ಆರೋಪ. ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯರೊಬ್ಬರು ಹೊರ ರಾಜ್ಯದ ಆಂಧ್ರಪ್ರದೇಶದ ಮೂಲದ ವಿ ಕೋಟೆಯ ಟೊಮೆಟೊ ವ್ಯಾಪಾರಿ ಸೇರಿ ಗೋಮಾಳ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಕೊಡುತ್ತೇವೆ ಎಂದು ಹೇಳಿ ಸುತ್ತಮುತ್ತಲಿನ ರೈತರಿಂದ 5 ಲಕ್ಷ ದಂತೆ ವಸೂಲಿ ಮಾಡಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಜಮೀನು ನುಂಗಲು ಯತ್ನಿಸಿದ್ದಾರೆ ಎಂದು ಸ್ಥಳೀಯರು ದೂರುತ್ತಾರೆ.

ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಲು ಪ್ರಯತ್ನಿಸಿ ಈಗಾಗಲೇ ಜೈಲು ಶಿಕ್ಷೆಯನ್ನು ಅನುಭವಿಸಿ ಇದ್ದರೂ ಸಹ ಭೂಗಳ್ಳರಿಂದ ಸುಮಾರು 50 ರಿಂದ 60 ಲಕ್ಷ ರೂಪಾಯಿಗಳವರೆಗೆ ವಸೂಲಿಯನ್ನು ಮಾಡಿಕೊಂಡು ಗೋಮಾಳ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಕೊಡುವುದಾಗಿ ಭರವಸೆಯನ್ನು ನೀಡಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ಈ ಭೂಗಳ್ಳರಿಂದ ಗೋಮಾಳ ಜಮೀನನ್ನು ರಕ್ಷಣೆ ಮಾಡಿ ಸುತ್ತಮುತ್ತಲ ಗ್ರಾಮಸ್ಥರ ಜಾನುವಾರುಗಳ ಹಾಗೂ ಕುರಿಗಳು ಮೇಕೆಗಳನ್ನು ಮೇಯಿಸುಲು ಅನುಕೂಲವನ್ನು ಮಾಡಿಕೊಡಬೇಕಾಗಿ ಕಂದಾಯ ಇಲಾಖೆಯ ಆಧಿಕಾರಿಗಳನ್ನು ಸುತ್ತಮುತ್ತಲಿನ ಗ್ರಾಮಸ್ಥರ ಒತ್ತಾಯಿಸಿದರು. ಜಮೀರ್ ಷಾ ಕಾಮಸಮುದ್ರ, ರಾಜಸ್ವ ನಿರೀಕ್ಷಕ ವರದಾಪುರ ಗ್ರಾಮದಲ್ಲಿ ಗೋಮಾಳ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬುದು ಗಮನಕ್ಕೆ ಬಂದಿದೆ. ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ

ಅಂಜಿ ಬತ್ತಲಾಯೂರಿನ ನಿವಾಸಿಭೂಗಳ್ಳರಿಂದ ಒತ್ತುವರಿಯಾದ ಗೋಮಾಳ ಜಮೀನನ್ನು ಕೂಡಲೇ ತೆರವುಗೊಳಿಸಬೇಕು.



☛ ಉದಯವಾಹಿನಿ ಚಿತ್ರ

**ಸುಮಾರು 2 ಕೋಟಿ ನಷ್ಟ**

### ಅಧಿಕಾರಿಗಳ ನಿರ್ಲಕ್ಷ್ಯ

ಸರ್ಕಾರ ತನ್ನ ವಶಕ್ಕೆ ಪಡೆದು ಜಾನುವಾರುಗಳ ಮೇವಿಗೆ ಅನುವು ಮಾಡಿಕೊಡಬೇಕು ಸುಬ್ರಮಣಿ ಬತ್ತಲಾಯೂರು ಹಿಂದಿನ ಕಾಲದಿಂದಲೂ ಕುರಿ ಹಸುಗಳನ್ನು ಮೇಯಿಸಲು ಗೋಮಾಳ ಜಮೀನು ಕಾಯ್ದಿರಿಸಲಾಗಿದೆ. ಆದರೆ ಇಂದು ಈ ಜಮೀನಿನ ಮೇಲೆ ಭೂಗಳ್ಳರ ಕಣ್ಣು ಬಿದ್ದಿದೆಸಂದರಪ್ಪ ಕುರಿಗಾಹಿ ಬತ್ತಲಾಯೂರುಸರ್ಕಾರದ ಆಸ್ತಿ– ಪಾಸ್ತಿ ರಕ್ಷಿಸುವುದು ಕಂದಾಯ ಇಲಾಖೆ ಅಧಿಕಾರಿಗಳ ಕರ್ತವ್ಯವಾಗಿದೆ. ಆದರೆ ಅವರ ನಿರ್ಲಕ್ಷ್ಯವು ಅನುಮಾನಗಳಿಗೆ ಕಾರಣವಾಗಿದೆ.

---

# ಮಿನಿ ನ್ಯೂಸ್

## ರಾಷ್ಟ್ರಗೀತೆಗೆ ಅಪಮಾನ: ತಮಿಳುನಾಡು ಸರ್ಕಾರ ವಜಾಗೊಳಿಸಲು ಮನವಿ

• ಉದಯವಾಹಿನಿ ಚಾಮರಾಜನಗರ

ತಮಿಳುನಾಡು ವಿಧಾನಸಭೆಯಲ್ಲಿ ರಾಷ್ಟ್ರಗೀತೆ ಹಾಡಲು ನಿರಾಕರಣೆ ಮಾಡಿರುವ ತಮಿಳುನಾಡು ಸರ್ಕಾರದ ಕ್ರಮ ಖಂಡನೀಯ ಎಂದು ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನಗರದ ಚಾಮರಾಜೇಶ್ವರ ಉದ್ಯಾನದ ಮುಂಭಾಗದಲ್ಲಿ ಜಮಾಯಿಸಿದ ಕರ್ನಾಟಕ ಸೇನಾಪಡೆ ಪ್ರತಿಭಟನಾನಿರತರು ಮೆರವಣಿಗೆಯ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, 'ತಮಿಳುನಾಡಿನ ವಿಧಾನಸಭೆ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣಕ್ಕೂ ಮುನ್ನ ರಾಷ್ಟ್ರಗೀತೆ ಗಾಯನಕ್ಕೆ ನಿರಾಕರಿಸುವ ಮೂಲಕ ತಮಿಳುನಾಡು ಸರ್ಕಾರ ರಾಷ್ಟ್ರಗೀತೆಗೆ ಅಪಮಾನ ಮಾಡಿದೆ.

ದೇಶದ ಒಕ್ಕೂಟ ವ್ಯವಸ್ಥೆಗೆ ಅಗೌರವ ತೋರಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ತಮಿಳುನಾಡು ಸರ್ಕಾರ ಹಿಂದಿಹಿಂದಲೂ ಉದ್ಧಟತನ ತೋರುತ್ತಿದ್ದು, ಇದೀಗ ರಾಷ್ಟ್ರಗೀತೆಗೆ ಅಪಮಾನ ಮಾಡಿದೆ. ಕೂಡಲೇ ರಾಷ್ಟ್ರಪತಿಗಳು ತಮಿಳುನಾಡು ಸರ್ಕಾರವನ್ನು ವಜಾಗೊಳಿಸಬೇಕು' ಎಂದು ಆಗ್ರಹಿಸಿದರು.

## 12ಕ್ಕೆ ಕುಸಿದ ತಾಪಮಾನ: ಮಡಿಕೇರಿಯಲ್ಲಿ ನಡುಗಿಸುತ್ತಿರುವ ಮಾಗಿ ಚಳಿ

• ಉದಯವಾಹಿನಿ ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಲ್ಲಿ ಕನಿಷ್ಠ ತಾಪಮಾನ ಮತ್ತೊಮ್ಮೆ 12 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದ್ದು, ಅಕ್ಷರಶಃ ಜನರು ಥರಗುಟ್ಟಿದರು. ಒಟ್ಟು 3 ಬಾರಿ ತಿಂಗಳಲ್ಲಿ ಕನಿಷ್ಠ ತಾಪಮಾನ 12 ಡಿಗ್ರಿ ದಾಖಲಾಗಿದೆ. ಗುರುವಾರ ಬೆಳಿಗ್ಗೆ ದಟ್ಟವಾಗಿ ಕವಿದಿದ್ದ ಮಂಜು, ತುಸು ಬಲವಾಗಿಯೇ ಬೀಸುತ್ತಿದ್ದ ಶೀತಗಾಳಿಯಿಂದ ಜನರು ನಡುಗಿದರು. ದಿನಪತ್ರಿಕೆ ಹಾಕುವವರು, ವಾಯುವಿಹಾರಿಗಳು ನಡುಗುತ್ತಲೇ ಹೆಜ್ಜೆ ಹಾಕಿದರು. ಬಿಸಿಲು ಸಹ ಕೊಂಚ ತಡವಾಗಿಯೆ ಕಾಣಿಸಿಕೊಂಡಿತು. ಶಾಲಾ ಮಕ್ಕಳೂ ಸ್ವೆಟರ್ ಧರಿಸಿ, ನಡುಗುತ್ತಲೇ ಶಾಲೆಗೆ ಸಾಗಿದ ದೃಶ್ಯಗಳು ಕಂಡು ಬಂದವು.

ಈ ಕುರಿತು ಪ್ರತಿಕ್ರಿಯಿಸಿದ ಮೈಸೂರಿನ ನಾಗನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಗ್ರಾಮೀಣ ಕೃಷಿ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ಜಿ.ವಿ.ಸುಮಂತಕುಮಾರ್, 'ಉತ್ತರ ಭಾರತದಿಂದ ದಕ್ಷಿಣ ಭಾರತದ ಕಡೆಗೆ ಶೀತಗಾಳಿ ಬೀಸುತ್ತಿರುವುದರಿಂದ ಚಳಿ ಹೆಚ್ಚಾಗಿದೆ. ಆದರೆ, ದಕ್ಷಿಣ ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಂತಹ ತಿರುವಿಕೆ ಉಂಟಾಗಿದ್ದು, ಶ್ರೀಲಂಕಾ ಕರಾವಳಿಗೆ ತಲುಪುವ ನಿರೀಕ್ಷೆ ಇದೆ. ಇದರ ಪ್ರಭಾವದಿಂದ ಉತ್ತರ ಭಾರತ ಕಡೆಯಿಂದ ದಕ್ಷಿಣದ ಕಡೆಗೆ ಈಗ ಬೀಸುತ್ತಿರುವ ಶೀತ ಗಾಳಿಯು ಕಡಿಮೆಯಾಗಿ ಬಂಗಾಳಕೊಲ್ಲಿಯ ಕಡೆಯಿಂದ ಗಾಳಿ ಬೀಸಲು ಆರಂಭವಾಗುವ ಸಾಧ್ಯತೆಗಳಿವೆ' ಎಂದು ಹೇಳಿದರು.

ಇದರಿಂದ ರಾಜ್ಯದಲ್ಲಿ ಚಳಿಯ ಪ್ರಮಾಣ ಕಡಿಮೆಯಾಗಿ, ಅಲ್ಲಲ್ಲಿ ಮೋಡದ ವಾತಾವರಣ ಉಂಟಾಗುವ ಮುನ್ಸೂಚನೆ ಇದೆ. ಈಗಿನಂತೆ ಜ. 12ರಿಂದ 2 ದಿನಗಳ ಕಾಲ ದಕ್ಷಿಣ ಒಳನಾಡು, ಮಲೆನಾಡು ಹಾಗೂ ದಕ್ಷಿಣ ಕರಾವಳಿ ಭಾಗಗಳಲ್ಲಿ ಅಲ್ಲಲ್ಲಿ ತುಂತುರು ಮಳೆಯ ಸಾಧ್ಯತೆ ಇದೆ ಎಂದು ತಿಳಿಸಿದರು.

ಪ್ರಸಕ್ತ ಚಳಿಗಾಲದಲ್ಲಿ ಡಿ. 16ರಂದು ಹಾಗೂ ಜ. 5ರಂದು ಸಹ ತಾಪಮಾನ 12ಕ್ಕೆ ಕಡಿಮೆಯಾಗಿತ್ತು. ನಂತರ ತುಸು ಚೇತರಿಕೆ ಕಂಡಿದ ಕನಿಷ್ಠ ತಾಪಮಾನ 15ರವರೆಗೂ ಏರಿಕೆ ಕಂಡಿತ್ತು. ಆದರೆ, ಗುರುವಾರ ಮತ್ತೆ 12ಕ್ಕೆ ಕುಸಿದಿದೆ. ಹಗಲಿನ ವೇಳೆ ಬಿರು ಬಿಸಿಲಿದ್ದರೂ ಚಳಿಯ ಪ್ರಭಾವ ಕಡಿಮೆಯಾಗಿಲ್ಲ. ಮುಂಬರುವ ದಿನಗಳಲ್ಲಿ ಇನ್ನಷ್ಟು ಚಳಿ ಹೆಚ್ಚಬಹುದು ಎಂಬ ದಿಗಿಲು ಜನರಲ್ಲಿದೆ.

## ಕಾರು ಡಿಕ್ಕಿ–ಜಿಂಕೆ ಸಾವು: ಚಾಲಕನ ಬಂಧನ

• ಉದಯವಾಹಿನಿ ಚಾಮರಾಜನಗರ

ಕಾರು ಡಿಕ್ಕಿ ಹೊಡೆದು ರಸ್ತೆ ದಾಟುತ್ತಿದ್ದ ಜಿಂಕೆ ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಕೇರಳ ರಾಷ್ಟ್ರೀಯ ಹೆದ್ದಾರಿ–766ರ ಬಂಡೀಪುರ ಅಭಯಾರಣ್ಯದ ಮದ್ದೂರು ವಲಯದ ಕಗ್ಗಳದ ಹುಂಡಿ ಸಮೀಪದಲ್ಲಿ ಗುರುವಾರ ನಡೆಯಿತು.

ಕಾರು ಚಾಲಕನನ್ನು ಬಂಧಿಸಲಾಗಿದೆ. ಕೇರಳದ ವಯನಾಡ್‌ನ ಝಾಕೀರ್(56) ಬಂಧಿತ ಆರೋಪಿ. ಈತ ಕೇರಳದಿಂದ ಗುಂಡ್ಲುಪೇಟೆ ಕಡೆಗೆ ಸ್ವಿಫ್ಟ್ (ಕೆ.ಎಲ್.72–313) ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದ. ಈ ವೇಳೆ ಕಗ್ಗಳದಹುಂಡಿ ಸಮೀಪ ರಸ್ತೆ ದಾಟುತ್ತಿದ್ದ ಜಿಂಕೆಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಜಿಂಕೆ ರಸ್ತೆಯಲ್ಲೇ ಪ್ರಾಣ ಕಳೆದುಕೊಂಡಿದೆ. ನಂತರ ಅರಣ್ಯಾಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ ಚಾಲಕನ್ನು ಬಂಧಿಸಿ, ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಆರ್‌ಎಫ್‌ಓ ಕೆ.ಪಿ.ಸತೀಶ್ ಕುಮಾರ್ ಮಾಹಿತಿ ನೀಡಿದ್ದಾರೆ.

## ಪರಿಹಾರ ವಿತರಣೆ

• ಉದಯವಾಹಿನಿ ಕೆ.ಆರ್.ಪೇಟೆ

ಮೈಸೂರಿನ ಆರ್ಯಾಂಬ ಫೌಂಡೇಷನ್ ವತಿಯಿಂದ ಪಟ್ಟಣದ ಸುಭಾಷ್ ನಗರ ಬಡಾವಣೆಯ ರಹಮತ್ ಉನ್ನೀಸಾ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಿಸಲಾಯಿತು. ಆರ್ಯಾಂಬ ಫೌಂಡೇಷನ್ ಸ್ವಸಹಾಯ ಸಂಘದ ಸದಸ್ಯೆ ಸುಭಾಷ್ ನಗರ ಬಡಾವಣೆಯಲ್ಲಿರುವ ರೆಹಮತ್ ಉನ್ನೀಸಾ ಅವರ ನಿವಾಸಕ್ಕೆ ಆಗಮಿಸಿದ ಮೈಸೂರಿನ ಆರ್ಯಾಂಬ ಫೌಂಡೇಷನ್ ಅಧಿಕಾರಿಗಳು ಇತ್ತೀಚೆಗೆ ಹೃದಯಾಘಾತದಿಂದ ನಿಧನರಾಗಿದ್ದ ರೆಹಮತ್ ಉನ್ನೀಸಾ ಅವರ ಪತಿ ಮಹಮದ್ ಹುಸೇನ್ ಅವರಿಗೆ ಸಂತಾಪ ಸೂಚಿಸಿ ಕುಟುಂಬದ ನೆರವಿಗಾಗಿ ಆರ್ಥಿಕ ಸಹಾಯದ ಚೆಕ್ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಆರ್ಯಾಂಬ ಫೌಂಡೇಷನ್ ಮುಖ್ಯ ವ್ಯವಸ್ಥಾಪಕ ಹೆಚ್.ಎಸ್. ಮಧುಕುಮಾರ್ ನಮ್ಮದು ಒಂದು ಸ್ವಸಹಾಯ ಸೇವಾ ಸಂಸ್ಥೆಯಾಗಿದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ಅನೇಕ ಕಡೆ ಕೆಲಸ ಮಾಡುತ್ತಿದೆ. ಸ್ವಾವಲಂಭಿ ಕುಟುಂಬದ ನಿರ್ಮಾಣದ ಗುರಿಯೊಂದಿಗೆ ನಮ್ಮ ಸಂಸ್ಥೆ ಕೆಲಸ ಮಾಡುತ್ತಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಭನೆಗಾಗಿ ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳನ್ನು ರಚಿಸಿ ಅವರಿಗೆ ಆರ್ಥಿಕ ಸೌಲಭ್ಯ, ಗೃಹ ಉದ್ದಿಮೆಗಳಿಗೆ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಅಗತ್ಯ ಸಾಲದ ನೆರವು ಮತ್ತಿತರ ಸೇವಾ ಕಾರ್ಯಗಳನ್ನು ಮಾಡುತ್ತಿದೆ. ನಮ್ಮ ಸಂಸ್ಥೆಯ ಎಲ್ಲಾ ಸದಸ್ಯರ ಕುಟುಂಬಗಳಿಗೂ ವಿಮಾ ಸೌಲಭ್ಯ ಇದೆ.

# ಕಣ ಪದ್ಧತಿ ಮಾಯ, ರಸ್ತೆ ಒಕ್ಕಣೆ ಅಪಾಯ: ಸವಾರರಿಗೆ ಸಂಕಷ್ಟ

## • ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿ ಡಾಂಬರ್ ರಸ್ತೆಗಳೇ ಒಕ್ಕಲು ಕಣಗಳಾಗಿ ಬದಲಾಗಿವೆ

**• ಉದಯವಾಹಿನಿ ನಾಯಕನಹಟ್ಟಿ**

ಹೋಬಳಿಯ ಬಹುತೇಕ ಗ್ರಾಮಗಳಲ್ಲಿ ರೈತರು ಸುಗ್ಗಿ ಕಾಲದಲ್ಲಿ ಧಾನ್ಯ ಒಕ್ಕಲಿಗೆಂದು ನಿರ್ಮಿಸುತ್ತಿದ್ದ ಕಣ ಪದ್ಧತಿ ಕಣ್ಮರೆಯಾಗಿದ್ದು, ಡಾಂಬರು ರಸ್ತೆಯನ್ನೇ ಕಣವನ್ನಾಗಿ ಬಳಸುತ್ತಿರುವುದು ವಾಹನ ಸವಾರರಿಗೆ ಸಂಕಷ್ಟ ತಂದಿದೆ. ಹೋಬಳಿಯ ಚನ್ನಬಸಯ್ಯನಹಟ್ಟಿ, ಗೌಡಗೆರೆ, ಜೋಗಿಹಟ್ಟಿ, ಅಬ್ಬೇನಹಳ್ಳಿ, ಮುಷ್ಟಲಗುಮ್ಮಿ ಭೀಮಗೊಂಡನಹಳ್ಳಿ, ಮಲ್ಲೂರಹಳ್ಳಿ, ಗುಂತಕೋಲ್ಮನಹಳ್ಳಿ, ತೊರೆಕೋಲಮ್ಮನಹಳ್ಳಿ, ಮಲ್ಲೇಬೋರನಹಟ್ಟಿ ಸೇರಿ ಹತ್ತಾರು ಗ್ರಾಮಗಳಲ್ಲಿ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು ರಸ್ತೆ ಒಕ್ಕಣೆಗೆ ಮುಂದಾರಾಗಿದ್ದಾರೆ.


ಹೋಬಳಿಯಾದ್ಯಂತ ಸುಗ್ಗಿಕಾಲ ಆರಂಭವಾಗಿದ್ದು, ಸಿರಿಧಾನ್ಯಗಳಾದ ರಾಗಿ, ಸಜ್ಜೆ, ನವಣೆ, ತೊಗರಿ, ಹುರುಳಿ ಬೆಳೆಗಳಿಂದ ಕಾಳುಗಳನ್ನು ಬೇರ್ಪಡಿಸುವ ಕಾರ್ಯ ನಡೆಯುತ್ತಿದೆ. ಕಳೆದೆರಡು ದಶಕಗಳ ಹಿಂದೆ ರೈತರು ತಮ್ಮ ಜಮೀನು ಹಾಗೂ ಮನೆಗಳ ಬಳಿ ಕಣ ನಿರ್ಮಿಸಿ ಒಕ್ಕಲು ಪದ್ಧತಿ ಅನುಸರಿಸಿ ಕಾಳುಗಳನ್ನು ಬೇರ್ಪಡಿಸುತ್ತಿದ್ದರು. ಆದರೆ, ಕಾಲ ಬದಲಾಗುತ್ತಾ ಕಣ ಪದ್ಧತಿ ಸಂಪೂರ್ಣ ಮಾಯವಾಗಿ ರಸ್ತೆ ಒಕ್ಕಲು ಪದ್ಧತಿ ಅಸ್ತಿತ್ವಕ್ಕೆ ಬಂದಿದೆ. ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿ ಡಾಂಬರ್ ರಸ್ತೆಗಳೇ ಒಕ್ಕಲು ಕಣಗಳಾಗಿ ಬದಲಾಗಿವೆ. ರಸ್ತೆ ಮೇಲೆ ಒಕ್ಕಲಿಗೆ ತೆನೆಗಳನ್ನು ಹಾಕಿದಲ್ಲಿ ವಾಹನಗಳು ಅವುಗಳ ಮೇಲೆ ಸಂಚರಿಸಿದರೇ ಕಾಳು ಬೇರ್ಪಡುತ್ತದೆ. ವಾಹನ ಸವಾರರು ತೆನೆ ಬಿಟ್ಟು ಹೋಗಲೂ ಆಗದು, ಹೋದರೆ ಕಾಳು ಬೇರ್ಪಡದು ಎಂಬ ಸ್ಥಿತಿ ಇದೆ.

> ಕೆ.ಜಿ.ಆರ್.ಮಲ್ಲಿಕಾರ್ಜುನ ಬೈಕ್ ಸವಾರ ನಾಯಕನಹಟ್ಟಿರಸ್ತೆ ಕಣದಿಂದ ಲಘುವಾಹನಗಳ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವ ಸ್ಥಿತಿ ಇದೆ. ಪ್ರತಿವರ್ಷ ಸುಗ್ಗಿ ಕಾಲದಲ್ಲಿ ಬೈಕ್ ಚಲಾಯಿಸುವಾಗ ನಿಯಂತ್ರಣ ತಪ್ಪಿ ಗಾಯಗೊಂಡಿದ್ದೇವ.

**ವಾಹನ ಸವಾರರು ಹೈರಾಣ:** ಕೃಷಿಕರು ಹಲವು ರಸ್ತೆ, ಸೇತುವೆ, ಕಡಿದಾದ ತಿರುವುಗಳಲ್ಲಿ ಒಕ್ಕಣೆ ಕಾರ್ಯ ಮಾಡುತ್ತಿದ್ದು, ಸುಗಮ ಸಂಚಾರಕ್ಕೆ ಸಂಚಕಾರ ಉಂಟಾಗಿದೆ. ಇದರಿಂದ ವಾಹನ ಸವಾರರಿಗೆ ತೀವ್ರ ಕಿರಿಕಿರಿ ಆಗಿದೆ.

ಕೆಲವು ರೈತರು ರಸ್ತೆಯಲ್ಲಿ ಒಕ್ಕಲು ಮಾಡಿಕೊಳ್ಳುತ್ತಿದ್ದರೂ, ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದಾರೆ. ಆದರೆ ಕೆಲವು ರೈತರು ರಸ್ತೆಯಲ್ಲಿ ಓಡಾಡಲು ಸಹ ಸ್ಥಳಾವಕಾಶ ನೀಡದಂತೆ ರಸ್ತೆ ತುಂಬೆಲ್ಲಾ ಬೆಳೆಗಳನ್ನು ಹರಡುತಿದ್ದಾರೆ. ಇದರಿಂದ ದೊಡ್ಡ ವಾಹನಗಳಾದ ಲಾರಿಗಳು, ಬಸ್, ಟ್ರ್ಯಾಕ್ಟರ್‌ಗಳು ಹೇಗೋ ಸಂಚರಿಸುತ್ತವೆ. ಆದರೆ, ದ್ವಿಚಕ್ರ ವಾಹನಗಳು, ಆಟೊ, ಸಣ್ಣಪ್ರಮಾಣದ ಗೂಡ್ಸ್ ವಾಹನಗಳು, ಕಾರುಗಳು, ಶಾಲಾ ವಾಹನಗಳು ಸೇರಿ ಸಣ್ಣಪುಟ್ಟ ವಾಹನಗಳಿಗೆ ಈ ಒಕ್ಕಲು ಜಾಗವನ್ನು ದಾಟಿಕೊಂಡು ಹೋಗುವುದು ಸಾಕಷ್ಟು ತೊಂದರೆಯಾಗುತ್ತಿದೆ.

ರಸ್ತೆ ಪಕ್ಕದ ಗುಂಡಿ ಸಮೀಪ ವಾಹನಗಳನ್ನು ಚಲಾಯಿಸಬೇಕಿದೆ. ರಸ್ತೆಯಲ್ಲಿ ಸವಾರರಿಗೆ ದೂಳಿನ ಸಿಂಚನವಾಗುತ್ತಿದೆ. ವಾಹನಗಳ ಚಕ್ರಗಳಿಗೆ ಹುರುಳಿ ಬೆಳೆಯ ಬಳ್ಳಿ ಸುತ್ತಿಕೊಂಡು ವಾಹನಗಳು ಮುಂದೆ ಸಾಗದಂತೆ ಅಪಾಯ ತಂದೊಡ್ಡಿವೆ.ಎತ್ತುಗಳಿದ್ದಲ್ಲಿ ಕೃಷಿಗೂ, ಸುಗ್ಗಿಕಾಲದ ಒಕ್ಕಲು ಕಣಗಳಿಗೂ ಕಳೆ ಮತ್ತು ಬಲ. ಎತ್ತುಗಳೇ ಇಲ್ಲದ್ದರಿಂದ ಅಲ್ಪಸ್ವಲ್ಪ ಬೆಳೆಯ ಒಕ್ಕಣೆಗೆ ಯಂತ್ರಗಳು ಲಭಿಸದಿರುವುದು ಮತ್ತು ಕಾಳುಗಳನ್ನು ಬೇರ್ಪಡಿಸಲು ಇರುವ ಆಧುನಿಕ ಯಂತ್ರಗಳ ಬಾಡಿಗೆ ದುಬಾರಿ ಆಗಿರುವುದರಿಂದ ರೈತರು ಡಾಂಬರ್ ರಸ್ತೆ ಒಕ್ಕಣೆಗೆ ಮುಂದಾಗುತ್ತಿದ್ದಾರೆ. ಇದು ವಾಹನ ಸವಾರರಿಗೆ ಸಮಸ್ಯೆ ತಂದೊಡ್ಡಿದೆ. 'ರಾಜ್ಯ ಹೆದ್ದಾರಿಯಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತವೆ. ರಸ್ತೆ ಒಕ್ಕಣೆಯಲ್ಲಿ ಮಗ್ನರಾದ ರೈತರು ವಾಹನಗಳ ವೇಗವನ್ನು ಅರಿಯದೆ ರಸ್ತೆಯಲ್ಲಿಯೇ ಇರುತ್ತಾರೆ. ಇದರಿಂದ ವಾಹನಗಳ ಡಿಕ್ಕಿಯಿಂದ ಪ್ರಾಣಾಪಾಯ ಸಂಭವ ಹೆಚ್ಚಿರುತ್ತದೆ. ಹಾಗಾಗಿ ರೈತರು ರಸ್ತೆಯನ್ನು ಬಿಟ್ಟು ತಮ್ಮ ಜಮೀನಿನಲ್ಲೇ ಒಕ್ಕಣೆಗೆ ಮುಂದಾಗಬೇಕಿದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಾಮೂಹಿಕ ಮತ್ತು ರೈತರಿಗೆ ಪ್ರತ್ಯೇಕ ಕಣಗಳನ್ನು ನಿರ್ಮಿಸಿಕೊಳ್ಳಲು ಅವಕಾಶವಿತ್ತು. ಆದರೆ, ಯೋಜನೆಯ ದುರ್ಬಳಕೆಯಿಂದ ಹಿನ್ನಡೆಯಾಗಿದೆ. ಇದರಿಂದ ಕಣ ನಿರ್ಮಾಣ ಯೋಜನೆ ಕುಂಠಿತವಾಗಿದೆ.


ಉದಯವಾಹಿನಿ ಚಿತ್ರ

**ಕಲುಷಿತವಾಗುವ ಕಾಳುಗಳು**

ರಸ್ತೆ ಮೇಲೆ ಸಂಚರಿಸುವ ವಾಹನಗಳ ಚಕ್ರಗಳಿಗೆ ಕಾಳುಗಳು ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗುತ್ತವೆ. ಇದರಿಂದ ರೈತನಿಗೆ ಅರ್ಧ, ರಸ್ತೆಗೆ ಅರ್ಧ ಎನ್ನುವಂತಾಗುತ್ತದೆ. ಹೀಗೆ ರಸ್ತೆಯ ಮೇಲೆ ಒಕ್ಕಲು ಮಾಡುವುದರಿಂದ ಕಾಳುಗಳಲ್ಲಿ ಕಲ್ಲುಮಣ್ಣು ಸೇರಿ ಕಲುಷಿತಗೊಳ್ಳುತ್ತಿದೆ. ಈ ಬಗ್ಗೆ ರೈತರಿಗೂ ಅಸಮಧಾನವಿದೆ. ಹೋಬಳಿಯಾದ್ಯಂತ ಬಹುತೇಕ ಸಣ್ಣ ಮತ್ತು ಮಧ್ಯಮ ರೈತರಿದ್ದು, ಬಹುತೇಕರು ಎತ್ತುಗಳ ಸಾಕಣೆ ಸ್ಥಗಿತಗೊಳಿಸಿದ್ದಾರೆ.

**ಸುಗಮ ಸಂಚಾರಕ್ಕೆ ಸಂಚಕಾರ**

---

## ಶರಣರ ವಚನಗಳು ವೈಜ್ಞಾನಿಕ ಚಿಂತನೆಗಳಾಗಿ ಸಮಾಜದಲ್ಲಿನ ಮೌಢ್ಯತೆ, ಕಂದಾಚಾರ,ಅಧಾನುಕರಣೆ ವಿರೋಧಿಸುತ್ತೆ: ಡಾ.ರಾಜಶೇಖರ ಮಾಂಗ

**• ಉದಯವಾಹಿನಿ, ಚಿಂಚೋಳಿ**

12ನೇ ಶತಮಾನದಲ್ಲಿ ಶರಣರು ರಚಿಸಿದ ವಚನಗಳು ವೈಜ್ಞಾನಿಕ ಚಿಂತನೆಗಳಾಗಿ ಅವುಗಳು ಸಮಾಜದಲ್ಲಿನ ಮೌಢ್ಯತೆ,ಕಂದಾಚಾರ,ಅಂಧಾನುಕರಣೆಗಳನ್ನು ವಿರೋಧಿಸುತ್ತವೆ ಎಂದು ಕೋಡ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಚಾರ್ಯರು ಸಾಹಿತಿ ಡಾ.ರಾಜಶೇಖರ ಮಾಂಗ ಹೇಳಿದರು.

ಪಟ್ಟಣದ ಚಂದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕಾ ಘಟಕದ ವತಿಯಿಂದ ಏರ್ಪಡಿಸಿದ ವಚನ ಸಂಗೀತ ಕಾರ್ಯಕ್ರಮ ಮತ್ತು 2025ರ ಹೊಸ ವರ್ಷ ದಿನದರ್ಶಿಕೆ ಬಿಡುಗಡೆಗೊಳಿಸಿ ವಿಶೇಷ ಉಪನ್ಯಾಸ ನೀಡಿದ ಅವರು,ನೀರ ಕಂಡಲ್ಲಿ ಮುಳುಗುವರಯ್ಯ ಮರವ ಕಂಡಲ್ಲಿ ಸುತ್ತುವರಯ್ಯ,ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು,ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ, ದೇವಲೋಕ ಮರ್ತ್ಯ ಲೋಕ ಬೇರಿಲ್ಲ ಕಾಣಿರೋ, ಮುಂತಾದ ಬಸವಣ್ಣನವರ ವೈಚಾರಿಕ ವಚನಗಳನ್ನು ಉಲ್ಲೇಖಿಸಿ,ವಿದ್ಯಾರ್ಥಿಗಳು ಮೊಬೈಲ್ ಗೀಳು ಬಿಟ್ಟು ಅಚ್ಚ ಕನ್ನಡದಲ್ಲಿರುವ ಬಸವಾದಿ ಶರಣರ ವಚನಗಳನ್ನು ಮತ್ತು ಮಹಾ ಪುರುಷರ ಪುಸ್ತಕಗಳು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನು ಕೊಟ್ಟವರ ಇತಿಹಾಸವನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡಿ ದೇಶದ ಮಹಾಪುರಷರ ಚರಿತ್ರೆಗಳು ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಹಿರಿಯ ಉಪನ್ಯಾಸಕ ಹಣಮಂತ ಕೋರೆಯವರು ವಹಿಸಿಕೊಂಡರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಸವರಾಜ ಐನೋಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕರಾದ ಧನರಾಜ ಹಳ್ಳಿಖೇಡ,ಚಿತ್ರಕಲಾ ಶಿಕ್ಷಕ ನಾಗೇಶ ಬಿ.ಶೀಲವಂತ,ಮುಖ್ಯ ಗುರುಗಳಾದ ಗೋಪಾಲ ಯಂಪಳ್ಳಿ,ರೇವಣಸಿದ್ದಯ್ಯ ಹಿರೇಮಠ, ಶರಣಯ್ಯಸ್ವಾಮಿ ಅಲ್ಲಾಪೂರ,ಗುರುರಾಜ ಜೋಶಿ ಐನೋಳ್ಳಿ,ಗಣಪತ ದೇವಕತ್ತೆ ಸ್ವಾಗತಿಸಿದರು, ಶ್ರೀಶೈಲ್ ನಾಗಾವಿ ನಿರೂಪಿಸಿ ವಂದಿಸಿದರು.


ಉದಯವಾಹಿನಿ ಚಿತ್ರ

**ವಚನ ಸಂಗೀತ ಕಾರ್ಯಕ್ರಮ**

---

## ಸಾವಿತ್ರಿಬಾಯಿಪುಲೆ ಜಯಂತಿ: ಮಕ್ಕಳಿಗೆ ಪ್ರಬಂಧ ಸ್ಪರ್ಧೆ


ಉದಯವಾಹಿನಿ ಚಿತ್ರ

**• ಉದಯವಾಹಿನಿ, ಚಿತ್ರದುರ್ಗ**

ಚಳ್ಳಕೆರೆ ತಾಲೂಕಿನ ಅಬ್ಬೇನಹಳ್ಳಿ ಗ್ರಾಮದ ಮಾನವ ಬಂಧುತ್ವ ವೇದಿಕೆ ವತಿಯಿಂದ ಗ್ರಾಮದ ಶಾಲಾ ಮಕ್ಕಳಿಗೆ ಸಾವಿತ್ರಿಬಾಯಿ ಅವರ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. 150ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ವಿಜೇತ ಮಕ್ಕಳಿಗೆ ಬಹುಮಾನವನ್ನು ವಿತರಿಸಿ ಮಾತನಾಡಿದ ವೇದಿಕೆ ಕಾರ್ಯದರ್ಶಿ ಯನ್ನಪ್ಪ ಮಾತನಾಡಿ ಭಾರತದ ಮೊಟ್ಟಮೊದಲ ಶಿಕ್ಷಕಿ, ಸಾಮಾಜಿಕ ಸುಧಾರಕಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಸಾವಿತ್ರಿಬಾಯಿ ಫುಲೆಯವರ ಜೀವನ ಮತ್ತು ಕಾರ್ಯಗಳನ್ನು ನೆನಪಿಸಿಕೊಳ್ಳುವ ಕಾರ್ಯಕ್ರಮ ಇದಾಗಿದ್ದು ಈ ಮೂಲಕ ಸಾವಿತ್ರಿಬಾಯಿ ಪುಲೆ ಯವರ ಜೀವನ ಮತ್ತು ಆದರ್ಶವನ್ನು ಕುರಿತುಗ್ರಾಮೀಣ ಪ್ರದೇಶದ ಮಕ್ಕಳಿಗೆ ತಿಳಿಸಿಕೊಡುವುದಾಗಿದೆ ಇಂದಿನ ಎಲ್ಲಾ ಮಕ್ಕಳು, ಶಿಕ್ಷಕರು ಸಾವಿತ್ರಿಬಾಯಿ ಪುಲೆ ಅವರ ಆದರ್ಶ ಮತ್ತು ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿ ಸಾರ್ಥಕ ಜೀವನವನ್ನು ನಡೆಸಬೇಕು ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಸುಪುತ್ರಬಾಬು, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಪಾಪಮ್ಮ ಆನಂದಪ್ಪ, ಸದಸ್ಯರಾದ ಶೇಖರಪ್ಪ, ಪಡ್ಲಬೋರಯ್ಯ, ಕವಿತ ಕುಬೇರ, ಸಮನ್ವಯ ಸಮಿತಿ ಅಧ್ಯಕ್ಷ ಪಾಪಣ್ಣ, ಶಿಕ್ಷಕರಾದ ರಾಘವೇಂದ್ರ, ಹುಲಿಕುಂಟಪ್ಪ, ರೂಪಶ್ರೀ, ರಾಜಣ್ಣ, ಶಿವಣ್ಣ, ಸಣ್ಣ ಪಾಲಯ್ಯ, ಓಬಣ್ಣ, ಗ್ರಾಮಸ್ಥರಾದ ಜಯಲಕ್ಷ್ಮಿ, ಚನ್ನಪ್ಪ, ಮಲ್ಲಿಕಾರ್ಜುನ, ನಾಯಕನಹಟ್ಟಿ ಪಟ್ಟಣ ಪಂಚಾಯತಿ ಸದಸ್ಯರಾದ ಮಂಜುನಾಥ್ ಹಾಗೂ ಶಾಲಾ ಮಕ್ಕಳು, ಶಾಲಾ ಸಿಬ್ಬಂದಿ ಹಾಜರಿದ್ದರು.

---

## ಒಣಗಿದ ಕಡಲೆ: ಹುಸಿಯಾದ ರೈತನ ನಿರೀಕ್ಷೆ

**• ಉದಯವಾಹಿನಿ, ಉಪ್ಪಿನಬೆಟಗೇರಿ**

ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ್ದ ಕಡಲೆ ಬೆಳೆಯು ಸಿಡಿರೋಗಕ್ಕೆ ತುತ್ತಾಗಿದ್ದು, ರೈತಾಪಿ ಜನರನ್ನು ಆತಂಕಕ್ಕೀಡು ಮಾಡಿದೆ. ಕಡಲೆ ಬೆಳೆಯು ಕೈ ಹಿಡಿಯುವುದೆಂಬ ರೈತನ ನಿರೀಕ್ಷೆ ಹುಸಿಯಾಗಿಸಿದೆ. ಧಾರವಾಡ ಗ್ರಾಮಿಣ ಪ್ರದೇಶದಲ್ಲಿ ಬಹುತೇಕ ರೈತರು ಹಿಂಗಾರಿನ ಪ್ರಮುಖ ಬೆಳೆಯಾದ ಕಡಲೆಯನ್ನು ಅಧಿಕವಾಗಿ ಬೆಳೆದಿದ್ದಾರೆ.

ರೈತ ಸಂಪರ್ಕ ಕೇಂದ್ರ, ವ್ಯಾಪಾರಸ್ಥರ ಬಳಿ ಮತ್ತು ಮನೆಯಲ್ಲಿ ಸಂಗ್ರಹಿಸಿಟ್ಟ ಬಿತ್ತನೆ ಬೀಜಗಳನ್ನು ಖರೀದಿಸಿ ಬಿತ್ತಿದ್ದರು. ಕೆಲ ರೈತರು ಬೀಜೋಪಚಾರ ಮಾಡಿ ಬಿತ್ತನೆ ಮಾಡಿದ್ದಾರೆ. ಇನ್ನೂ ಕೆಲವರು ಹಾಗೇ ಬಿತ್ತಿದ್ದು, ಸಿಡಿರೋಗದ ಬಾಧೆ ಅವರನ್ನು ಕಾಡುತ್ತಿದೆ. ಕಡಲೆಯು ಮೊಳಕೆಯೊಡೆದ ದಿನದಿಂದ ಇಲ್ಲಿಯವರೆಗೆ ಒಂದೊಂದೆ ಗಿಡಕ್ಕೆ ರೋಗ ಬಾಧಿಸುತ್ತ ಈಗ ಅರ್ಧ ಹೊಲಕ್ಕೆ ಆವರಿಸಿದೆ. ಅಮ್ಮಿನಬಾವಿ, ಗರಗ ಹೋಬಳಿ ವ್ಯಾಪ್ತಿಯ ಕೆಲವು ಹೊಲದಲ್ಲಿ ಸಿಡಿರೋಗ ಬಾಧಿಸಿದ್ದು, ರೈತರು ಕಡಲೆ ಕೈಗೆಟುಕುವ ನಿರೀಕ್ಷೆಯನ್ನೇ ಕಳೆದುಕೊಂಡಿದ್ದಾರೆ. ಜಮೀನಿನ ಕೆಲವೆಡೆ ಬೆಳೆ ಒಣಗಿ ಗೊಡ್ಡು ಗಿಡ ನಿಂತಿದ್ದು, ದಿನದಿಂದ ದಿನಕ್ಕೆ ಹೊಲದ ತುಂಬೆಲ್ಲ ಆವರಿಸುವ ಹಂತಕ್ಕೆ ಬಂದು ತಲುಪಿದೆ. ಕೀಟಬಾಧೆ, ಬೆಂಕಿರೋಗ, ಸಿಡಿರೋಗ ನಿಯಂತ್ರಣಕ್ಕೆ ಔಷಧಿ ಸಿಂಪರಣೆ ಮಾಡಿದ್ದಾರೆ. ಕೀಟ, ಬೆಂಕಿರೋಗ ನಿಯಂತ್ರಣಕ್ಕೆ ಬಂದಿದ್ದು. ಸಿಡಿರೋಗ ಮಾತ್ರ ಹತೋಟಿಗೆ ಬಾರದಿರುವುದು ರೈತರಿಗೆ ತಲೆ ನೋವಾಗಿ ಪರಿಣಮಿಸಿದೆ.

ಕಡಲೆ ಬೆಳೆ ಫಸಲು ನೀಡುವ ಹಂತಕ್ಕೆ ಬಂದಿದೆ. ಎಡೆ ಹೊಡೆಯುವುದು, ಔಷಧಿ ಸಿಂಪಡಣೆ ಸೇರಿದಂತೆ ಹಲವು ಕೆಲಸಗಳಿಗೆ ರೈತರು ಸಾಕಷ್ಟು ಖರ್ಚುಮಾಡಿದ್ದಾರೆ. ಆದರೆ, ನಿರೀಕ್ಷಿತ ಮಟ್ಟದಲ್ಲಿ ಬೆಳೆ ಕೈಸೇರದೆ, ಹಾನಿ ಸಂಭವಿಸುವ ಆತಂಕ ಅವರದ್ದಾಗಿದೆ. 'ಕಳೆದ ವರ್ಷ ಹಿಂಗಾರಿನಲ್ಲಿ ಕೆಂಪು ಕಡಲೆ ಬಿತ್ತಲಾಗಿತ್ತು. ಆಗಲೂ ಸಿಡಿರೋಗ ಬಾಧಿಸಿತ್ತು.

ಈ ಸಲ ಬಿಳಿ ಕಡಲೆಗೆ ಸಿಡಿರೋಗ ಬಾಧಿಸುವುದಿಲ್ಲವೆಂದು ತಿಳಿದು ವ್ಯಾಪಾರಸ್ಥರ ಬಳಿ ಕ್ವಿಂಟಲ್‌ಗೆ 12ಸಾವಿರದಂತೆ ಖರೀದಿಸಿ ತಂದು ಬಿತ್ತನೆ ಮಾಡಲಾಗಿದೆ. ಈಗಲೂ ಸಿಡಿರೋಗ ಬಾಧಿಸಿ, ಕಡಲೆಯು ಕೈಹಿಡಿಯುವುದೆಂಬ ನಿರೀಕ್ಷೆ ಹುಸಿಯಾಗಿದ್ದು, ಆರ್ಥಿಕ ಸಂಕಷ್ಟಕ್ಕೆ ತಳ್ಳಿದೆ' ಎಂದು ರೈತ ಬಸವರಾಜ ನರಗುಂದ ವಿವರಿಸಿದರು.

---

## ಚಳಿಯ ಜೊತೆಗೆ ಅವರೆಯ ಸೊಗಡು

**• ಉದಯವಾಹಿನಿ, ಕಡೂರು**

ಬಯಲು ಸೀಮೆಯ ಅವರೆಕಾಯಿ ಸೊಗಡಿಗೆ ಜನರು ಖುಷಿಯಾಗಿದ್ದು, ಜೊತೆಗೆ ಹಸಿ ತೊಗರಿಯೂ ದೊರೆಯುತ್ತಿದೆ. ಕಡೂರಿನಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿಯೇ ಅವರೆಕಾಯಿ ದೊರೆಯಲಾರಂಭಿಸಿತ್ತು. ಆದರೆ, ಅದು ಅಕಾಲದಲ್ಲಿ ದೊರೆಯುವ ಅವರೆ. ಅದರಲ್ಲಿ ರುಚಿ ಸೊಗಡು ಎರಡೂ ಇರಲಿಲ್ಲ. ಈಗ ಚಳಿ ಆರಂಭವಾಗಿದ್ದು, ಬೆಳಗಿನ ಜಾವ ಹಿಮವೂ ಬೀಳಲಾರಂಭಿಸಿದೆ. ಇಂತಹ ವಾತಾವರಣದಲ್ಲಿ ಸೊಂಪಾಗಿ ಬೆಳೆಯುವ ಅವರೆಕಾಯಿ ಕಡೂರು ಪೇಟೆಯಲ್ಲಿ ಹೇರಳವಾಗಿ ದೊರೆಯುತ್ತಿದೆ.

ಆದರೆ, ಸ್ಥಳೀಯವಾಗಿ ಬೆಳೆದ ಅವರೆ ಮಾರುಕಟ್ಟೆಗೆ ಹೆಚ್ಚು ಬಾರದೆ ಇರುವುದರಿಂದ ಹೊರ ಜಿಲ್ಲೆಗಳಿಂದ ಅವರೆಕಾಯಿ ಆವಕವಾಗಿತ್ತಿದೆ. ಕೆ.ಜಿ ಅವರೆಕಾಯಿ 70ಕ್ಕೆ ದೊರೆತರೇ, 1.5 ಕೆ.ಜಿಗೆ 100 ದರವಾಗಿದೆ. ದಪ್ಪ ಅವರೆಗಿಂತ ಪುಟ್ಟವರೆಗೆ ಬೇಡಿಕೆ ಹೆಚ್ಚಿದ್ದು, ಬೇಡಿಕೆಗೆ ಅನುಗುಣವಾಗಿ ಅವರ ದೊರೆಯುತ್ತಿಲ್ಲ. ಆದ್ದರಿಂದ ಬೇರೆ ಜಿಲ್ಲೆಯಿಂದ ಅವರೆಕಾಯಿ ತರಿಸಿ ಮಾರುತ್ತಿದೇವೆ ಎನ್ನುತ್ತಾರೆ ವ್ಯಾಪಾರಿ ಶಿವಣ್ಣ. ಕಡೂರು ಪ್ರದೇಶದಲ್ಲಿ ಅವರೆಯನ್ನು ವಾಣಿಜ್ಯ ದೃಷ್ಟಿಯಿಂದ ಬೆಳೆಯುವುದು ಕಡಿಮೆ. ರಾಗಿ ಬೆಳೆಯುವ ರೈತರು ಅಂತರ ಬೆಳೆಯಾಗಿ ಅವರೆ ಬಿತ್ತನೆ ಮಾಡುತ್ತಾರೆ.

ಬಹುತೇಕ ಡಿಸೆಂಬರ್– ಜನವರಿ ಎರಡೂ ತಿಂಗಳು ಅವರೆಕಾಯಿಯೇ ಅಡುಗೆಗೆ ಫೆಬ್ರುವರಿ ಸಮಯಕ್ಕೆ ಅವರೆ ಗಿಡ ಒಣಗಿದಾಗ ಉಳಿದಿರುವ ಒಣ ಅವರೆಕಾಯಿ ಕಿತ್ತು ಒಕ್ಕಣೆ ಮಾಡುತ್ತಾರೆ. ಒಣ ಅವರೆಗೂ ಒಳ್ಳೆಯ ಬೆಲೆಯಿದೆ. ರಾಗಿ ಜೊತೆ ಹಾಕಿದ ಅವರೆಗಿಡದಲ್ಲಿ ರೈತರಿಗೆ ಎರಡು ಮೂರು ಕ್ವಿಂಟಲ್ ಒಣ ಅವರೆ ದೊರೆಯುತ್ತದೆ.

ಪ್ರಸಕ್ತ ವರ್ಷ ಕಡೂರಿನಲ್ಲಿ 150 ಹೆಕ್ಟೇರ್‌ನಲ್ಲಿ ಅವರೆ ಬೆಳೆಯಲಾಗಿದೆ ಎಂದು ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಜಯದೇವಪ್ಪ ತಿಳಿಸಿದರು. ಹಸಿ ತೊಗರಿಕಾಯಿ ಸಹ ದೊರೆಯುತ್ತಿದ್ದು, ಕೆ.ಜಿ 50–60ಕ್ಕೆ ದೊರೆಯುತ್ತಿದೆ.


ಉದಯವಾಹಿನಿ ಚಿತ್ರ

**ಅವರೆಕಾಯಿ ಸೊಗಡಿಗೆ ಜನರು ಖುಷಿ**

> ಕಡೂರು ಪ್ರದೇಶದಲ್ಲಿ ತೊಗರಿ ಬೆಳೆ ಇಲ್ಲವೇ ಇಲ್ಲ ಎನ್ನಬಹುದು. ಸ್ವಂತ ಉಪಯೋಗಕ್ಕಾಗಿ ಒಂದೆರಡು ಸಾಲು ಬಿತ್ತುವವರೇ ಹೆಚ್ಚಿದ್ದು, ಮಾರುಕಟ್ಟೆಯಲ್ಲಿ ಬೇರೆಡೆಯಿಂದ ತಂದು ಮಾರುವವರೇ ಹೆಚ್ಚಿದ್ದಾರೆ. ಅವರೆಕಾಯಿ-ಹಸಿ ತೊಗರಿಕಾಯಿ ತರುವುದರಿಂದ ನಿತ್ಯ ಬಳಕೆಯ ತೊಗರಿ ಬೇಳೆಯ ಉಳಿತಾಯವಾಗುತ್ತದೆ
> –ಮಲ್ಲೇಶ್ವರದ ಚಂದ್ರಶೇಖರ್

---

## ಇಂದು ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವ

**• ಉದಯವಾಹಿನಿ, ಕಲಬುರಗಿ**


ಉದಯವಾಹಿನಿ ಚಿತ್ರ

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಮಾಡಿ ಹಿಂದೂ ಪಂಚಾಂಗದ ಪ್ರಕಾರ ಒಂದು ವರ್ಷ ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ, ವಿಶ್ವ ಹಿಂದೂ ಪರಿಷತ್, ಶ್ರೀ ರಾಮ ಪ್ರಖಂಡದ ವತಿಯಿಂದ, ಇಂದು ಪುಷ್ಯ ಮಾಸದ, ಶುಕ್ಲದ್ವಾದಶಿಯಂದು ಸಂಜೆ 6: 00 ಘಂಟೆಗೆ, ಕರುಣೇಶ್ವರ ನಗರದ ಶ್ರೀ ಜೈವೀರ್ ಹನುಮಾನ್ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಯ ವಾರ್ಷಿಕೋತ್ಸವದ ಆಚರಣೆಯನ್ನು ಆಯೋಜಿಸಲಾಗಿದೆ. ಮುಖ್ಯ ವಕ್ತಾರರಾಗಿ ಶ್ರೀ ಮಹೇಶ ದೇಶಪಾಂಡೆ ಉಪನ್ಯಾಸ ನೀಡಲಿದ್ದಾರೆ, ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಸುರೇಶ್ ಹೇರೂರ ಮುಖ್ಯ ಅಥಿತಿಗಳಾಗಿ ವೇದಿಕೆ ಅಲಂಕರಸಲಿದ್ದಾರೆ ಮತ್ತು ಶ್ರೀರಾಮ ಪ್ರಖಂಡದ ಅಧ್ಯಕ್ಷ ಶ್ರೀರಾಮಚಂದ್ರ ಸುಗೂರು ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ವಿ.ಹಿಂ.ಪ. ಕಾರ್ಯಕರ್ತರು, ಪದಾಧಿಕಾರಿಗಳಾದ, ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಪ್ರಭು ಶ್ರೀರಾಮನ ಮತ್ತು ಶ್ರೀ ಜೈವೀರ್ ಹನುಮನ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ರಾಮ ಪ್ರಖಂಡದ ಅಧ್ಯಕ್ಷ ರಾಮಚಂದ್ರ ಸುಗೂರು ತಿಳಿಸಿದ್ದಾರೆ.


---

## ಎನ್‌ಎಸ್‌ಎಸ್‌ನಿಂದ ವ್ಯಕ್ತಿತ್ವ ವಿಕಸನ

**• ಉದಯವಾಹಿನಿ, ಆಳಂದ**

ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿನ ವ್ಯಕ್ತಿತ್ವವನ್ನು ವಿಕಸನ ಗೊಳಿಸುತ್ತದೆ' ಎಂದು ನಿಂಬರ್ಗಾದ ಗದ್ದಿಗೇಶ್ವರ ವಿರಕ್ತಮಠದ ನೀಲಕಂಠ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ನಿಂಬರ್ಗಾದ ಸರ್ಕಾರಿ ಪದವಿಪೂರ್ವ ಕಾಲೇಜಿನ ವತಿಯಿಂದ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ 2024–25ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಅವರು, 'ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯ ಉದ್ದೇಶ ಭಾರತೀಯ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸಾರ್ವಜನಿಕ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವುದಾಗಿದೆ. ಇದು ಮಹಾತ್ಮಾಗಾಂಧಿಜೀಯವರ ಕನಸಾಗಿತ್ತು.


ಉದಯವಾಹಿನಿ ಚಿತ್ರ

ಪ್ರಸ್ತುತ ದೇಶ- ವಿದೇಶಗಳ ನಡುವೆ, ಮನುಷ್ಯ-ಮನುಷ್ಯರ ನಡುವೆ ಅನೇಕ ಸಂಘರ್ಷಗಳು ನಡೆಯುತ್ತಿವೆ. ಇಂತಹ ಕಾಲದಲ್ಲಿ ಗಾಂಧಿಜೀಯವರ ತತ್ತ್ವದರ್ಶಗಳು ಪ್ರಸಕ್ತ ಜಗತ್ತಿಗೆ ಬೇಕಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಮಲ್ಲಿನಾಥ ನಾಟೀಕಾರ ಶಿಬಿರದ ಮುಖ್ಯ ಉದ್ದೇಶ ಮಕ್ಕಳಲ್ಲಿ ಶಿಸ್ತು, ಸಂಯಮ ಮತ್ತು ಸಹಬಾಳ್ವ ಕಲಿಸುವುದು ಎನ್‌ಎಸ್‌ಎಸ್ ಮೂಲಕ ಸಮಾನತೆಯ ಭಾವ ಮೂಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಗ್ರಾ.ಪಂ. ಅಧ್ಯಕ್ಷೆ ರೇಖಾಬಾಯಿ ಚವ್ಹಾಣ, ಶರಣಬಸವೇಶ್ವರ ಟ್ರಸ್ಟ್‌ನ ಕಾರ್ಯದರ್ಶಿ ಈರಣ್ಣ ಬಿರಾದಾರ ಭಾಗವಹಿಸಿದ್ದರು.

ಕಾಲೇಜಿನ ಉಪನ್ಯಾಸಕರುಗಳಾದ ಲಕಪತಿರಾಜ ಬಡದಾಳ, ಸಿದ್ದರಾಮ ಸನಗುಂದಿ, ತೇಜಸ್ವಿನಿ ಪಾಟೀಲ, ಸಪ್ನಾ ಕಣ್ಣಿ ನಿಂಗಮ್ಮ ಹಾಗೂ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ರವಿಶಂಕರ ವಮ್ಮಾ ಸ್ವಾಗತಿಸಿದರು. ಪ್ರಶಾಂತ ಮಸ್ತಕರ್ ವಂದಿಸಿದರು.

---

## ಇಬ್ಬರು ಸದಸ್ಯರ ಅಪಹರಣ

**• ಉದಯವಾಹಿನಿ, ಕಲಬುರಗಿ**

ಆಳಂದ ತಾಲ್ಲೂಕಿನ ಕೊಡಲಹಂಗರಗಾ ಗ್ರಾಮ ಪಂಚಾಯಿತಿಯ ಇಬ್ಬರು ಸದಸ್ಯರಿಗೆ ಜೀವ ಬೆದರಿಕೆ ಹಾಕಿ ಅಪಹರಿಸಿದ ಆರೋಪದಡಿ ಇಬ್ಬರ ವಿರುದ್ಧ ಆಳಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾ.ಪಂ. ಸದಸ್ಯರಾದ ರಾಜಶೇಖರ ಕಾಂದೆ ಮತ್ತು ಅನಂತ ರೆಡ್ಡಿ ಅಪಹರಣ ಆದವರು. ಅಪಹರಿಸಿದ ಆರೋಪದಡಿ ವಿಜಯ ಹಳ್ಳಿ ರಾಜಕುಮಾರ ನಡಗೇರಿ ಸೇರಿ ಸುಮಾರು 40 ಜನರಿದ್ದ ಗುಂಪಿನ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಾಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ವಿರುದ್ಧ ಸದಸ್ಯರು ಅವಿಶ್ವಾಸ ಮಂಡಿಸಲು ನಿರ್ಣಯಿಸಿದ್ದರು. ಸದಸ್ಯರಾದ ರಾಜಶೇಖರ, ಅನಂತ ರೆಡ್ಡಿ, ಸುಭದ್ರಾ ಮಲ್ಲಪ್ಪ, ಶೋಭಾ ರವೀಂದ್ರ, ವೈಜನಾಥ ಶ್ರೀಮಂತ, ಇಂದುಬಾಯಿ ರಾಣಪ್ಪ, ಅಂಬವ್ವ ಭೀಮಶ್ಯಾ ಹಾಗೂ ಮಲ್ಲಪ್ಪ ಬಸಪ್ಪ ಅವರು ಜತೆಗೂಡಿ ಶಹಾಬಾದ್ ಸಮೀಪದ ತರಿ ತಾಂಡಾಕ್ಕೆ ತೆರಳಿದ್ದರು ಎಂದರು.ತಾಂಡಾದ ಅನಿಲ್ ರಾಠೋಡ ಮನೆಯಲ್ಲಿ ಇದ್ದಾಗ ವಿಜಯ ಹಳ್ಳಿ, ರಾಜಕುಮಾರ ಸೇರಿ ಸುಮಾರು 40 ಜನರ ಗುಂಪಿನೊಂದಿಗೆ ಬಂದರು. ಹಲ್ಲೆ ಮಾಡಿ, ಚಾಕು ತೋರಿಸಿ, ಜೀವ ಬೆದರಿಕೆ ಹಾಕಿ ಇಬ್ಬರನ್ನು ಅಪಹರಣ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೊಡಲಹಂಗರಗಾ ಗ್ರಾ.ಪಂ.ನಲ್ಲಿ 12 ಜನರ ಸದಸ್ಯರ ಬಲವಿದೆ. ಅಪಹರಣವಾದ ಇಬ್ಬರು ಸದಸ್ಯರು ಇನ್ನೂ ಪತ್ತೆಯಾಗದ ಕಾರಣ ಗುರುವಾರ ನಡೆಯಬೇಕಿದ್ದ ಅವಿಶ್ವಾಸ ಮಂಡನೆಯೂ ನಡೆಯಲಿಲ್ಲ ಎಂದು ಮೂಲಗಳು ತಿಳಿಸಿವೆ.

---

## ಹೆಚ್ಚಿದ ಶೇಂಗಾ ಆವಕ: ಕಳೆದ 3 ವರ್ಷಗಳಲ್ಲೇ ಅಧಿಕ ಬೆಲೆ

### • ಕಳೆದ 10–15 ದಿನಗಳಿಂದ ಶೇಂಗಾ ಘಮ ಎಪಿಎಂಸಿ ಆವರಣದಲ್ಲಿ ಸೂಸುತ್ತಿದೆ

**• ಉದಯವಾಹಿನಿ, ಯಾದಗಿರಿ**

ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗೆ ಹಿಂಗಾರು ಹಂಗಾಮಿನ ಶೇಂಗಾ, ಮುಂಗಾರಿನ ತೊಗರಿ ಆವಕ ಬರುತ್ತಿದ್ದು. ರೈತರು ತಾವು ಬೆಳೆದ ಬೆಳೆಗಳನ್ನು ಲಾರಿ, ಟ್ರ್ಯಾಕ್ಟರ್, ಗೂಡ್ಸ್ ವಾಹನಗಳಲ್ಲಿ ಎಪಿಎಂಸಿಗೆ ತರುತ್ತಿದ್ದಾರೆ. ಕಳೆದ 10–15 ದಿನಗಳಿಂದ ಶೇಂಗಾ ಘಮ ಎಪಿಎಂಸಿ ಆವರಣದಲ್ಲಿ ಸೂಸುತ್ತಿದೆ.

ಎಪಿಎಂಸಿ ಆವರಣದಲ್ಲಿ ಪ್ರವೇಶಿಸುತ್ತಿದ್ದಂತೆ ಶೇಂಗಾ, ತೊಗರಿ ರಾಶಿ ಕಂಡು ಬರುತ್ತಿದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಎರಡನೇ ಬೆಳೆಯಾಗಿ ಭತ್ತ, ಶೇಂಗಾ, ಸಜ್ಜೆ ಬೆಳೆಯಲಾಗುತ್ತಿದೆ. ಕಾಲುವೆ ಜಾಲದ ಮುಂಭಾಗದಲ್ಲಿರುವ ರೈತರು ಭತ್ತ ನಾಟಿ ಮಾಡಿದರೆ, ಇನ್ನುಳಿದ ಕಡೆ ಶೇಂಗಾ, ಕಡಲೆ, ಸಜ್ಜೆ ಬಿತ್ತನೆ ಮಾಡಲಾಗುತ್ತಿದೆ.

ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ಶೇಂಗಾ ಉತ್ತಮವಾಗಿ ಫಸಲು ಬಂದಿದೆ. ಆದರೆ, ರೈತರು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಮತ್ತಷ್ಟು ಬೆಲೆ ಜಾಸ್ತಿ ಸಿಗಲಿ ಎಂದು ಆಶಯದಲ್ಲಿದ್ದಾರೆ. ಹೆಸರು ಆವಕ ಎಪಿಎಂಸಿಗೆ ಮುಂಗಾರು ಹಂಗಾಮಿನ ಹೆಸರು ಬೆಳೆಯೂ ಅಲ್ಪ ಸ್ವಲ್ಪ ಮಾರುಕಟ್ಟೆಗೆ ಬರುತ್ತಿದೆ. ಜನವರಿ 9ರಂದು 20 ಕ್ವಿಂಟಲ್ ಹೆಸರು ಬಳ ಬಂದಿದೆ.

ಜಿಲ್ಲೆಯ ಜೊತೆಗೆ ಅಕ್ಕಪಕ್ಕದ ಜಿಲ್ಲೆಯ ರೈತರು ಯಾದಗಿರಿ ಎಪಿಎಂಸಿಗೆ ಆವಕ ತಂದು ಮಾರಾಟ ಮಾಡುವುದು ಹಲವಾರು ವರ್ಷಗಳಿಂದ ನಡೆಯುತ್ತಿದೆ.

ಯಾದಗಿರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗೆ ಹಿಂಗಾರು ಹಂಗಾಮಿನ ಶೇಂಗಾ ಮುಂಗಾರಿನ ತೊಗರಿ ಆವಕ ರಾಜು ಅಲ್ಲಿಪುರ, ರೈತಮಾರುಕಟ್ಟೆ ದರಕ್ಕಿಂತ ಶೇಂಗಾ ಎಪಿಎಂಸಿಯಲ್ಲಿ ಕಡಿಮೆ ದರವಿದೆ. ಕೂಡಲೇ ಸರ್ಕಾರ ಹೆಚ್ಚಿನ ಬೆಲೆ ನಿಗದಿ ಮಾಡಬೇಕುಯ ಮನಪ್ಪ ಚಿತ್ತಾಪುರ ಎಪಿಎಂಸಿ ಸಹಾಯಕ ನಿರ್ದೇಶಕಕಳೆದ 15 ದಿನದಿಂದ ಶೇಂಗಾ ಆವಕ ಎಪಿಎಂಸಿಗೆ ಬರುತ್ತಿದ್ದು ಫೆಬ್ರುವರಿಯಲ್ಲಿ ಮತ್ತಷ್ಟು ಹೆಚ್ಚಾಗಲಿದೆ.

**ಹಿಂಗಾರು ಶೇಂಗಾ, ಮುಂಗಾರಿನ ತೊಗರಿ ಆವಕ**


ಉದಯವಾಹಿನಿ ಚಿತ್ರ

ಉತ್ತಮ ದರವಿದೆ ಗುರಿಗಿಂತ ಹೆಚ್ಚು ಶೇಂಗಾ ಬಿತ್ತನೆ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಶೇಂಗಾ ಬಿತ್ತನೆ ಗುರಿಗಿಂತ ಹೆಚ್ಚು ಬಿತ್ತನೆಯಾಗಿದೆ.

ಶೇಂಗಾ ನೀರಾವರಿ ಪ್ರದೇಶದಲ್ಲಿ 18548 ಹೆಕ್ಟೇರ್ ಖುಷ್ಕಿ 1300 ಹೆಕ್ಟೇರ್ ಒಟ್ಟಾರೆ 19848 ಹೆಕ್ಟೇರ್ ಗುರಿ ಇದ್ದರೆ ನೀರಾವರಿ 21503 ಹೆಕ್ಟೇರ್ 892 ಹೆಕ್ಟೇರ್ ಸೇರಿದಂತೆ ಒಟ್ಟಾರೆ 22395 ಹೆಕ್ಟೇರ್ ಬಿತ್ತನೆಯಾಗಿ ಶೇ 112.83 ರಷ್ಟು ಬಿತ್ತನೆಯಾಗಿದೆ. ಈಗಾಗಲೇ ಮೊದಲು ಬಿತ್ತನೆ ಮಾಡಿದ ರೈತರು ಶೇಂಗಾವನ್ನು ಅಡತಿ ಅಂಗಡಿಗಳ ಮುಂಭಾಗ ಸುರಿದು ರೈತರು ತೂಕ ಮಾಡುತ್ತಿದ್ದಾರೆ. ರೈತರು ತಂದ ರಾಶಿ ರಾಶಿ ಶೇಂಗಾ ಎಪಿಎಂಸಿಯ ರಸ್ತೆ ಮೇಲೆ ಕಂಡು ಬರುತ್ತಿದೆ. ಛಥಥ:ಯಾದಗಿರಿ ಗುರುಮಠಕಲ್ ಯರಗೋಳ ಹತ್ತಿಕುಣಿ ಎಲ್ಲೇರಿ ಕಂದಕೂರ ಚಿತ್ತಾಪುರ ಜೀವರ್ಗಿ ಸೇಡಂ ಶಹಾಪುರ ಸುರಪುರ ಸೇರಿದಂತೆ ಇತರೆಡೆಯಿಂದ ರೈತರ ಜಮೀನುಗಳಲ್ಲಿ ಬೆಳೆದ ಶೇಂಗಾ ಮಾರಾಟಕ್ಕೆ ಗಂಜ್‌ಗೆ ರೈತರು ತಂದಿದ್ದಾರೆ. ಶೇಂಗಾ ತೊಗರಿಗೆ ಬೆಂಬಲ ಬೆಲೆ 2024ರ ಡಿಸೆಂಬರ್ ತಿಂಗಳಿಂದ ಜನವರಿ 8 ರವರೆಗೆ ಶೇಂಗಾ 11904 ಕ್ವಿಂಟಲ್ ಆವಕ ಬಂದಿದೆ.

**ಸರ್ಕಾರದ ಬೆಂಬಲ ಬೆಲೆ**

**ಮಾರುಕಟ್ಟೆಯ ಬೆಲೆ ಕ್ವಿಂಟಲ್‌ಗೆ 6100 ದರವಿದೆ. ಸರ್ಕಾರದ ಬೆಲೆ 6783 ಬೆಲೆ ಇದೆ. ತೊಗರಿ 2024ರ ಡಿಸೆಂಬರ್ ತಿಂಗಳಿಂದ ಜನವರಿ 8 ರವರೆಗೆ 40028 ಕ್ವಿಂಟಲ್ ಆವಕ ಎಪಿಎಂಸಿಗೆ ಬಂದಿದೆ. 8600 ಮಾರುಕಟ್ಟೆಯ ಬೆಲೆ ಇದ್ದರೆ ಸರ್ಕಾರದ ಬೆಂಬಲ ಬೆಲೆ 7550 ಇದೆ. ತೊಗರಿ ಬೆಂಬಲ ಬೆಲೆಯಲ್ಲಿ ಖರೀದಿಸಲು ಜಿಲ್ಲೆಯಲ್ಲಿ 21 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ.**

---

## ಮಿನಿ ನ್ಯೂಸ್


### ಆಲ್ ದಿ ಬೆಸ್ಟ್ ಉದಯವಾಹಿನಿ ಎಂದ ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ


ಕೆಂಭಾವಿ ಬಾಲಕಿಯರ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಉದಯ ವಾಹಿನಿ ದಿನಪತ್ರಿಕೆ ಹೊರತಂದ 2025ರ ಪಂಚಾಂಗ ಸಹಿತ ದಿನದರ್ಶಿಕೆ ಕೆಂಭಾವಿ ಬಾಲಕಿಯರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅಮೃತ ಹಸ್ತದಿಂದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಶುಭ ಹಾರೈಸಿದರು.


ಉದಯವಾಹಿನಿ ಚಿತ್ರ

ಕೆಂಭಾವಿ ಆರೋಗ್ಯ ಕೇಂದ್ರದ ಸಿಸ್ಟರ್ಸ್ ಹಾಗೂ ಸಿಬ್ಬಂದಿಗಳು ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಉದಯ ವಾಹಿನಿ ಮಾಧ್ಯಮ ಸಂಸ್ಥೆ ಜಾಗತಿಕ ಕನ್ನಡಿಗರಿಗಾಗಿಯೇ ವಿಶೇಷವಾಗಿ ಪತ್ರಿಕೆ ಕಾರ್ಯನಿರ್ವಹಿಸುತ್ತಿರುವುದು ಅತ್ಯಂತ ಸಂತಸದ ವಿಷಯ. ಅನಿವಾಸಿ ಕನ್ನಡಿಗರ ಹೊಸ ಧ್ವನಿಯಾಗಿ ಜಗತ್ತಿನ ಎಲ್ಲಾ ದೇಶಗಳ ಕನ್ನಡಿಗರನ್ನು ತಲುಪಲಿ. ಈ ವಿನೂತನ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.


ಉದಯವಾಹಿನಿ ಚಿತ್ರ

ಶ್ರೀ ಸ್ವಾಮೀ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು ಉದಯವಾಹಿನಿ ಕ್ಯಾಲೆಂಡರ್ ಬಿಡುಗಡೆ ಮಾಡಿದರು.


ಉದಯವಾಹಿನಿ ಚಿತ್ರ

ಬ್ರಿಲಿಯಂಟ್ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು ಉದಯವಾಹಿನಿ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

### ಮಾರಕಾಸ್ತ್ರಗಳಿಂದ ಕೊಚ್ಚಿ ತಂದೆ, ತಾಯಿಯನ್ನೇ ಕೊಲೆಗೈದ ಪುತ್ರ

**• ಉದಯವಾಹಿನಿ ಹುಬ್ಬಳ್ಳಿ**

ಮಾರಕಾಸ್ತ್ರಗಳಿಂದಲೇ ತಂದೆ ತಾಯಿಯನ್ನು ಕೊಚ್ಚಿ ಕೊಲೆಗೈದ ಶಾಕಿಂಗ್ ಘಟನೆ ಹುಬ್ಬಳ್ಳಿಯ ಕುಸಗಲ್ ಗ್ರಾಮದಲ್ಲಿ ನಡೆದಿದೆ. ಹುಬ್ಬಳ್ಳಿಯ ಕುಸಗಲ್ ಗ್ರಾಮದಲ್ಲಿ ತಂದೆ ಅಶೋಕ್, ತಾಯಿ ಶಾರದಮ್ಮ ಎಂಬುವರನ್ನು ಅವರ ಪುತ್ರ ಗಂಗಾಧರಪ್ಪ ಎಂಬಾತ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಗೈದು ಪರಾರಿಯಾಗಿದ್ದಾನೆ. ಈ ವಿಷಯ ತಿಳಿದು ಸ್ಥಳಕ್ಕೆ ಹುಬ್ಬಳ್ಳಿ ಗ್ರಾಮಾಂತರ ಠಾಣೆಯ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

### ಕುವೆಂಪು ವಿ.ವಿಗೆ 40 ಲಕ್ಷದ ಪರಿಕರ ಕೊಡುಗೆ ನೀಡಿದ ರೋಟರಿ ಕ್ಲಬ್ ಮಿಡ್ ಟೌನ್

**• ಉದಯವಾಹಿನಿ ಶಿವಮೊಗ್ಗ**

ಇಲ್ಲಿನ ಶಂಕರಘಟದ ಕುವೆಂಪು ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ ಕ್ಯಾಂಪಸ್ ನ್ನು ಪರಿಸರ ಸ್ನೇಹಿಯಾಗಿಸಲು ಗೋವಾದ ರೋಟರಿ ಕ್ಲಬ್ ಪಣಜಿ ಮಿಡ್ ಟೌನ್ ಕೈಜೋಡಿಸಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಹವಾಮಾನ ನಿಗಾ ಕೇಂದ್ರ, ಗಾಳಿ ಗುಣಮಟ್ಟ ನಿಗಾ ಕೇಂದ್ರ ಸ್ಥಾಪನೆಗೆ ಉಪಕರಣಗಳು, ಕ್ಯಾಂಪಸ್ ನಲ್ಲಿ ಓಡಾಟಕ್ಕೆ ಮೂರು ಎಲೆಕ್ಟ್ರಿಕ್ ವಾಹನ ಹಾಗೂ 53 ಸೈಕಲ್ ಗಳು ಸೇರಿದಂತೆ, ?40 ಲಕ್ಷ ವೆಚ್ಚದ ಉಪಕರಣಗಳನ್ನು ಪಣಜಿಯ ರೋಟರಿ ಕ್ಲಬ್ ಮಿಡ್ ಟೌನ್ ಕೊಡುಗೆಯಾಗಿ ನೀಡಿದೆ. ಜ್ಞಾನ ಸಹ್ಯಾದ್ರಿ ಕ್ಯಾಂಪಸ್ ನ ಪರಿಸರ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಗೋವಾದ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಮಹೇಶ್ ಪಾಟೀಲ ಕೊಡುಗೆಯಾಗಿ ಬಂದ ಪರಿಕರಗಳನ್ನು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಅವರಿಗೆ ಹಸ್ತಾಂತರಿಸಿದರು.

ಈ ವೇಳೆ ಪಣಜಿ ರೋಟರಿ ಕ್ಲಬ್ ಮಿಡ್ ಟೌನ್ ಅಧ್ಯಕ್ಷ ಡಿ.ಡಬ್ಲ್ಯು. ಕಾಮತ್, ಭದ್ರಾವತಿ ವನ್ಯಜೀವಿ ವಲಯದ ಡಿಸಿಎಫ್ ಆಶೀಶ್ ರೆಡ್ಡಿ, ಆಡಳಿತ ವಿಭಾಗದ ರಿಜಿಸ್ಟ್ರಾರ್ ಎ.ಎಲ್.ಮಂಜುನಾಥ್, ಪರೀಕ್ಷಾಂಗ ವಿಭಾಗದ ರಿಜಿಸ್ಟ್ರಾರ್ ಎಸ್.ಎಂ.ಗೋಪಿನಾಥ್, ಬಿಸ್ಸೆರಿ ಸಂಸ್ಥೆ ನಿರ್ದೇಶಕ ಕೆ.ಗಣೇಶ್, ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಜೆ.ನಾರಾಯಣ, ಪ್ರೊ.ಹೀನಾಕೌಸರ್ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

# ಯುಎಸ್-ಕೆನಡಾ ವಿಲೀನ ಪ್ರಸ್ತಾವನೆ ತಿರಸ್ಕರಿಸಿದ ಟ್ರುಡೋ

## ಕೆನಡಾ ಬೇಕು ಎನ್ನುತ್ತಿರುವ ಟ್ರಂಪ್‌ಗೆ ಖಡಕ್ ಜವಾಬು, ಕೆನಡಿಯನ್ನರ ಹೆಮ್ಮೆಗೆ ಧಕ್ಕೆ ತರುವ ಮಾತುಗಳನ್ನು ಸಹಿಸಲ್ಲ ಎಂದ ಟ್ರುಡೋ




**ಕುತೂಹಲ ಕೆರಳಿಸಿದ ಟ್ರಂಪ್ ಮುಂದಿನ ಹೆಜ್ಜೆ**

**ಒಟ್ಟಾವಾ:** ಕೆನಡಾ ದೇಶವು ಅಮೆರಿಕದ 51ನೇ ರಾಜ್ಯವಾಗಿ ವಿಲೀನಗೊಳ್ಳಬೇಕು ಎಂಬ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಸ್ತಾವನೆಯನ್ನು, ಕೆನಡಾದ ಉಸ್ತುವಾರಿ ಪ್ರಧಾನಿ ಜಸ್ಟಿನ್ ಟ್ರುಡೋ ಮತ್ತೊಮ್ಮೆ ತಿರಸ್ಕರಿಸಿದ್ದಾರೆ. ಈ ವಿಚಾರವಾಗಿ ಎರಡನೇ ಬಾರಿಗೆ ಮಾತನಾಡಿರುವ ಜಸ್ಟಿನ್ ಟ್ರುಡೋ, ಟ್ರಂಪ್ ಅಮೆರಿಕದ ಜನರ ಗಮನವನ್ನು ಬೇರೆಡೆ ಸೆಳೆಯಲು ಕೆನಡಾ ವಿಲೀನದ ಅಸಾಧ್ಯದ ಮಾತುಗಳನ್ನಾಡುತ್ತಿದಾರೆ. ಎಂದು ಅಸಮಾಧಾನ ಹೊರಹಾಕಿದ್ದಾರೆ. ಅಮೆರಿಕ-ಕೆನಡಾ ವಿಲೀನ ಅಸಾಧ್ಯದ ಮಾತು. ಇದು ಎಂದಿಗೂ ಸಂಭವಿಸುವುದಿಲ್ಲ.

ಕೆನಡಿ ಯನ್ನರ ಹೆಮ್ಮೆಗೆ ಪೆಟ್ಟು ನೀಡಬಲ್ಲ ಯಾವುದೇ ಹೇಳಿಕೆಯನ್ನು ನಾವು ಸಹಿಸುವುದಿಲ್ಲ. ಆದರೆ ಟ್ರಂಪ್ ತಮ್ಮ ರಾಜಕೀಯ ಲಾಭಕ್ಕಾಗಿ ಮತ್ತು ಜನರ ಗಮನವನ್ನು ಬೇರೆಡೆ ಸೆಳೆಯಲು ವಿಲೀನ ಪ್ರಸ್ತಾವನೆ ಮುಂದಿಟ್ಟಿದ್ದಾರೆ ಎಂದು ಜಸ್ಟಿನ್ ಟ್ರುಡೋ ಅಸಮ್ಮಿತಿಯ ಧ್ವನಿಯಲ್ಲಿ ಹೇಳಿದ್ದಾರೆ. ಗಡಿ ಭದ್ರತೆಯನ್ನು ಹೆಚ್ಚಿಸದ ಹೊರತು ಕೆನಡಾದ ಎಲ್ಲಾ ಆಮದುಗಳ ಮೇಲೆ ಶೇ. 25ರಷ್ಟು ಸುಂಕ ವಿಧಿಸುವಂತೆ ಡೊನಾಲ್ಡ್ ಟ್ರಂಪ್ ಇತ್ತೀಚಿಗೆ ಸಲಹೆ ನೀಡಿದ್ದರು. ಟ್ರಂಪ್ ಅವರ ಈ ಹೇಳಿಕೆಯನ್ನು ಟೀಕಿಸಿರುವ ಟ್ರುಡೋ, ಇದು ಎರಡೂ ದೇಶಗಳ ಆರ್ಥಿಕತೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಅಧಿಕ ಸುಂಕದಿಂದಾಗಿ ಅಮೆರಿಕನ್ ನಾಗರಿಕರು ಬೆಲೆ ಏರಿಕೆಯನ್ನು ಅನು ಭವಿಸಲಿದ್ದಾರೆ. ಎಂದೂ ಟ್ರುಡೋ ಎಚ್ಚರಿಸಿದ್ದಾರೆ. ಅಮೆರಿಕವು ತೈಲ, ಅನಿಲ ವಿದ್ಯುತ್, ಉಕ್ಕು, ಅಲ್ಯೂಮಿನಿಯಂ, ಮರದ ದಿಮ್ಮಿ ಮತ್ತು ಕಾಂಕ್ರೀಟ್ ವಸ್ತುಗಳನ್ನು ಕೆನಡಾದಿಂದ ಆಮದು ಮಾಡಿಕೊಳ್ಳುತ್ತದೆ. ಒಂದು ವೇಳೆ ಈ ವಸ್ತುವಿನ ಆಮದಿನ ಮೇಲೆ ಅಮೆರಿಕ ಹೆಚ್ಚಿನ ಸುಂಕ ವಿಧಿಸಿದರೆ, ಅನಿವಾರ್ಯವಾಗಿ ಕೆನಡಾ ಕೂಡ ದರ ಏರಿಕೆ ಮಾಡಬೇಕಾಗುತ್ತದೆ. ಇದರಿಂದ ಅಮೆರಿಕನ್ ನಾಗರಿಕರು ಸಂಕಷ್ಟ ಎದುರಿಸಲಿದ್ದಾರೆ.. ಎಂದು ಜಸ್ಟಿನ್ ಟ್ರುಡೋ ಅಭಿಪ್ರಾಯಪಟ್ಟಿದ್ದಾರೆ.

**ಏನು ಮಾಡಲಿದ್ದಾರೆ ಟ್ರಂಪ್?:** ಅಮೆರಿಕ-ಕೆನಡಾ ವಿಲೀನ ಪ್ರಸ್ತಾವನೆಯನ್ನು ಮೆಲು ಧ್ವನಿಯಲ್ಲೇ ಮಂಡಿಸುತ್ತಿರುವ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಾನು ಕೇವಲ ಇದರಿಂದಾಗುವ ಪ್ರಯೋಜನಗಳ ಕುರಿತು ಕೆನಡಿಯನ್ನರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದ್ದೇನೆ. ಎಂದು ಹೇಳಿದ್ದಾರೆ. ಆದರೆ ಟ್ರುಡೋ ಇದೀಗ ಟ್ರಂಪ್ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದು, ಅಧಿಕೃತವಾಗಿ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೇಲೆ(ಜ.20) ಟ್ರಂಪ್ ಕೆನಡಾ ವಿಚಾರವಾಗಿ ತಮ್ಮ ಧ್ವನಿಯನ್ನು ಏರಿಸಲಿದ್ದಾರಾ ಎಂಬ ಅನುಮಾನ ಮೂಡುತ್ತಿದೆ.ಯುಎಸ್ ಜೊತೆಗೆ ಕೆನಡಾ ವಿಲೀನಗೊಳ್ಳುವಿಕೆಯು ತಮ್ಮ 'ಅಮೆರಿಕ ಫಸ್ಟ್' ನೀತಿಗೆ ಅತ್ಯಂತ ಅವಶ್ಯ ಎಂದು ನಂಬಿರುವ ಟ್ರಂಪ್, ಕೆನಡಾ ಗಡಿಯಲ್ಲಿ ರಷ್ಯಾ ಮತ್ತು ಚೀನಾದ ಇರುವಿಕೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಒಟ್ಟಿನಲ್ಲಿ ಯುಎಸ್-ಕೆನಡಾ ವಿಲೀನ ಪ್ರಸ್ತಾವನೆಯನ್ನು ಮತ್ತೊಮ್ಮೆ ತಿರಸ್ಕರಿಸಿದ್ದು, ಈ ವಿಚಾರವಾಗಿ ಡೊನಾಲ್ಡ್ ಟ್ರಂಪ್ ಇಡಬಹುದಾದ ಭವಿಷ್ಯದ ಹೆಜ್ಜೆಗಳ ಕುರಿತು ಜಾಗತಿಕವಾಗಿ ಚರ್ಚೆ ನಡೆಯುತ್ತಿದೆ ಎಂದು ಹೇಳಬಹುದು.

### ಟ್ರಂಪ್ ಅವರ ಸುಂಕ ಹೆಚ್ಚಳ

**ಅಮೆರಿಕ-ಕೆನಡಾ ವಿಲೀನದ ಕುರಿತು ಪದೇ ಪದೇ ಮಾತನಾಡುತ್ತಿರುವ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, ಕೆನಡಾದ ಉಸ್ತುವಾರಿ ಪ್ರಧಾನಿ ಜಸ್ಟಿನ್ ಟ್ರುಡೋ ಎರಡನೇ ಬಾರಿಗೆ ಖಡಕ್ ಜವಾಬು ನೀಡಿದ್ದಾರೆ. ಅಲ್ಲದೇ ಟ್ರಂಪ್ ಅವರ ಸುಂಕ ಹೆಚ್ಚಳ ಬೆದರಿಕೆಗೆ ಪ್ರತಿಕ್ರಿಯೆ ನೀಡಿರುವ ಟ್ರುಡೋ, ಇದರಿಂದ ಅಮೆರಿಕನ್ ನಾಗರಿಕರೇ ತೊಂದರೆಗೆ ಒಳಗಾಗಲಿದ್ದಾರೆ ಎಂದು ಎಚ್ಚರಿಸಿದ್ದಾರೆ. ಟ್ರುಡೋ ಹೇಳಿಕೆಯ ಬೆನ್ನಲ್ಲೇ, ಅಮೆರಿಕದ ಅಧ್ಯಕ್ಷರಾಗಿ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಟ್ರಂಪ್ ಈ ಕುರಿತು ಏನು ತೀರ್ಮಾನ ಕೈಗೊಳ್ಳಲಿದ್ದಾರೆ ಎಂಬುದರ ಕುರಿತು ಎಲ್ಲೆಡೆ ಚರ್ಚೆಯಾಗುತ್ತಿದೆ.**

> **ಗ್ರೀನ್‌ಲ್ಯಾಂಡ್ ಮತ್ತು ಪನಾಮಾ ಮರುಸ್ವಾಧೀನದ ಕುರಿತು ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿರುವ ಟ್ರಂಪ್, ಕೆನಡಾ ವಿಲೀನದ ಕುರಿತು ಅಷ್ಟೇ ಮೆದುವಾಗಿ ಮಾತನಾಡುತ್ತಿದ್ದಾರೆ. ಕೆನಡಾ ವಿಲೀನಕ್ಕೆ ಸಶಸ್ತ್ರಪಡೆಗಳನ್ನು ಬಳಸುವ ಸಾಧ್ಯತೆಯನ್ನು ಸ್ಪಷ್ಟವಾಗಿ ತಳ್ಳಿಹಾಕಿರುವ ಟ್ರಂಪ್, ನಾವು ಕೇವಲ 'ಎಕನಾಮಿಕ್ ಫೋರ್ಸ್' ಬಳಸುತ್ತೇವೆ ಎಂದು ಸೂಚ್ಯವಾಗಿ ಹೇಳಿದ್ದರು.**

# ಕೆನಡಾ ಪ್ರಧಾನಿ ಹುದ್ದೆಗೆ ಕನ್ನಡಿಗ ಚಂದ್ರ ಆರ್ಯ ಉಮೇದುವಾರಿಕೆ



**ಒಟ್ಟಾವಾ:** ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಆಡಳಿತಾರೂಢ ಲಿಬರಲ್ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಈ ಹುದ್ದೆಗೆ ಕರ್ನಾಟಕ ಮೂಲದ ಸಂಸದ ಚಂದ್ರ ಆರ್ಯ ಹೆಸರು ಪ್ರಬಲವಾಗಿ ಕೇಳಿ ಬಂದಿದೆ. ಪ್ರಸ್ತುತ ಕೆನಡಾದಲ್ಲಿರುವ ಭಾರತೀಯ ಮೂಲದ ಸಂಸದ ಚಂದ್ರ ಆರ್ಯ ಅವರು ಪ್ರಧಾನಿ ಹುದ್ದೆಗೆ ತಮ್ಮ ಉಮೇದುವಾರಿಕೆಯನ್ನು ಪ್ರಕಟಿಸಿದ್ದಾರೆ.

ಕೆನಡಾದ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ರಾಜೀನಾಮೆ ನೀಡಿದ ಕೆಲವು ದಿನಗಳ ನಂತರ ಅವರು ಈ ಘೋಷಣೆ ಮಾಡಿದರು. ಕೆನಡಾದ ಮುಂದಿನ ಪ್ರಧಾನಿಯಾಗುವ ಮೂಲಕ ದೇಶದ ಪುನರ್ನಿರ್ಮಾಣ ಮತ್ತು ಸಮೃದ್ಧಿಯ ಕಡೆಗೆ ಕೆಲಸ ಮಾಡಲು ಬಯಸುತ್ತೇನೆ ಎಂದು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಚಂದ್ರ ಆರ್ಯ ಅವರು ಪೋಸ್ಟ್ ಮಾಡಿದ್ದಾರೆ.

ಜಸ್ಟಿನ್ ಟ್ರುಡೊ ತಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಮುಂದಿನ ಹೊಸ ನಾಯಕನನ್ನು ಆಯ್ಕೆ ಮಾಡುವವರೆಗೆ ದೇಶದ ಪ್ರಧಾನಿ ಹುದ್ದೆಯಲ್ಲಿ ಉಳಿಯುತ್ತಾರೆ. ಹೊಸ ಪ್ರಧಾನಿ ಆಯ್ಕೆಯಾದ ನಂತರ ಅವರು ಪ್ರಧಾನಿ ಹುದ್ದೆಯಿಂದ ಕೆಳಗಿಳಿಯಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಲವು ನಾಯಕರು ಈಗ ಪ್ರಧಾನಿ ಹುದ್ದೆಯ ರೇಸ್‌ನಲ್ಲಿದ್ದಾರೆ. ಇದೀಗ ಪ್ರಧಾನಿ ಹುದ್ದೆಯ ರೇಸ್‌ಗೆ ಹೊಸ ಹೆಸರು ಸೇರ್ಪಡೆಯಾಗಿದೆ.

ನಾನು ಕೆನಡಾದ ಮುಂದಿನ ಪ್ರಧಾನಿ ಹುದ್ದೆಗೆ ಸ್ಪರ್ಧಿಸುತ್ತಿದ್ದೇನೆ, ಇದರಿಂದ ನಾನು ನಮ್ಮ ದೇಶವನ್ನು ಪುನರ್ನಿರ್ಮಿಸಲು ಮತ್ತು ಭವಿಷ್ಯದ ಪೀಳಿಗೆಗೆ ಸಮೃದ್ಧಿಯನ್ನು ಖಚಿತಪಡಿಸಿಕೊಳ್ಳಬಹುದು. ಕೆನಡಾಕ್ಕೆ ದೊಡ್ಡ ಮತ್ತು ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಲು ಹೆದರದ ನಾಯಕತ್ವದ ಅಗತ್ಯವಿದೆ ಎಂದು ಅವರು ಹೇಳಿದರು.

ದೇಶದ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಲು, ಎಲ್ಲಾ ಕೆನಡಿಯನ್ನರಿಗೆ ಸಮಾನ ಅವಕಾಶಗಳನ್ನು ಒದಗಿಸಲು ಕೆನಡಾ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಆರ್ಯ ಹೇಳಿದ್ದಾರೆ. ಕರ್ನಾಟಕದವರಾದ ಚಂದ್ರ ಆರ್ಯ ಅವರು ತುಮಕೂರು ಜಿಲ್ಲೆಯ ದ್ವಾರಲು ಗ್ರಾಮದಲ್ಲಿ ಜನಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಮುಗಿಸಿ, 2006ರಲ್ಲಿ ಕೆನಡಾಕ್ಕೆ ತೆರಳಿದ ನಂತರ, ಅವರು ಮೊದಲು ಇಂಡೋ-ಕೆನಡಾ ಒಟ್ಟಾವಾ ಬಿಸಿನೆಸ್ ಚೇಂಬರ್ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 2015ರ ಕೆನಡಾದ ಫೆಡರಲ್ ಚುನಾವಣೆಯಲ್ಲಿ ನೇಪಿಯನ್ ರೈಡಿಂಗ್‌ಗೆ ಸಂಸದರಾದರು. ಅಲ್ಲದೆ 2019 ಮತ್ತು 2021ರಲ್ಲಿ ಮರು ಆಯ್ಕೆಯಾದರು.

ಚಂದ್ರ ಆರ್ಯ ಅವರು ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ, ವಿಶೇಷವಾಗಿ ಭಾರತೀಯ ಸಮುದಾಯ ಮತ್ತು ಕೆನಡಾದ ಸಮಾಜದ ಪ್ರಮುಖ ವಿಷಯಗಳ ಬಗ್ಗೆ ಮುಂಚೂಣಿಯಲ್ಲಿದ್ದಾರೆ. 2022ರಲ್ಲಿ ಕೆನಡಾದ ಹೌಸ್ ಆಫ್ ಕಾಮರ್ ರಸನಲ್ಲಿ ತಮ ಮಾತೃಭಾಷೆ ಕನ್ನಡದಲ್ಲಿ ಭಾಷಣ ಮಾಡಿದರು ಮತ್ತು ಟೊರೊಂಟೊದಲ್ಲಿನ ಹಿಂದೂ ದೇವಾಲಯಗಳ ಧ್ವಂಸ ಪ್ರಕರಣಗಳಲ್ಲಿ ಧ್ವನಿ ಎತ್ತಿದರು. ಈ ದಾಳಿಯ ಹೊಣೆಗಾರರು ಖಲಿಸ್ತಾನಿ ಉಗ್ರರು ಎಂದು ಹೇಳಿದ್ದರು.

> **ಕೆನಡಾದಲ್ಲಿ ಅನೇಕ ಜನರು, ವಿಶೇಷವಾಗಿ ಯುವ ಪೀಳಿಗೆ, ಗಂಭೀರ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಧ್ಯಮ ವರ್ಗದ ಜನರು ಕಷ್ಟ ಪಡುತ್ತಿದ್ದಾರೆ ಮತ್ತು ಅನೇಕ ಕಾರ್ಮಿಕ ಕುಟುಂಬಗಳು ಬಡತನಕ್ಕೆ ಬೀಳುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸಲು, ಮುಂದಿನ ಕೆಲವು ದಶಕ ಗಳವರೆಗೆ ದೇಶದ ಸಮೃದ್ಧಿಯನ್ನು ಖಾತ್ರಿಪಡಿಸುವ ನಿರ್ಧಾರಗಳನ್ನು ತೆಗೆದು ಕೊಳ್ಳಬೇಕಾಗುತ್ತದೆ ಎಂದು ಆರ್ಯ ಹೇಳಿದ್ದಾರೆ.**

# ಸಾಲ ಹಿಂತಿರುಗಿಸದ ಸಹೋದ್ಯೋಗಿ ಹತ್ಯೆ



**ಪುಣೆ:** ಇತ್ತೀಚೆಗೆ ಪುಣೆಯ ವಿಮಾನನಗರ ಪ್ರದೇಶದ ಬಿಪಿಒ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶುಭಾ ಕೊಡರೆ ಎಂಬ ಯುವತಿಯನ್ನು ಆಕೆಯ ಸಹೋದ್ಯೋಗಿ ಕೃಷ್ಣ ಕನೌಜ ಹತ್ಯೆ ಮಾಡಿದ ಘಟನೆ ನಡೆದಿದೆ. ಕಂಪನಿ ಆವರಣದಲ್ಲೇ ಶುಭಾ ಅವರನ್ನು ಕೃಷ್ಣ ಕನೌಜ್ ಚಾಕು ವಿನಿಂದ ಇರಿದಿದ್ದಾನೆ. ಇದಾದ ಬಳಿಕ ಶುಭದಾ ಕೋಡಾ ರೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಅತಿಯಾದ ರಕ್ತಸ್ರಾವದಿಂದ ಆಕೆ ಸಾವನ್ನಪ್ಪಿದ್ದಾಳೆ. ಈ ಘಟನೆಯ ನಂತರ ಆರೋಪಿ ಕೃಷ್ಣ ಕನೌಜನನ್ನು ಪೊಲೀಸರು ಬಂಧಿಸಿದ್ದಾರೆ. ಪೊಲೀಸರು ವಿಚಾರಣೆ ನಡೆಸುತ್ತಿರುವಾಗ ಕೃಷ್ಣ ಕನೌಜ್ ಕೊಲೆಗೆ ಕಾರಣ ಬಿಚ್ಚಿಟ್ಟಿದ್ದಾನೆ.

ಶುಭದಾ ಕೊಡರೆ ಆರ್ಥಿಕ ಸಂಕಷ್ಟದಲ್ಲಿದ್ದಾಗ ಆಗಾಗ ಕೃಷ್ಣನಿಂದ ಹಣ ಪಡೆದಿದ್ದಾಳೆ. ಕಳೆದ ಎರಡು ವರ್ಷಗಳಲ್ಲಿ ಕೃಷ್ಣ ಶುಭದಾಗೆ ನಾಲ್ಕು ಲಕ್ಷ ರೂಪಾಯಿ ಆರ್ಥಿಕ ನೆರವು ನೀಡಿದ್ದಾನೆ. ಆದರೆ, ಕೃಷ್ಣನಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಬೇಕಾಗಿದ್ದರಿಂದ, ಶುಭಾಗೆ ಹಣ ಹಿಂದಿರುಗಿಸಲು ಆಗ್ರಹಿಸಿದ್ದಾನೆ. ಆದರೆ ಶುಭಾ ಹಣವನ್ನು ಹಿಂದಿರುಗಿಸಿರಲಿಲ್ಲ. ಇದರಿಂದಾಗಿ ಕೆಲಸದ ಸ್ಥಳದಲ್ಲಿ ಕೃಷ್ಣ ಮತ್ತು ಶುಭದಾ ನಡುವೆ ವಾಗ್ವಾದ ನಡೆದಿದೆ. ಕೃಷ್ಣ ವಿರುದ್ಧ ಶುಭದಾ ಕೊಡರೆ ಸಹಕಾರನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ. ಪೊಲೀಸರು ಕೃಷ್ಣ ಅವರನ್ನು ಠಾಣೆಗೆ ಕರೆಸಿ ವಿವರಣೆ ಪಡೆದು ಎಚ್ಚರಿಕೆ ನೀಡಿದ್ದಾರೆ. ಹಾಗಾಗಿ ಕೃಷ್ಣನಿಗೆ ಶುಭದ ಮೇಲೆ ಆಕ್ರೋಶ ಉಂಟಾಗಿದೆ. ಮಂಗಳವಾರ ಸಂಜೆ ಶುಭದಾ ಕೆಲಸಕ್ಕೆ ಬರಲು ಡಬ್ಲ್ಯುಎನ್‌ಎಸ್ ಕಂಪನಿಯ ಪಾರ್ಕಿಂಗ್ ಸ್ಥಳಕ್ಕೆ ಬಂದಾಗ ಕೃಷ್ಣ ಆಕೆಯ ಕೈಗೆ ಹರಿತವಾದ ಚಾಕುವಿನಿಂದ ಐದು ಬಾರಿ ಇರಿದಿದ್ದಾನೆ. ದಾಳಿಯ ವೇಳೆ ಆಕೆ ತೀವ್ರ ರಕ್ತಸ್ರಾವವಾಗಿದೆ, ರಾತ್ರಿ ಚಿಕಿತ್ಸೆ ವೇಳೆ ಸಾವನ್ನಪ್ಪಿದ್ದಾಳೆ ಎಂದು ಹಿರಿಯ ಇನ್ಸ್‌ಪೆಕ್ಟರ್ ರವೀಂದ್ರ ಶೆಲ್ಕೆ ತಿಳಿಸಿದ್ದಾರೆ.

### ಸಾಯುತ್ತಾಳೆ ಎಂದು ಭಾವಿಸಿರಲಿಲ್ಲ

**ಪದೇ ಪದೇ ಕೇಳಿದರೂ ನಾನು ಕೊಟ್ಟ ಹಣವನ್ನು ಶುಭಾ ಹಿಂದಿರುಗಿಸಲಿಲ್ಲ. ಚಾಕು ತೋರಿಸಿ ಬೆದರಿಸಿದರೆ ಕಂಪನಿ ಅಧಿಕಾರಿಗಳು ಅಥವಾ ಪೊಲೀಸರು ಗಮನಕ್ಕೆ ಬಂದು ಹಣ ವಾಪಸ್ ಪಡೆಯಬಹುದು ಎಂಬ ಭರವಸೆಯಿಂದ ಚಾಕು ತಂದಿದ್ದೆ. ಆದರೆ ಈ ದಾಳಿಯಲ್ಲಿ ಅವಳು ಸಾಯುತ್ತಾಳೆ ಎಂದು ಭಾವಿಸಿರಲಿಲ್ಲ ಎಂದು ಕೃಷ್ಣ ಕನೌಜ ಹೇಳಿದ್ದಾನೆ. ಆರೋಪಿಯನ್ನು ಜನವರಿ 13 ರವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.**

# ಮಾ.9ಕ್ಕೆ ಕೆನಡಾ ನೂತನ ಪ್ರಧಾನಿ ಹೆಸರು ಘೋಷಣೆ




**ಟೊರೊಂಟೊ:** ಕೆನಡಾದ ಆಡಳಿತ ಲಿಬರಲ್ ಪಕ್ಷವು ಮಾ.9ರಂದು ನೂತನ ಪ್ರಧಾನ ಮಂತ್ರಿಯನ್ನು ಘೋಷಿಸಲಿದೆ. ಜಸ್ಟಿನ್ ಟ್ರುಡೊ ಅವರ ರಾಜೀನಾಮೆಯ ನಂತರ ನಾಯಕತ್ವದ ಮತದಾನದ ನಂತರ ಮಾರ್ಚ್ 9 ರಂದು ದೇಶದ ಮುಂದಿನ ಪ್ರಧಾನಿಯನ್ನು ಘೋಷಿಸಲಿದೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ. ಹೊಸ ನಾಯಕನನ್ನು ಆಯ್ಕೆ ಮಾಡುವವರೆಗೂ ಟ್ರುಡೊ ಪ್ರಧಾನಿಯಾಗಿಯೇ ಮುಂದುವರೆಯಲಿದ್ದಾರೆ.

ಲಿಬರಲ್ ನಾಯಕತ್ವದ ಮುಂಚೂಣಿಯಲ್ಲಿದ್ದ ಮಾಜಿ ಕೇಂದ್ರ ಬ್ಯಾಂಕರ್ ಮಾರ್ಕ್ ಕಾರ್ನಿ ಮತ್ತು ಮಾಜಿ ಹಣಕಾಸು ಸಚಿವ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರುಗಳು ಕಳೆದ ತಿಂಗಳು ಅವರ ಹಠಾತ್ ರಾಜೀನಾಮೆ ನೀಡಿದ ಪರಿಣಾಮ ಟ್ರುಡೊ ಪ್ರಧಾನಿ ಹುದ್ದೆ ತೊರೆಯುವಂತಾಗಿತ್ತು. ಸದಢ ಮತ್ತು ಸುರಕ್ಷಿತ ರಾಷ್ಟ್ರವ್ಯಾಪಿ ಪ್ರಕ್ರಿಯೆಯ ನಂತರ, ಲಿಬರಲ್ ಪಾರ್ಟಿ ಆಫ್ ಕೆನಡಾ ಮಾರ್ಚ್ 9 ರಂದು ಹೊಸ ನಾಯಕನನ್ನು ಆಯ್ಕೆ ಮಾಡುತ್ತದೆ ಮತ್ತು 2025ರ ಚುನಾವಣೆಯಲ್ಲಿ ಹೋರಾಡಲು ಮತ್ತು ಗೆಲ್ಲಲು ಸಿದ್ಧವಾಗಿದೆ ಎಂದು ಲಿಬರಲ್ ಪಾರ್ಟಿ ಆಫ್ ಕೆನಡಾದ ಅಧ್ಯಕ್ಷ ಸಚಿತ್ ಮೆಹ್ರಾ ತಿಳಿಸಿದ್ದಾರೆ. ರಾಜಕೀಯ ಕ್ರಾಂತಿಯು ಕೆನಡಾಕ್ಕೆ ಕಠಿಣ ಕ್ಷಣ ದಲ್ಲಿ ಬರುತ್ತದೆ. ಯುಎಸ್ ಅಧ್ಯಕ್ಷ-ಚುನಾಯಿತ ಡೊನಾಲ್ಡ್ ಟ್ರಂಪ್ ಕೆನಡಾವನ್ನು 51 ನೇ ರಾಜ್ಯ ಎಂದು ಕರೆಯುತ್ತಲೇ ಇರುತ್ತಾರೆ ಮತ್ತು ಎಲ್ಲಾ ಕೆನಡಾದ ಸರಕುಗಳ ಮೇಲೆ ಶೇ.25ರಷ್ಟು ಸುಂಕಗಳನ್ನು ವಿಧಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಮುಂದಿನ ಲಿಬರಲ್ ನಾಯಕ ದೇಶದ ಇತಿಹಾಸದಲ್ಲಿ ಅತ್ಯಂತ ಕಡಿಮೆ ಅವಧಿಯ ಪ್ರಧಾನಿಯಾಗಬಹುದು.

ಅದರಲ್ಲೂ ಭಾರತೀಯ ಮೂಲದ ಸುನೀತಾ ಆನಂದ್ ಅವರ ಹೆಸರು ಪ್ರಮುಖ ವಾಗಿ ಕೇಳಿಬರುತ್ತಿರುವುದು ವಿಶೇಷವಾಗಿದೆ.

# ಎಚ್‌ಎಂಪಿವಿ ಮಕ್ಕಳ ಮೇಲೆ ಪರಿಣಾಮ

• **ಉದಯವಾಹಿನಿ, ಸಿಂಗಾಪುರ**




ಚೀನಾ ಮತ್ತು ಸಿಂಗಾಪೂರದಲ್ಲಿ ಉತ್ತರ ಪ್ರಾಂತ್ಯಗಳಾದ್ಯಂತ, ವಿಶೇಷವಾಗಿ 14 ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮೇಲೆ ಹ್ಯೂಮನ್ ಮೆಟಾಪ್ನ್ಯೂಮೋವೈರಸ್ ಎಚ್ ಎಂಪಿವಿ ಸೋಂಕು ತೀವ್ರ ಪರಿಣಾಮ ಬೀರಿದೆ. ಈಗಾಗಲೇ ಚೀನಾದಲ್ಲಿ ಸೋಂಕಿನಿಂದ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ, ಅದರಲ್ಲಿಯೂ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಸೇರಿದಂತೆ ಇನ್ನಿತರೆ ಸೋಂಕುಗಳಿಗೆ ಎಡೆ ಮಾಡಿ ಕೊಟ್ಟಿದ್ದು ಜನರನ್ನು ತತ್ತರಿಸುವಂತೆ ಮಾಡಿದೆ.

ಚೀನಾದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ -ಸಿಡಿಸಿ ಬಿಡುಗಡೆ ಮಾಡಿದ ಮಾಹಿತಿ ಪ್ರಕಾರ ಡಿಸೆಂಬರ್ 23 ರಿಂದ ಡಿಸೆಂಬರ್ 29 ರ ನಡುವೆ ದಾಖಲಾದ ಒಟ್ಟಾರೆ ಉಸಿರಾಟದ ಕಾಯಿಲೆ ಗಣನೀಯವಾಗಿ ಏರಿಕೆ ಕಂಡಿದೆ ಎಂದು ಹೇಳಲಾಗಿದೆ.

ಇದು ಡಿಸೆಂಬರ್ 16 ರಿಂದ ಡಿಸೆಂಬರ್ 22 ರ ವಾರದಲ್ಲಿ ಆಸ್ಪತ್ರೆಯಲ್ಲಿ ಹೆಚ್ಚಿನ ಮಂದಿ ದಾಖಲಾಗಿದ್ದಾರೆ , ಅವರಲ್ಲಿ ಕೆಲವು ಗುಣಮುಖರಾಗಿ ಬಿಡುಗಡೆಯಾಗಿದ್ದರೆ ಇನ್ನೂ ಮತ್ತೆ ಕೆಲವರು ಮತ್ತಷ್ಟು ಸಮಸ್ಯೆ ಎದುರಿಸಿದ್ದಾರೆ ಎಂದು ಮಾಹಿತಿ ನೀಡಿದೆ. ಉಸಿರಾಟದ ಸಮಸ್ಯೆ ಹೆಚ್ಚಿರುವ ಹಿನ್ನೆಲೆಯಲ್ಲಿ ನ್ಯುಮೋನಿಯಾ ಮೇಲ್ವಿಚಾರಣಾ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ. ಪ್ರಯೋಗಾಲಯಗಳು ಮತ್ತು ರೋಗ ನಿಯಂತ್ರಣ ಏಜೆನ್ಸಿಗಳಿಗೆ ಪರಿಶೀಲಿಸಲು ಪ್ರೋಟೋಕಾಲ್‌ಗಳನ್ನು ಸ್ಥಾಪಿಸುವುದು ಮತ್ತು ಪ್ರಕರಣಗಳನ್ನು ನಿಭಾಯಿಸಲಾಗಿದೆ ಎನ್ನಲಾಗಿದೆ.

ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುಖವಾಡಗಳನ್ನು ಧರಿಸುವುದು, ವ್ಯಾಕ್ಸಿನೇಷನ್‌ಗಳೊಂ ದಿಗೆ ನವೀಕೃತವಾಗಿರುವುದು, ಸರಿಯಾದ ನೈರ್ಮಲ್ಯ ಅಭ್ಯಾಸಗಳನ್ನು ನಿರ್ವಹಿಸುವುದು ಮುಂತಾದ ರಕ್ಷಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಸಾರ್ವ ಜನಿಕರಿಗೆ ಸೂಚನೆ ನೀಡಿದೆ.

> **ಫೋಟೋಗಳು ಮತ್ತು ವಿಡಿಯೋಗಳು ಚೀನೀ ಸಾಮಾಜಿಕ ಮಾಧ್ಯಮ ಸೈಟ್‌ಗಳಲ್ಲಿ ವ್ಯಾಪಕವಾಗಿ ಹರಡಿವೆ, ಆಸ್ಪತ್ರೆಗಳು, ಚಿಕಿತ್ಸಾಲಯಗಳು ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ಬೃಹತ್ ಜನಸಂದಣಿ ಮತ್ತು ಸ್ನೇಕಿಂಗ್ ಕ್ಯೂಗಳನ್ನು ತೋರಿಸುತ್ತವೆ.**

# ಇ.ಡಿ ಅಧಿಕಾರಿಯ ಬಂಧನದಲ್ಲಿ ಸಿಬಿಐ ಲೋಪ: ಕೋರ್ಟ್

**ಮುಂಬೈ:** ಲಂಚದ ಆರೋಪದ ಅಡಿಯಲ್ಲಿ ಇ.ಡಿ. ಅಧಿಕಾರಿಯೊಬ್ಬರನ್ನು ಬಂಧಿಸುವ ಸಂದರ್ಭದಲ್ಲಿ ಸಿಬಿಐ ಅಧಿಕಾರಿಗಳು 'ಹಲವು ಮಹತ್ವದ, ಮೂಲಭೂತ ಲೋಪಗಳನ್ನು ಎಸಗಿದ್ದಾರೆ' ಎಂದು ಹೇಳಿರುವ ವಿಶೇಷ ನ್ಯಾಯಾಲಯವು, ಬಂಧಿತ ಇ.ಡಿ. ಅಧಿಕಾರಿಯನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಆದೇಶಿಸಿದೆ.

ಇ.ಡಿಯ ಶಿಮ್ಲಾ ಘಟಕದ ಸಹಾಯಕ ನಿರ್ದೇಶಕ ವಿಶಾಲ್ ದೀಪ್ ಅವರನ್ನು ಇನ್ನೊಂದು ರಾಜ್ಯಕ್ಕೆ ಕರೆದೊಯ್ಯಲು ಅನುಮತಿ ನೀಡುವಂತೆ ಸಿಬಿಐ ಮಾಡಿದ್ದ ಮನವಿಯನ್ನು ತಿರಸ್ಕರಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿ.ವೈ. ಫಾಡ್ ಅವರು, ವಿಶಾಲ್ ವಿರುದ್ಧದ ಆರೋಪಗಳು ಗಟ್ಟಿಯಾದ ಆಧಾರಗಳನ್ನು ಹೊಂದಿಲ್ಲ ಎಂದು ಹೇಳಿದ್ದಾರೆ.

ಸಿಬಿಐನ ಚಂಡೀಗಢ ಘಟಕದ ಅಧಿಕಾರಿಗಳು ವಿಶಾಲ್ ಅವರನ್ನು ಭ್ರಷ್ಟಾಚಾರದ ಆರೋಪದ ಅಡಿಯಲ್ಲಿ ಮುಂಬೈನಲ್ಲಿ ಮಂಗಳವಾರ ಬಂಧಿಸಿದ್ದರು. ಇ.ಡಿ ತನಿಖೆ ನಡೆಸುತ್ತಿರುವ ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದರಲ್ಲಿ ಬಂಧಿಸಬಾರದು ಎಂದಾದರೆ 1.1 ಕೋಟಿ ಲಂಚ ಕೊಡಬೇಕು ಎಂದು ವಿಶಾಲ್ ಅವರು ಕಂಪನಿಯೊಂದರ ಮುಖ್ಯಸ್ಥರ ಬಳಿ ಬೇಡಿಕೆ ಇರಿಸಿದ್ದರು ಎಂದು ಸಿಬಿಐ ಹೇಳಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 192ರ ಅನ್ವಯ ಕೇಸ್ ಡೈರಿಯನ್ನು ನಿರ್ವಹಿಸಬೇಕು, ಅದನ್ನು ಸಲ್ಲಿಸಬೇಕು. ಆದರೆ ಸಹಾಯಕ ತನಿಖಾಧಿಕಾರಿಯು ಪೂರಕ ಕೈಸ್ ಡೈರಿಯನ್ನು ಇಟ್ಟಿಲ್ಲ. ಅದನ್ನು ಕೋರ್ಟ್‌ಗೆ ಸಲ್ಲಿಸಿಲ್ಲ. ಇದು ಗಂಭೀರವಾದ ಲೋಪ' ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಆರೋಪಿಗೆ ಬಂಧನದ ವಾರಂಟ್ ನೀಡಿರಲಿಲ್ಲವಾದ ಕಾರಣ, ಸಿಬಿಐ ಸಲ್ಲಿಸಿರುವ ಮನವಿಯ ಪ್ರಕ್ರಿಯೆಯು ದೋಷಯುಕ್ತವಾದಂತೆ ಆಗಿದೆ ಎಂದು ನ್ಯಾಯಾಲಯ ಹೇಳಿದೆ. ಈ ಎಲ್ಲಾ ಸಂಗತಿಗಳು ಪ್ರಾಸಿಕ್ಯೂಷನ್‌ನ ಕೃತ್ಯಗಳಲ್ಲಿ ಲೋಪಗಳು ಆಗಿರುವುದನ್ನು ತೋರಿಸುತ್ತವೆ. ಹೀಗಾಗಿ ಬಂಧನವು ಅಕ್ರಮವಾಗುತ್ತದೆ' ಎಂದು ಕೂಡ ಅದು ಹೇಳಿದೆ.

# ಒಂದೇ ಕುಟುಂಬದ ಐವರ ಕಗ್ಗೊಲೆ

**ಮೀರತ್:** ಉತ್ತರ ಪ್ರದೇಶದ ಮೀರತ್‌ನಲ್ಲಿರುವ ಲಿಸಾರಿ ಗೇಟ್ ಪ್ರದೇಶದಲ್ಲಿ ಒಂದೇ ಕುಟುಂಬದ ಐವರು ಮನೆಯೊಳಗೆ ಶವವಾಗಿ ಪತ್ತೆಯಾಗಿದ್ದಾರೆ. ಮೃತಪಟ್ಟವರಲ್ಲಿ ಒಬ್ಬ ಪುರುಷ, ಅವನ ಹೆಂಡತಿ ಮತ್ತು ಅವರ ಮೂವರು ಹೆಣ್ಣುಮಕ್ಕಳು ಸೇರಿದ್ದಾರೆ, ಎಲ್ಲರೂ 10 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ದಂಪತಿ ಶವಗಳು ನೆಲದ ಮೇಲೆ ಪತ್ತೆಯಾಗಿದ್ದರೆ, ಮಕ್ಕಳ ಶವಗಳು ಹಾಸಿಗೆಯ ಪೆಟ್ಟಿಗೆಯಲ್ಲಿ ಪತ್ತೆಯಾಗಿವೆ.

ಪೊಲೀಸರ ಪ್ರಕಾರ, ಎಲ್ಲಾ ದೇಹಗಳಿಗೆ ತಲೆಗೆ ಗಾಯಗಳಾಗಿದ್ದು, ಭಾರವಾದ ವಸ್ತುವಿನಿಂದ ಹೊಡೆದಂತೆ ಕಂಡುಬಂದಿದೆ. ಮರಣೋತ್ತರ ಪರೀಕ್ಷೆಯ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ.ಪ್ರಾಥಮಿಕ ಅವಲೋಕನಗಳ ಆಧಾರದ ಮೇಲೆ ಇದು ವೈಯಕ್ತಿಕ ದ್ವೇಷದಿಂದ ನಡೆದ ಕೊಲೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು, ತನಿಖೆ ಚುರುಕುಗೊಂಡಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಅಕ್ಕಪಕ್ಕದವರು ಏನೋ ಅಸಹಜವಾದುದನ್ನು ಗಮನಿಸಿ ವಿಷಯ ತಿಳಿಸಿದಾಗ ಪೊಲೀಸರು ಎಚ್ಚೆತ್ತರು.

ಸ್ಥಳಕ್ಕೆ ಬಂದ ಅಧಿಕಾರಿಗಳು ಮನೆಗೆ ಹೊರಗಿನಿಂದ ಬೀಗ ಹಾಕಿರುವುದು ಕಂಡು ಬಂತು. ಅವರು ಛಾವಣಿಯ ಮೂಲಕ ಪ್ರವೇಶಿಸಿ ಕಠೋರ ದೃಶ್ಯವನ್ನು ತೆರೆದರು. ಎಲ್ಲಾ ಐದು ಬಲಿಪಶುಗಳ ತಲೆಗೆ ಗಾಯಗಳಾಗಿದ್ದು, ಇದು ಭಾರೀ ವಸ್ತುವಿನಿಂದ ಉಂಟಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಮನೆ ಸಂಪೂರ್ಣ ಅಸ್ತವ್ಯಸ್ತಗೊಂಡಿರುವುದನ್ನು, ದೇಹಗಳು ಸುತ್ತಲೂ ಬಿದ್ದಿರುವುದನ್ನು ತೋರಿಸಿದೆ. ಬೆಡ್‌ಬಾಕ್ಸ್‌ನೊಳಗೆ ಗೋಣಿಚೀಲದಲ್ಲಿ ಕಿರಿಯ ಮಗುವಿನ ಶವ ಪತ್ತೆಯಾಗಿದೆ. ಬುಧವಾರ ಸಂಜೆಯಿಂದ ಕುಟುಂಬದವರು ಕಾಣಲಿಲ್ಲ ಎಂದು ನೆರೆಹೊರೆಯವರು ಹಂಚಿಕೊಂಡಿದ್ದಾರೆ, ಇದು ಆತಂಕವನ್ನು ಹೆಚ್ಚಿಸಿತು, ಅಂತಿಮವಾಗಿ ಆವಿಷ್ಕಾರಕ್ಕೆ ಕಾರಣವಾಯಿತು. ಘಟನೆಯ ಕುರಿತು ಹೆಚ್ಚಿನ ವಿವರಗಳನ್ನು ಹಂಚಿಕೊಂಡ ಎಸ್‌ಎಸ್‌ಪಿ ಟಾಡಾ, ಮನೆಗೆ ಹೊರಗಿನಿಂದ ಬೀಗ ಹಾಕಲಾಗಿತ್ತು. ಪೊಲೀಸರು ಮೇಲ್ಛಾವಣಿಯಿಂದ ಪ್ರವೇಶಿಸಿದಾಗ ಶವಗಳು ಪತ್ತೆಯಾಗಿವೆ. ಫೋರೆನ್ಸಿಕ್ ತಂಡಗಳು ಮನೆಯನ್ನು ಪರಿಶೀಲಿಸುತ್ತಿದ್ದು, ಭಯಾನಕ ಘಟನೆಯ ಹಿಂದಿನ ಸಂದರ್ಭಗಳನ್ನು ಬಹಿರಂಗಪಡಿಸಲು ಪೊಲೀಸರು ಕೆಲಸ ಮಾಡುತ್ತಿದ್ದಾರೆ.

# ಪಾಕಿಸ್ತಾನದ ಸಿಂಧು ನದಿಯ ತಳದಲ್ಲಿ ಬಂಗಾರದ ನಿಕ್ಷೇಪ ಪತ್ತೆ

## 1947ಕ್ಕೂ ಮುಂಚೆ ಭಾರತದೊಳಗಿದ್ದ 90 ಸಾವಿರ ಕೋಟಿ ರೂ. ಮೌಲ್ಯದ ಚಿನ್ನದ ನಿಕ್ಷೇಪ ಈಗ ಪಾಕಿಸ್ತಾನದಲ್ಲಿ ಪತ್ತೆ



**ಪಾಕಿಸ್ತಾನಕ್ಕೆ ಅಕ್ಷರಶಃ ಅದೃಷ್ಟ**

**ಇಸ್ಲಾಮಾಬಾದ್:** ಸಿಂಧೂ ನದಿಯ ದಡವೆಂದರೆ ಅದು ಇತಿಹಾಸದ ತುಣುಕು. ಮಾನವನ ನಾಗರೀಕತೆಯ ತೊಟ್ಟಿಲಾಗಿರುವ ಆ ಪ್ರಾಂತ್ಯದ ನದಿಯಾಳದಲ್ಲಿ ಬಹು ದೊಡ್ಡ ಚಿನ್ನದ ನಿಕ್ಷೇಪವಿರುವುದು ಪತ್ತೆಯಾಗಿದೆ. ಸಿಂಧೂ ನದಿ ಪಾಕಿಸ್ತಾನ, ಭಾರತ - ಈ ಎರಡೂ ದೇಶಗಳಲ್ಲಿ ಹರಿಯುತ್ತದೆ. ಆದರೆ, ಆ ನದಿಯ ಹೆಚ್ಚಿನ ಪಾತ್ರ ಇರುವುದು ಪಾಕಿಸ್ತಾನದಲ್ಲೇ. ಅದೇ ನದಿಯ ಕೆಳಗೆ ಅದರಲ್ಲೂ ಪಾಕಿಸ್ತಾನದ ಗಡಿಯೊಳಗಿನ ನದಿಯ ಕೆಳಗಡೆಯ ಜಾಗದಲ್ಲಿ ಸಿಂಧೂ ನದಿ ಹರಿಯುವ ಜಾಗದಡಿ ಯಲ್ಲೇ ಚಿನ್ನದ ನಿಕ್ಷೇಪ ಪತ್ತೆಯಾಗಿದೆ. ಇದು, ತೀವ್ರವಾದ ಆರ್ಥಿಕ ಸಂಕಷ್ಟದಿಂದಾಗಿ ಅಕ್ಷರಶಃ ದಿವಾಳಿಯಾಗಿರುವ ಪಾಕಿಸ್ತಾನಕ್ಕೆ ಅಕ್ಷರಶಃ ಅದೃಷ್ಟದ ಬಾಗಿಲು ತೆರೆಯುವಂಥ ಕಾಲ ಬಂದಿದೆ ಎಂದು ಅಭಿ ಪ್ರಾಯಪಡಲಾಗಿದೆ.

ಆದರೆ, ವಿಪರ್ಯಾಸ ಅಂದ್ರೆ ಇದೇ ನೋಡಿ. 1947ಕ್ಕೂ ಮುನ್ನ ಸಿಂಧೂ ನದಿಯ ಬಹುಪಾಲು ಭಾರತದಲ್ಲೇ ಹರಿಯುತ್ತಿತ್ತು. ಈಗಿನ ಗಡಿ ವ್ಯಾಜ್ಯಗಳನ್ನು ಮುಂದಿ ಟ್ಟುಕೊಂಡು ಹೇಳುವುದಾದರೆ, ಈ ನದಿ ವಿವಾದಿತ ಕಾಶ್ಮೀರದ ಭಾಗದಲ್ಲಿ, ಅಂದರೆ, ಟಿಬೆಟ್‌ನ ಬೊಖಾರ್ - ಚು ಗ್ಲೇಸಿಯರ್ ನಲ್ಲಿ ಹುಟ್ಟಿ ಆನಂತರ ಭಾರತಕ್ಕೆ ಪ್ರವೇಶ ಪಡೆದು ಪಶ್ಚಿಮ ದಿಕ್ಕಿನೆಡೆಗೆ ಹರಿಯುತ್ತಾ ಪಾಕಿಸ್ತಾನವನ್ನು ಪ್ರವೇಶಿಸುತ್ತದೆ. ಈ ನದಿಗೆ ಪಾಕಿಸ್ತಾನ - ಭಾರತದಲ್ಲಿ ಹರಿಯುವ ಚೆನಾಬ್, ಝೀಲಮ್ ಮುಂತಾದ ನದಿಗಳು ಉಪ ನದಿಗಳಾಗಿದ್ದು, ಅವೆಲ್ಲವೂ ಸೇರಿ ಈ ನದಿಯನ್ನು ಮಹಾ ನದಿಯನ್ನಾಗಿಸಿವೆ. ಆನಂತರ, ಸಿಂಧೂ ನದಿಯು ಅರಬ್ಬೀ ಸಮುದ್ರದಲ್ಲಿ ವಿಲೀನವಾಗುತ್ತದೆ. ಪಾಕಿಸ್ತಾನದ ದಕ್ಷಿಣ ಭಾಗಕ್ಕಂತೂ ಈ ನದಿ ಜೀವನಾಡಿ. ಆದರೆ, ಪಾಕಿಸ್ತಾನ ಪ್ರತ್ಯೇಕವಾಗಿದ್ದು, ಆನಂತರದಲ್ಲಿ ಆ ದೇಶಕ್ಕೂ ಭಾರತಕ್ಕೂ ನಡೆದಿರುವ ಹಲವಾರು ಗಡಿ ಸಂಬಂಧಿತ ಕಲಹಗಳ ಪರಿಣಾಮವಾಗಿ, ಈಗ ಆ ನದಿಯು ಭಾರತದ್ದಲ್ಲವೇ ಅಲ್ಲ ಎಂಬಂತಾಗಿದೆ. ಈಗ ಇದೇ ನದಿ ಪಾಕಿಸ್ತಾನಕ್ಕೆ ಹರಿಯುತ್ತದ್ದಲ್ಲವಾ, ಆಗ ಅದು ಅಲ್ಲಿನ ಪಂಜಾಬ್ ಪ್ರಾಂತ್ಯದ ಮೂಲಕ ಸಾಗಿಹೋಗುತ್ತದೆ.

ಆ ನದಿ ಪಂಜಾಬ್ ಪ್ರಾಂತ್ಯದ ಅಟ್ಟೋಕ್ ಎಂಬ ನಗರದ ಕಡೆಯಿಂದ ಹಾದು ಹೋಗುವ ಮಾರ್ಗದಲ್ಲಿ ಆ ನದಿಯ ತಳದ ಆಳದಲ್ಲಿಯೇ ಚಿನ್ನ ಸೇರಿದಂತೆ ಹಲವಾರು ಮೌಲ್ಯಯುತ ಖನಿಜಗಳ ನಿಕ್ಷೇಪ ಇದೆಯೆಂದು ವಿಜ್ಞಾನಿಗಳು ತಿಳಿಸಿದ್ದಾರೆ. ಅಲ್ಲಿರುವ ಚಿನ್ನದ ನಿಕ್ಷೇಪದ ಮೌಲ್ಯ ಸುಮಾರು 90 ಸಾವಿರ ಕೋಟಿ ರೂ. ಮೌಲ್ಯದ್ದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಅಲ್ಲಿಗೆ, ಬಡತನದಲ್ಲಿರುವ ಪಾಕಿಸ್ತಾನ ಅದೃಷ್ಟ ಖುಲಾಯಿಸಿದೆ ಎಂದು ಧಾರಾಳವಾಗಿ ಹೇಳಬಹುದು.

### ಪಾಕಿಸ್ತಾನಕ್ಕೆ ದೊಡ್ಡ ನೆರವು

**ಪಾಕಿಸ್ತಾನದಲ್ಲಿ ಹರಿಯುವ ಸಿಂಧು ನದಿಯ ಕೆಳಗಡೆ ಹೇರಳವಾದ ಚಿನ್ನದ ನಿಕ್ಷೇಪ ಪತ್ತೆಯಾಗಿದೆ. ಸಿಂಧೂ ನದಿಯು ಪಂಜಾಬಾ ಪ್ರಾಂತ್ಯದಲ್ಲಿ ಹರಿಯುವ ಕಡೆಯೇ ಈ ನಿಕ್ಷೇಪ ಪತ್ತೆಯಾಗಿದ್ದು ಇದರ ಮೌಲ್ಯ ಅಂದಾಜು 90 ಸಾವಿರ ಕೋಟಿ ರೂ. (ಪಾಕಿಸ್ತಾನ ರೂ.) ಎಂದು ಹೇಳಲಾಗಿದೆ. ಈ ನಿಕ್ಷೇಪ ಪತ್ತೆಯಾಗಿರುವುದು ತೀವ್ರವಾಗಿ ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನಕ್ಕೆ ದೊಡ್ಡ ನೆರವನ್ನು ನೀಡಲಿದೆ ಎಂದು ವಿಶ್ಲೇಷಿಸಲಾಗಿದೆ.**

- **ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಸಿಂಧು ನದಿ ಪಾತ್ರದ ಕೆಳಗೆ ನಿಕ್ಷೇಪ ಇದೆಯೆಂದಿರುವ ತಜ್ಞರು.**
- **ನಿಕ್ಷೇಪದ ಅಂದಾಜು ಮೌಲ್ಯ 90 ಸಾವಿರ ಕೋಟಿ ರೂ. (ಪಾಕಿಸ್ತಾನ ರೂ.)**
- **ಇದರಿಂದ ಪಾಕಿಸ್ತಾನ ಬಡತನ ನೀಗಬಹುದು ಎಂದು ವಿಶ್ಲೇಷಣೆ.**

# ಮಿನಿ ನ್ಯೂಸ್

## ಇಂಡಿಯಾ ಬಣದಲ್ಲಿ ಬಿರುಕು: ಎಎಪಿ ಬೆಂಬಲಕ್ಕೆ ನಿಂತ ಮೂರು ಪಕ್ಷಗಳು

**ನವದೆಹಲಿ:** ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದಲ್ಲಿ ಬಿರುಕು ಕಾಣಿಸಿಕೊಂಡಿದೆ. ಒಕ್ಕೂಟದಲ್ಲಿ ಗುರುತಿಸಿಕೊಂಡಿದ್ದ ಪ್ರಮುಖ ಮೂರು ಪಕ್ಷಗಳು ಇಂಡಿಯಾ ಒಕ್ಕೂಟ ತೊರೆದು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಸಮಾಜವಾದಿ ಪಕ್ಷ, ತಣಮೂಲ ಕಾಂಗ್ರೆಸ್ ಮತ್ತು ಶಿವಸೇನೆ (ಯುಬಿಟಿ) ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಬೆಂಬಲಿಸಿವೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಇಂಡಿ ಒಕ್ಕೂಟ 2024 ರ ಲೋಕಸಭೆ ಚುನಾವಣೆಗೆ ಮಾತ್ರ ಎಂದು ಹೇಳಿದ್ದಾರೆ.

ಪರಿಸ್ಥಿತಿ ಹದಗೆಡಲು ಸಾಧ್ಯವಿಲ್ಲ ಎಂದು ತೋರುತ್ತಿರುವಾಗ, ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮತ್ತು ಜಮ್ಮು ಮತ್ತು ಕಾಶ್ಮೀರ ಸಿಎಂ ಒಮರ್ ಅಬ್ದುಲ್ಲಾ ಮತ್ತೊಂದು ಹೊಡೆತ ನೀಡಿ, ಇಂಡಿಯಾ ಬಣವನ್ನು ಸಂಪೂರ್ಣವಾಗಿ ವಿಸರ್ಜಿಸಬೇಕೆಂದು ಸೂಚಿಸಿದ್ದಾರೆ. ಎಎಪಿ ಕಾಂಗ್ರೆಸ್ ನಾಯಕತ್ವವನ್ನು ವಿರೋಧಿಸಿಕೊಂಡೇ ಬಂದಿದ್ದರೂ ಇದೀಗ ಇಂಡಿಯಾ ಬಣದ ಹಲವಾರು ಪಕ್ಷಗಳು ಎಎಪಿ ಬೆಂಬಲಕ್ಕೆ ನಿಂತಿರುವುದರಿಂದ ಭವಿಷ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಹೊರತುಪಡಿಸಿದ ತೃತಿಯ ರಂಗ ಅಸ್ಥಿತ್ವಕ್ಕೆ ಬರುವ ಸಾಧ್ಯತೆಗಳಿವೆ.

## ಬಾಲಕನ ಸಾವು: ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ

**ಬೀಜಿಂಗ್:** ವಾಯುವ್ಯ ಚೀನಾದ ನಗರದಲ್ಲಿ ಹದಿಹರೆಯದ ಬಾಲಕನ ಸಾವಿನ ಪ್ರಕರಣ ಹಿಂಸಾತ್ಮಕ ಪ್ರತಿಭಟನೆಗಳಿಗೆ ನಾಂದಿ ಹಾಡಿದ್ದು ಪ್ರತಿಭಟನಾಕಾರರು ಮತ್ತೊಮ್ಮೆ ಪೊಲೀಸರ ನಡುವೆ ವಾಗ್ವಾದ ನಡೆದು ರಣರಂಗದಂತಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ವೀಡಿಯೊಗಳಲ್ಲಿ, ಶಾಂಕ್ಸಿ ಪ್ರಾಂತ್ಯದ ಪುಚೆಂಗ್‌ನಲ್ಲಿ ಪ್ರತಿಭಟನಾಕಾರರು ಪೊಲೀಸರು ಮತ್ತು ಅಧಿಕಾರಿಗಳ ಮೇಲೆ ಕಲ್ಲು ಎಸೆದು ಆಕ್ರೋಶ ಹೊರ ಹಾಕಿದ್ದಾರೆ.

ಜನವರಿ 2 ರಂದು ಶಾಲಾ ವಸತಿ ನಿಲಯದಲ್ಲಿ ಸಂಭವಿಸಿದ ಅಪಘಾತದಲ್ಲಿ ಹದಿಹರೆಯದ ಬಾಲಕ ಬಿದ್ದು ಸಾವನ್ನಪ್ಪಿದ್ದ ಘಟನೆ ಹಿಂಸಾತ್ಮಕ ರೂಪು ಪಡೆದುಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯಾರ್ಥಿಯ ಸಾವಿನ ನಂತರ ಕಟ್ಟಡದ ಮೇಲಿನಿಂದ ಕೆಳಗೆ ಬಿದ್ದ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಹಿನ್ನೆಲೆಯಲ್ಲಿ ಹಿಂಸಾತ್ಮಕ ರೂಪು ಪಡೆದುಕೊಂಡು ಬಿಗುವಿನ ವಾತಾವರಣ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಬಾರಿ ಬಿಗಿ ಭದ್ರತೆ ಒದಗಿಸಲಾಗಿದೆ. ಈ ವಾರದ ಆರಂಭದಲ್ಲಿ ಪ್ರತಿಭಟನೆಗಳು ಭುಗಿಲೆದ್ದವು ಮತ್ತು ಹಲವಾರು ದಿನಗಳ ಕಾಲ ನಡೆದಿದ್ದವು. ಯಾವಾಗ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಯಿತೋ ಅಲ್ಲಿಂದ ಪ್ರತಿಭಟನೆಗಳು ಮತ್ತಷ್ಟು ಉಗ್ರ ಸ್ವರೂಪ ಪಡೆದುಕೊಂಡಿವೆ. ಚೀನಾದಲ್ಲಿ ಸಾರ್ವಜನಿಕ ಪ್ರದರ್ಶನಗಳು ಅಸಾಮಾನ್ಯವಲ್ಲ, ಆದರೆ 2022 ರ ಕೋವಿಡ್ ನೀತಿಗಳ ವಿರುದ್ಧದ ಶ್ವೇತಪತ್ರ, ವಿರೋಧಿಸಿದ ಬಾರಿ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದ್ದವು. ಪ್ರತಿಭಟನೆಗಳ ನಂತರ ಅಧಿಕಾರಿಗಳು ಅವುಗಳ ಬಗ್ಗೆ ವಿಶೇಷವಾಗಿ ಸೂಕ್ಷ್ಮವಾಗಿದ್ದಾರೆ, ಚೀನೀ ಕಮ್ಯುನಿಸ್ಟ್ ಪಕ್ಷ ಮತ್ತು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಅಪರೂಪದ ಟೀಕೆಗೆ ಕಾರಣವಾಗಿದೆ.

## ಹತೋಟಿಗೆ ಬಾರದ ಕಾಳ್ಗಿಚ್ಚು ಬೆಂಕಿ ನಂದಿಸಲು ಹರಸಾಹಸ

**ವಾಷಿಂಗ್ಟನ್:** ಅಮೆರಿಕಾದ ಲಾಸ್ ಏಂಜಲೀಸ್ ಕಾಣಿಸಿಕೊಂಡ ಕಾಳ್ಗಿಚ್ಚು ಮೂರು ದಿನಗಳಾದರೂ ನಿಲ್ಲುವ ಯಾವುದೇ ಸೂಚನೆ ಕಂಡುಬಂದಿಲ್ಲ, ಇದುವರೆಗೂ 6ಕ್ಕೂ ಹೆಚ್ಚು ಮಂದಿ ಬೆಂಕಿಗೆ ಆಹುತಿ ಯಾಗಿದ್ದು ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಗ್ನಿಶಾಮಕ ಸಿಬ್ಬಂದಿ ಹೇಳಿದ್ದಾರೆ. ಸಾವಿರಾರು ಎಕರೆ ಪ್ರದೇಶದ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬೆಂಕಿ ಹೊತ್ತಿಕೊಂಡ ಪ್ರದೇಶ ಸಂಪೂರ್ಣ ಸುಟ್ಟು ಕರಕಲಾಗಿದೆ. ಜೊತೆಗೆ ಸಾವಿರಾರು ಎಕರೆ ಪ್ರದೇಶದ ವ್ಯಾಪ್ತಿಯಲ್ಲಿದ್ದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದುವರೆಗೂ 1,80,000 ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸ ಮಾಡಲಾಗಿದೆ. ಕಾಣಿಸಿಕೊಂಡ ಬೆಂಕಿ ಇನ್ನೂ ತಣ್ಣಗಾಗಿಲ್ಲ. ಅದನ್ನು ನಂದಿಸಲು ಅಗ್ನಿ ಶಾಮಕ ದಳ ಹಲವು ಸಾಹಸ ಮಾಡಿದರೂ ಪ್ರಯೋಜನವಾಗಿಲ್ಲ. ಪ್ರದೇಶದಲ್ಲಿ ಹಲವಾರು ಪ್ರಮುಖ ಬೆಂಕಿಯನ್ನು ಅಗ್ನಿಶಾಮಕ ದಳ ನಂದಿಸಲು ಹೋರಾಟ ನಡೆಸಿದ್ದಾರೆ. ಇವರ ಪ್ರಯತ್ನದ ಹೊರತಾಗಿಯೂ ಕನಿಷ್ಠ 6 ಜನರು ಸಾವನ್ನಪ್ಪಿದ್ದಾರೆ, ಅಧಿಕಾರಿಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಯಾಲಿಫೋರ್ನಿಯಾ ರಾಜ್ಯ ಇತಿಹಾಸದಲ್ಲಿ ಅತ್ಯಂತ ವಿನಾಶಕಾರಿಯಾಗಿದೆ ಮತ್ತು ಸಾವಿರಾರು ಕಟ್ಟಡಗಳು ಬೆಂಕಿಗೆ ಆಹುತಿಯಾಗಿವೆ. ಜಗತ್ತಿನ ಅತಿದೊಡ್ಡ ಚಲನಚಿತ್ರ ತಾಣವಾದ ಹಾಲಿವುಡ್ ಪ್ರದೇಶಕ್ಕೂ ಬೆಂಕಿ ಕಾಣಿಸಿಕೊಂಡು ಅಲ್ಲಿನ ನೂರಾರು ಎಕರೆ ಪ್ರದೇಶ ಬೆಂಕಿಗೆ ಸುಟ್ಟು ಹೋಗಿದೆ. ಇದರಿಂದ ಅಲ್ಲಿದ್ದ ಕಟ್ಟಡಗಳು, ಜನವಸತಿ ಪ್ರದೇಶಕ್ಕೂ ವ್ಯಾಪಿಸಿ ಅಪಾರ ಹಾನಿಯಾಗಿದೆ. ಲಾಸ್ ಏಂಜಲೀಸ್‌ನಲ್ಲಿ ಕಾಣಿಸಿಕೊಂಡ ಕಾಳ್ಗಿಚ್ಚು ಅಪಾರ ಪ್ರಮಾಣದ ಹಾನಿಗೆ ಕಾರಣವಾಗಿದೆ, ಇದರಿಂದ ಕೋಟ್ಯಂತರ ಡಾಲರ್ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ. ಅರಣ್ಯ ಪ್ರದೇಶದ ಹಾಸು ಪಾಸಿನಲ್ಲಿರುವ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದೆ.

## ಎಎಂಯು ಸ್ಫೋಟಿಸುವ ಬೆದರಿಕೆ

**ಅಲಿಗಢ:** ದೇಶ-ವಿದೇಶಗಳಲ್ಲಿ ಉನ್ನತ ಶಿಕ್ಷಣಕ್ಕೆ ಹೆಸರುವಾಸಿಯಾಗಿರುವ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ (ಎಎಂಯು) ಬಾಂಬ್ ಬೆದರಿಕೆಯೊಂದು ಬಂದಿದೆ. ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ಉಪಕುಲಪತಿ ಮತ್ತು ರಿಜಿಸ್ಟ್ರಾರ್ ಸೇರಿದಂತೆ 28 ಆಡಳಿತ ಅಧಿಕಾರಿಗಳಿಗೆ ಇಮೇಲ್ ಕಳುಹಿಸಲಾಗಿದೆ., ಎಎಂಯು ಬಾಂಬ್‌ನಿಂದ ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿದೆ. ಹಲವೆಡೆ ಸ್ಫೋಟಕಗಳನ್ನು ಇರಿಸಲಾಗಿದೆ ಎಂದು ಬೆದರಿಕೆಯ ಇ-ಮೇಲ್‌ನಲ್ಲಿ ಬರೆಯಲಾಗಿದೆ.

ಕೇವಲ 2 ಲಕ್ಷ ರೂಪಾಯಿ ವಸೂಲಿ ಮಾಡಲು ಬೆದರಿಕೆ ಹಾಕಿರುವ ವ್ಯಕ್ತಿ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಈ ಬೆದರಿಕೆಯ ನಂತರ, ಜನವರಿ 9 ರ ಸಂಜೆ, ಪೊಲೀಸರು ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಅನೇಕ ಸ್ಥಳಗಳನ್ನು ಪರಿಶೀಲಿಸಿದ್ದಾರೆ. ಇದೇ ವೇಳೆ ಭದ್ರತಾ ವ್ಯವಸ್ಥೆಯನ್ನೂ ಹೆಚ್ಚಿಸಲಾಗಿದೆ. ಈ ಬೆದರಿಕೆ ಇ-ಮೇಲ್ ತಿವಾರಿ ಶ್ರೀ ಜಯಂತ್ ಅವರ ಇ-ಮೇಲ್ ಐಡಿಯಿಂದ ಬಂದಿದೆ. ರಿಜಿಸ್ಟ್ರಾರ್ ಮೊಹಮ್ಮದ್ ಇಮ್ರಾನ್ ಅವರು ಜನವರಿ 9 ರ ಸಂಜೆ ಈ ಇ-ಮೇಲ್ ಮೊದಲು ನೋಡಿದ್ದಾರೆ. ಅವರು ತಕ್ಷಣವೇ ಉಪಕುಲಪತಿ ಪ್ರೊಫೆಸರ್ ನಯಿಮಾ ಖಾತೂನ್ ಅವರಿಗೆ ಈ ವಿಷಯ ತಿಳಿಸಿದ್ದಾರೆ. ನಂತರ ಆಡಳಿತದ 28 ಅಧಿಕಾರಿಗಳ ಮೇಲ್ ಐಡಿ ಸೇರಿದಂತೆ ಬೆದರಿಕೆಯ ಮೇಲ್ ಬಂದಿರುವುದು ಕಂಡುಬಂದಿದೆ. ಇದು ಕೋಲಾಹಲಕ್ಕೆ ಕಾರಣವಾಗಿತ್ತು. ಈ ಮಾಹಿತಿಯನ್ನು ಸಿವಿಲ್ ಲೈನ್ಸ್ ಪೊಲೀಸರಿಗೆ ನೀಡಲಾಗಿದೆ.

## ಮಗನ ಫೋಟೋ ರಿವೀಲ್ ಮಾಡಿದ ಪ್ರಣೀತಾ ಸುಭಾಷ್



ಮಕ್ಕಳ ಜೊತೆಗಿನ ಫೋಟೋ ಶೇರ್ ಮಾಡಿ ಸಂಭ್ರಮ

ಸ್ಯಾಂಡಲ್‌ವುಡ್ ನಟಿ ಪ್ರಣೀತಾ ಸುಭಾಷ್ ತಮ್ಮ ಮಗಳ ಜೊತೆಗೆ ಮಗನ ಫೋಟೋವನ್ನು ಸಹ ರಿವೀಲ್ ಮಾಡಿದ್ದಾರೆ. ಆದರೆ ಅಭಿಮಾನಿಗಳು ಮಾತ್ರ ನಟಿಯ ಅಂದವನ್ನು ಹೊಗಳೋದರಲ್ಲಿ ಬ್ಯುಸಿಯಾಗಿದ್ದಾರೆ. ಪ್ರಣೀತಾ 2021 ರಲ್ಲಿ ಉದ್ಯಮಿ, ವೇಗಾ ಸಿಟಿ ಮಾಲ್ ಮಾಲೀಕ ನಿತಿನ್ ರಾಜು ರನ್ನು ವಿವಾಹವಾದರು. ವಿವಾಹದ ಬಳಿಕ ಸಿನಿಮಾದಲ್ಲಿ ಪ್ರಣೀತಾ ಕಾಣಿಸಿಕೊಂಡಿದ್ದು ಕಡಿಮೆಯೇ. ಈ ವರ್ಷ ಪ್ರಣೀತಾ ನಟನೆಯ ಮಲಯಾಳಂ ಸಿನಿಮಾ 'ತಂಗಮಣಿ' ಸಿನಿಮಾ ಹಾಗೂ ಕನ್ನಡದಲ್ಲಿ 'ರಾಮನ ಅವತಾರ' ಸಿನಿಮಾ ಬಿಡುಗಡೆಯಾಗಿತ್ತು.

ಪ್ರಣೀತಾ 2022ರಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದರು. ಅವರು 2024ರಲ್ಲಿ ಮತ್ತೊಂದು ಮಗುವಿಗೆ ಜನ್ಮ ನೀಡಿದರು. ಜುಲೈನಲ್ಲಿ ಎರಡನೇ ಪ್ರೆಗ್ನೆನ್ಸಿ ಬಗ್ಗೆ ಘೋಷಿಸಿದ ಪ್ರಣೀತಾ, ಸೆಪ್ಟೆಂಬರ್ ತಿಂಗಳಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದರು. ಇತ್ತೀಚೆಗೆ ತಮ್ಮ 2ನೇ ಮಗುವಿನ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ನಟಿ ಮತ್ತು ಅವರ ಪತಿ ನಿತಿನ್ ರಾಜು ತಮ್ಮ 2ನೇ ಮಗುವಿನ ಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಆ ಮೂಲಕ ತಮ್ಮ ಅಭಿಮಾನಿಗಳಿಗೂ ಮಗುವಿನ ಪರಿಚಯ ಮಾಡಿಕೊಟ್ಟಿದ್ದಾರೆ. ಪ್ರಣೀತಾ ತಮ್ಮ ಮಗಳಿಗೆ ಅರ್ನಾ ಎಂದು ಹೆಸರಿಟ್ಟಿದ್ದು, ಮಗನಿಗೆ ಇನ್ನೂ ಹೆಸರಿಟ್ಟಿಲ್ಲ. ತಮ್ಮನ ಆಗಮನದಿಂದ ಮಗಳು ಖುಷಿಯಾಗಿದ್ದಾಳೆ ಎಂದಿದ್ದಾರೆ. ಇಬ್ಬರೂ ಮುದ್ದಾದ ಮಕ್ಕಳ ಜೊತೆಗಿನ ಫೋಟೋ ಶೇರ್ ಮಾಡಿ ಸಂಭ್ರಮಿಸಿದ್ದಾರೆ. ಎರಡು ಮಕ್ಕಳಾದರೂ ಅದೇ ಚಾರ್ಮ್ ಉಳಿಸಿಕೊಂಡಿರುವ ಪ್ರಣೀತಾರ ಬ್ಯೂಟಿಯನ್ನು ಹಾಡಿ ಹೊಗಳಿದ್ದಾರೆ ಫ್ಯಾನ್ಸ್. ಪೋರ್ಕಿ' ಸಿನಿಮಾದಲ್ಲಿ ದರ್ಶನ್ ತೂಗುದೀಪಗೆ ನಾಯಕಿಯಾಗುವ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಬ್ಯೂಟಿ ಪ್ರಣೀತಾ ಸುಭಾಷ್ ನಂತರ ತೆಲುಗು, ತಮಿಳು, ಹಿಂದಿ, ಮಲಯಾಳಂ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡರು.



ಕರ್ನಾಟಕ ಮೂಲದ ನಟಿ ದೀಪಿಕಾ ಪಡುಕೋಣೆ, ಬಾಲಿವುಡ್‌ನ ನಂಬರ್ 1 ನಟಿ. ಆಲಿಯಾ ಭಟ್‌ಗಿಂತಲೂ ಹೆಚ್ಚು ಸಂಭಾವನೆಯನ್ನು ದೀಪಿಕಾ ಪಡುಕೋಣೆ ಪಡೆಯುತ್ತಾರೆ. ಇತ್ತೀಚೆಗಷ್ಟೆ ಮುದ್ದಾದ ಹೆಣ್ಣು ಮಗುವಿಗೆ ಜನ್ಮ ನೀಡಿರುವ ನಟಿ ದೀಪಿಕಾ ಪಡುಕೋಣೆ, ಪ್ರಸ್ತುತ ಚಿತ್ರರಂಗದಿಂದ ಸಣ್ಣ ಬ್ರೇಕ್ ಪಡೆದಿದ್ದಾರೆ. ಮಗುವಿನೊಟ್ಟಿಗೆ ಸಮಯ ಕಳೆಯುತ್ತಿರುವ ದೀಪಿಕಾ

## ಶಾರುಖ್ ಖಾನ್‌ಮನೆಯ ಪಕ್ಕದಲ್ಲೇ ಮನೆ ಖರೀದಿ

ಪಡುಕೋಣೆ, ಇನ್ನೂ ಒಂದು ವರ್ಷ ಯಾವುದೇ ಸಿನಿಮಾಗಳಲ್ಲಿಯೂ ನಟಿಸುವುದಿಲ್ಲ ಎನ್ನಲಾಗುತ್ತಿದೆ. ಸಿನಿಮಾಗಳಲ್ಲಿ ನಟಸುತ್ತಿಲ್ಲವಾದರೂ ಈ ಅವಧಿಯನ್ನು ಅವರು ತಮ್ಮ ಬ್ಯುಸಿನೆಸ್ ಹಾಗೂ ಇನ್ನತರೆಗಳನ್ನು ನೋಡಿಕೊಳ್ಳಲು ಬಳಸುತ್ತಿದ್ದಾರೆ. ಇದೀಗ ಹೊಸ ರಿಯಲ್ ಎಸ್ಟೇಟ್ ಪ್ರಾಪರ್ಟಿ ಮೇಲೆ ದೀಪಿಕಾ ಹೂಡಿಕೆ ಮಾಡಿದ್ದಾರೆ. ಭಾರತದ ಅತ್ಯುತ್ತಮ ಮನೆಗಳಲ್ಲಿ ಒಂದು ಎನಿಸಿಕೊಂಡಿರುವ ಶಾರುಖ್ ಖಾನ್‌ರ 'ಮನ್ನತ್' ಮನೆಯ ಬಗಲಲ್ಲೇ ದೀಪಿಕಾ ಪಡುಕೋಣೆ ಮತ್ತು ಅವರ ಪತಿ ನಟಿ, ರಣ್ವೀರ್ ಸಿಂಗ್ ಹೊಸ ಮನೆಯೊಂದನ್ನು ಖರೀದಿ ಮಾಡಿದ್ದಾರೆ. ಮುಂಬೈನ ಪ್ರತಿಷ್ಠಿತ ಮತ್ತು ಅತ್ಯಂತ ದುಬಾರಿ ಏರಿಯಾ ಎನಿಸಿಕೊಂಡಿರುವ ಬಾಂಡ್ರಾನಲ್ಲಿ ದೀಪಿಕಾ ಮತ್ತು ರಣ್ವೀರ್ ಸಿಂಗ್ ಮನೆ ಖರೀದಿ ಮಾಡಿದ್ದಾರೆ. ಈ ಮನೆ ಬರೋಬ್ಬರಿ 11,266 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ಈ ಮನೆಯ ತಾರಸಿಯೇ 1400 ಚದರ ಅಡಿ ವಿಶಾಲವಾಗಿ ಇದೆಯಂತೆ. ಇದೊಂದು ಅಪಾರ್ಟ್‌ಮೆಂಟ್ ಹೌಸ್ ಆಗಿದ್ದು, ಈ ಮನೆಗೆ ಒಟ್ಟು ನಾಲ್ಕು ಅಂತಸ್ತುಗಳಿವೆ. 16ನೇ ಅಂತಸ್ಥಿನಿಂದ 19ನೇ ಅಂತಸ್ಥಿನ ವರೆಗಿನ ಮನೆಯನ್ನು ದೀಪಿಕಾ ಹಾಗೂ ರಣ್ವೀರ್ ಸಿಂಗ್ ಖರೀದಿ ಮಾಡಿದ್ದಾರೆ. ಮನೆ ಖರೀದಿ ಮುಗಿದಿದ್ದು, ಮನೆಯ ಒಳಾಂಗಣ ವಿನ್ಯಾಸವನ್ನು ಈ ಜೋಡಿ ಮಾಡಿಸುತ್ತಿದ್ದಾರೆ. ಆಧುನಿಕ ತಂತ್ರಜ್ಞಾನವನ್ನು ಬಳಸಿ ಮನೆಯ ಒಳಾಂಗಣ ವಿನ್ಯಾಸವನ್ನು ಮಾಡಿಸಲಾಗುತ್ತಿದ್ದು, ಸಾಕಷ್ಟು ಐಶಾರಾಮಿಯಾಗಿ ಮನೆಯನ್ನು ರೆಡಿ ಮಾಡಿಸುತ್ತಿದ್ದಾರೆ ಈ ದಂಪತಿ.

## ರಾಜಾ ಸಾಬ್ ಬಿಡುಗಡೆ ಮುಂದೂಡಿಕೆ

ಹಲವು ವರ್ಷಗಳಿಂದಲೂ ಪ್ರಭಾಸ್ ವರ್ಷಕ್ಕೆ ಒಂದು ಸಿನಿಮಾ ಮಾಡುತ್ತಾ ಬರುತ್ತಿದ್ದಾರೆ. ಒಂದು ಸಮಯದಲ್ಲಿ ಒಂದು ಸಿನಿಮಾದಲ್ಲಿ ಮಾತ್ರ ನಟಿಸುತ್ತಾರೆ ಪ್ರಭಾಸ್ ಆದರೆ 2023 ರಲ್ಲಿ ಈ ನಿಯಮ ಮುರಿದು ಒಂದೇ ವರ್ಷದಲ್ಲಿ ಪ್ರಭಾಸ್‌ರ ಎರಡು ಸಿನಿಮಾಗಳು ಬಿಡುಗಡೆ ಆದವು. ಆ ಬಳಿಕ 2024 ರಲ್ಲಿ ಪ್ರಭಾಸ್ ನಟನೆಯ 'ಕಲ್ಕಿ 2898 ಎಡಿ' ಒಂದೇ ಸಿನಿಮಾ ಬಿಡುಗಡೆ ಆಯ್ತು. ಆದರೆ 2025 ರಲ್ಲಿ ಪ್ರಭಾಸ್ ನಟನೆಯ ಎರಡು ಸಿನಿಮಾ ಬಿಡುಗಡೆ ಆಗುವ ನಿರೀಕ್ಷೆ ಇತ್ತು. ಮುಂದಿನ ಸಿನಿಮಾಗಳ ಲೈನ್ ಅಪ್ಸಹ ಹಾಗೆಯೇ ಇತ್ತು. ಆದರೆ ಈಗ ಸಿನಿಮಾ ಬಿಡುಗಡೆ ಮುಂದಕ್ಕೆ ಹೋಗಿದೆ.


ಪ್ರಭಾಸ್ ನಟನೆಯ ಹಾರರ್ ರೊಮ್ಯಾಂಟಿಕ್ ಕಾಮಿಡಿ ಸಿನಿಮಾ 'ದಿ ರಾಜಾ ಸಾಬ್' ಸಿನಿಮಾ ಏಪ್ರಿಲ್ ತಿಂಗಳಲ್ಲಿ ಬಿಡುಗಡೆ ಆಗಲಿಕ್ಕಿತ್ತು. ಏಪ್ರಿಲ್ 10 ಕ್ಕೆ ಸಿನಿಮಾ ಬಿಡುಗಡೆ ಆಗಲಿದೆ ಎಂದು ಅನಧಿಕೃತ ಘೋಷಣೆಯೂ ಆಗಿತ್ತು. ಚಿತ್ರತಂಡವೇ ಏಪ್ರಿಲ್ 10ರ ದಿನಾಂಕವನ್ನು ಘೋಷಿಸಿತ್ತು. ಆದರೆ ಈಗ ಹಠಾತ್ತನೆ ಚಿತ್ರತಂಡ ಸಿನಿಮಾದ ಬಿಡುಗಡೆ ದಿನಾಂಕ ಮುಂದೂಡಿದೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್‌ಗೆ ಹೆಚ್ಚು ಸಮಯ ನೀಡಬೇಕಾಗಿ ಬಂದಿರುವ ಕಾರಣ ಸಿನಿಮಾದ ಬಿಡುಗಡೆ ಮುಂದೂಡಲಾಗಿದೆಯಂತೆ.



ಪ್ರಭಾಸ್ ಅಭಿಮಾನಿಗಳಿಗೆ ನಿರಾಸೆ

ಸಿನಿಮಾದಲ್ಲಿ ಸಾಕಷ್ಟು ವಿಎಫ್‌ಎಕ್ಸ್ ಮತ್ತು ಗ್ರಾಫಿಕ್ಸ್ ಬಳಕೆ ಮಾಡಲಾಗಿದ್ದು, ಇದಕ್ಕೆ ಹೆಚ್ಚಿನ ಸಮಯದ ಅಗತ್ಯತೆ ಇರುವ ಕಾರಣ ಹಾಗೂ ಆತುರದಲ್ಲಿ ಸಿನಿಮಾ ಬಿಡುಗಡೆ ಬೇಡವೆಂದು ಖುದ್ದು ಪ್ರಭಾಸ್ ಅಭಿಪ್ರಾಯ ವ್ಯಕ್ತಪಡಿಸಿರುವ ಕಾರಣ ಸಿನಿಮಾದ ಬಿಡುಗಡೆ ದಿನಾಂಕ ಬದಲಾಯಿಸಲಾಗಿದೆಯಂತೆ. ಅಂದುಕೊಂಡ ದಿನಾಂಕಕ್ಕಿಂತಲೂ ಕನಿಷ್ಟ ಮೂರು ತಿಂಗಳು ತಡವಾಗಿ 'ದಿ ರಾಜಾ ಸಾಬ್' ಸಿನಿಮಾ ಬಿಡುಗಡೆ ಆಗಲಿದೆ ಎನ್ನಲಾಗುತ್ತಿದೆ. ದಿ ರಾಜಾ ಸಾಬ್' ಸಿನಿಮಾವನ್ನು ಮಾರುತಿ ನಿರ್ದೇಶನ ಮಾಡಿದ್ದು, ಸಿನಿಮಾದಲ್ಲಿ ಪ್ರಭಾಸ್ ಎರಡು ಷೇಡ್‌ನ ಪಾತ್ರಗಳಲ್ಲಿ ನಟಿಸಿದ್ದಾರೆ.

## ದಿ ರೈಸ್ ಆಫ್ ಅಶೋಕ ಮೋಷನ್ ಪೋಸ್ಟರ್ ಔಟ್



ನೀನಾಸಂ ಸತೀಶ್ ನಟಿಸುತ್ತಿರುವ ಅಶೋಕ ಬ್ಲೇಡ್ ಸಿನಿಮಾವೀಗ ಶೀರ್ಷಿಕೆ ಬದಲಾವಣೆಯೊಂದಿಗೆ ಮತ್ತೆ ಶೂಟಿಂಗ್ ಅಖಾಡಕ್ಕೆ ಇಳಿಯುತ್ತಿದೆ. ಅಶೋಕ್ ಬ್ಲೇಡ್ ಬದಲಿಗೆ 'ದಿ ರೈಸ್ ಆಫ್ ಅಶೋಕ' ಎಂಬ ಟೈಟಲ್ ಇಡಲಾಗಿದೆ. ಕೈಯಲ್ಲಿ ಮಚ್ಚು ಹಿಡಿದು ರಗಡ್ ಅವತಾರ ತಾಳಿದ್ದಾರೆ. ಸಿನಿಮಾದ ಪೋಸ್ಟರ್ ರಿಲೀಸ್ ಆಗಿದೆ.ನಿರ್ದೇಶಕ ವಿನೋದ್ ದೊಂಡಾಲೆ ನಿಧನದ ಬಳಿಕ ಈ ಚಿತ್ರ ನಿಂತು ಹೋಯ್ತು ಎಂಬ ಸುದ್ದಿಯಾಗಿತ್ತು. ಆದರೆ ನಟ ನೀನಾಸಂ ಸತೀಶ್ 'ದಿ ರೈಸ್ ಆಫ್ ಅಶೋಕ' ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ. ವಿನೋದ್ ದೊಂಡಾಲೆ ಶೇಕಡ 80%ರಷ್ಟು ಚಿತ್ರೀಕರಣ ಮುಗಿಸಿದ್ದಾರೆ. ಒಂದಿಷ್ಟು ಟಾಕಿ ಮತ್ತು ಹಾಡುಗಳ ಚಿತ್ರೀಕರಣ ಬಾಕಿ ಇತ್ತು.ಚಮಕ್, ಕ್ಷೇತ್ರಪತಿ, ಅವತಾರ ಪುರುಷ ಸೇರಿದಂತೆ ಒಂದಷ್ಟು ಸಿನಿಮಾಗಳಲ್ಲಿ ಸಂಕಲನಕಾರರಾಗಿ ಕೆಲಸ ಮಾಡಿರುವ ಮನು ಶೇಡ್ಗಾರ್ 'ದಿ ರೈಸ್ ಆಫ್ ಅಶೋಕ'ನಿಗೆ ಉಳಿದ ದೃಶ್ಯಗಳಿಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

## ಪ್ರೇಕ್ಷಕರಿಗೆ ಪಾಠ ಮಾಡಿ, ರಾಜಕೀಯಕ್ಕೆ ಚಾಟಿ ಬೀಸಿದ ಗೇಮ್ ಚೇಂಜರ್



ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ 'ಗೇಮ್ ಚೇಂಜರ್' ಶುಕ್ರವಾರ ರಿಲೀಸ್ ಆಗಿದೆ. ರಾಮ್ ಚರಣ್ ಅವರಿಗೆ ಇದು ಬಹಳ ಮುಖ್ಯವಾದ ಸಿನಿಮಾ. ಯಾಕೆಂದರೆ, 'ಆರ್‌ಆರ್‌ಆರ್' ನಂತರ ಅವರು ಈ ಚಿತ್ರದಲ್ಲಿ ನಟಿಸಿದ್ದು, ನಿರೀಕ್ಷೆ ಜಾಸ್ತಿ ಇತ್ತು. ಹಾಗಾದರೆ ಆ ನಿರೀಕ್ಷೆಗೆ ತಕ್ಕಂತೆ ಸಿನಿಮಾ ಮೂಡಿಬಂದಿದೆಯಾ ಈ ವಿಮರ್ಶೆಯಲ್ಲಿದೆ ಉತ್ತರ.. ಸಿನಿಮಾ ಗೇಮ್ ಚೇಂಜರ್. ನಿರ್ಮಾಣ ದಿಲ್ ರಾಜು. ನಿರ್ದೇಶನ: ಶಂಕರ್. ಪಾತ್ರವರ್ಗ ರಾಮ್ ಚರಣ್, ಕಿಯಾರಾ ಅಡ್ವಾಣಿ, ಎಸ್‌ಜೆ ಸೂರ್ಯ, ಜಯರಾಮ್, ಸುನಿಲ್, ಅಂಜಲಿ ಮುಂತಾದವರು. ಸ್ಟಾರ್ ಒಮ್ಮೆ ರಾಜಮೌಳಿ ಜೊತೆ ಸಿನಿಮಾ ಮಾಡಿ ಸೂಪರ್ ಸಕ್ಸಸ್ ಕಾಣುವ ಹೀರೋಗಳು ನಂತರದ ಸಿನಿಮಾದಲ್ಲಿ ಬೇರೆ ನಿರ್ದೇಶಕರ ಜೊತೆ ಕೈ ಜೋಡಿಸಿದರೆ ಸೋಲು ಖಚಿತ ಎಂಬ ಮಾತು ಚಾಲ್ತಿಯಲ್ಲಿದೆ. ಆದರೆ ಅದನ್ನು ಸುಳ್ಳು ಮಾಡಬೇಕು ಎಂಬ ಪ್ರಯತ್ನ ಎಲ್ಲ ಹೀರೋಗಳಿಂದಲೂ ಆಗುತ್ತದೆ. ರಾಮ್ ಚರಣ್ ನಟಿಸಿದ್ದ 'ಆರ್‌ಆರ್‌ಆರ್' ಚಿತ್ರಕ್ಕೆ ರಾಜಮೌಳಿ ನಿರ್ದೇಶನ ಮಾಡಿದ್ದರು. ಆ ಸಿನಿಮಾ ಜಾಗತಿಕ ಮಟ್ಟದಲ್ಲಿ ಸದ್ದು ಮಾಡಿತ್ತು. ಆ ಚಿತ್ರದ ನಂತರ ರಾಮ್ ಚರಣ್ ಅವರ ಖಾತೆಯಿಂದ ಬಂದಿರುವ ಸಿನಿಮಾ 'ಗೇಮ್ ಚೇಂಜರ್'. ಆದ್ದರಿಂದ ಈ ಸಿನಿಮಾ ಮಾಡುವಾಗ ಅವರ ಮೇಲೆ ಹೆಚ್ಚುವರಿ ನಿರೀಕ್ಷೆ ಮೂಡಿತ್ತು. ಈಗ 'ಗೇಮ್ ಚೇಂಜರ್' ಬಿಡುಗಡೆಯಾಗಿ ಪ್ರೇಕ್ಷಕರ ಎದುರು ಬಂದಿದೆ.

## ಪ್ರತೀಕಾ- ತೇಜಲ್ ಅರ್ಧಶತಕ; ಭಾರತಕ್ಕೆ ಗೆಲುವಿನ ಶುಭಾರಂಭ




ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಟಾರ್ ವೇಗದ ಬೌಲರ್ ರೇಣುಕಾ ಸಿಂಗ್ ಅನುಪಸ್ಥಿತಿಯಲ್ಲೂ ಭಾರತ ಮಹಿಳಾ ಕ್ರಿಕೆಟ್ ತಂಡ ಐರ್ಲೆಂಡ್ ವಿರುದ್ಧದ ಏಕದಿನ ಸರಣಿಯನ್ನು ಗೆಲುವಿನೊಂದಿಗೆ ಪ್ರಾರಂಭಿಸಿದೆ. ರಾಜ್‌ಕೋಟ್‌ನಲ್ಲಿ ನಡೆದ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಬಾಲ್ ಮತ್ತು ಬ್ಯಾಟಿಂಗ್‌ನಲ್ಲಿ ಯುವ ಆಟಗಾರರ ಅಮೋಘ ಪ್ರದರ್ಶನದ ಆಧಾರದ ಮೇಲೆ ಟೀಂ ಇಂಡಿಯಾ 7 ವಿಕೆಟ್‌ಗಳ ಸುಲಭ ಜಯ ದಾಖಲಿಸಿದೆ. 20 ವರ್ಷದ ಲೆಗ್ ಸ್ಪಿನ್ನರ್ ಪ್ರಿಯಾ ಮಿಶ್ರಾ ಮತ್ತು 19 ವರ್ಷದೊಳಗಿನವರ ವಿಶ್ವಕಪ್ ವಿಜೇತ ಟಿಟಾಸ್ ಸಾಧು ಬೌಲಿಂಗ್‌ನಲ್ಲಿ ಮಿಂಚಿದರೆ, ಮಂದಾನ ಜೊತೆ ಇನ್ನಿಂಗ್ಸ್ ಆರಂಭಿಸುವ ಜವಬ್ದಾರಿ ಹೊತ್ತಿರುವ ಪ್ರತೀಕಾ ರಾವಲ್ ಮತ್ತು ತೇಜಲ್ ಅರ್ಧಶತಕ ದಾಖಲಿಸುವ ಮೂಲಕ ತಂಡಕ್ಕೆ ಅಮೋಘ ಜಯ ತಂದುಕೊಟ್ಟರು. ಈ ಮೂಲಕ ಮೊದಲ ಬಾರಿಗೆ ಟೀಂ ಇಂಡಿಯಾ ತನ್ನದೇ ನೆಲದಲ್ಲಿ ಏಕದಿನ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಸೋಲಿಸಿದ ಸಾಧನೆ ಮಾಡಿದೆ.

ಗೆಲುವಿನ ಆರಂಭ 3 ಪಂದ್ಯಗಳ ಸರಣಿಯ ಈ ಮೊದಲ ಪಂದ್ಯ ಜನವರಿ 10 ಶುಕ್ರವಾರ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ನಡೆಯಿತು. ಈ ಸರಣಿಯಿಂದ ನಾಯಕಿ ಹರ್ಮನ್‌ಪ್ರೀತ್‌ಗೆ ವಿಶ್ರಾಂತಿ ನೀಡಲಾಗಿದ್ದು, ತಂಡದ ಪ್ರಮುಖ ವೇಗದ ಬೌಲರ್ ರೇಣುಕಾ ಸಿಂಗ್‌ಗೆ ಕೆಲಸದ ಹೊರೆ ನಿರ್ವಹಣೆಯಿಂದಾಗಿ ವಿಶ್ರಾಂತಿ ನೀಡಲಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಅನೇಕ ಯುವ ಆಟಗಾರ್ತಿಯರನ್ನು ಒಳಗೊಂಡ ತಂಡವನ್ನು ಕಟ್ಟಿಕೊಂಡು ಅಖಾಡಕ್ಕಿಳಿದ ಮಂಧಾನ ತಂಡಕ್ಕೆ ಅಮೋಘ ಜಯ ತಂದುಕೊಟ್ಟಿದ್ದಾರೆ. ವಿಂಡೀಸ್ ವಿರುದ್ಧದ ಸರಣಿಯಿಂದ ಆರಂಭಿಕ ಜೊತೆಗಾರ್ತಿಯಾಗಿ ಕಣಕ್ಕಿಳಿಯುತ್ತಿರುವ ಪ್ರತೀಕಾ, ಶತಕ ವಂಚಿತರಾದರೂ ಅತ್ಯುತ್ತಮ ಇನ್ನಿಂಗ್ಸ್ ಆಡುವ ಮೂಲಕ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. **ಶತಕ ವಂಚಿತ ಪ್ರತೀಕಾ:** ನಾಯಕಿ ಸ್ಮೃತಿ (41) ಪ್ರತೀಕಾ ಜೊತೆಗೂಡಿ ಟೀಂ ಇಂಡಿಯಾಕ್ಕೆ ಅಮೋಘ ಆರಂಭ ನೀಡಿದರು. ಸ್ಮೃತಿ ಆರಂಭದಿಂದಲೂ ಹೆಚ್ಚು ಆಕ್ರಮಣಕಾರಿಯಾಗಿ ಐರಿಶ್ ಬೌಲರ್‌ಗಳನ್ನು ತರಾಟೆಗೆ ತೆಗೆದುಕೊಂಡರು. ಸ್ಮೃತಿ ಔಟಾಗುವುದಕ್ಕೂ ಮುನ್ನ 10 ಓವರ್‌ಗಳಲ್ಲಿ ಮೊದಲ ವಿಕೆಟ್‌ಗೆ 70 ರನ್ ಕಲೆಹಾಕಿದರು.

### ಐರ್ಲೆಂಡ್‌ಗೆ ಆರಂಭಿಕ ಆಘಾತ

**ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ ಕೇವಲ 56 ರನ್‌ಗಳಿಗೆ ತನ್ನ ಮೊದಲ 4 ವಿಕೆಟ್ ಕಳೆದುಕೊಂಡಿತು. ಇದರಲ್ಲಿ ಯುವ ವೇಗಿ ಟಿಟಾಸ್ ಸಾಧು ಹಾಗೂ ಸ್ಪಿನ್ನರ್ ಪ್ರಿಯಾ ಪಾತ್ರ ದೊಡ್ಡದಿತ್ತು. ಪ್ರಿಯಾ ಹ್ಯಾಟ್ರಿಕ್ ಕೂಡ ಮಿಸ್ ಮಾಡಿಕೊಂಡರು. ಇತ್ತ ಆರಂಭಿಕ ಆಘಾತದಿಂದಾಗಿ ಐರಿಶ್ ನಾಯಕಿ ಗ್ಯಾಬಿ ಲೂಯಿಸ್ ಇಡೀ ಇನ್ನಿಂಗ್ಸ್‌ನ ಜವಬ್ದಾರಿ ವಹಿಸಿಕೊಂಡು ಲಿಯಾ ಪೌಲ್ ಜೊತೆಗೂಡಿ 117 ರನ್‌ಗಳ ಉತ್ತಮ ಜೊತೆಯಾಟ ನೀಡಿದರು. ಈ ಅವಧಿಯಲ್ಲಿ ಇಬ್ಬರೂ ಅರ್ಧಶತಕಗಳನ್ನು ಪೂರೈಸಿದರು. ಆದರೆ, 3 ಸುಲಭ ಕ್ಯಾಚ್‌ಗಳನ್ನು ಕೈಬಿಟ್ಟ ಟೀಂ ಇಂಡಿಯಾದ ಫೀಲ್ಡರ್‌ಗಳೂ ಇದರಲ್ಲಿ ಕೊಡುಗೆ ನೀಡಿದ್ದಾರೆ. ಆದರೆ, ಲೂಯಿಸ್ ಶತಕ ಪೂರೈಸಲು ಸಾಧ್ಯವಾಗದೆ ದೀಪ್ತಿ ಶರ್ಮಾಗೆ ಬಲಿಯಾದರು. ಕೊನೆಯಲ್ಲಿ ಅರ್ಲೀನ್ ಕೆಲ್ಲಿ ಕೂಡ ವೇಗವಾಗಿ 28 ರನ್ ಗಳಿಸಿ ತಂಡವನ್ನು 238 ರನ್‌ಗಳಿಗೆ ಕೊಂಡೊಯ್ದರು.**

## ಇಂಗ್ಲೆಂಡ್ ವಿರುದ್ಧದ ಸರಣಿಯಿಂದ ಹೊರಬಿದ್ದ ಕನ್ನಡಿಗ ಕೆಎಲ್ ರಾಹುಲ್!

ಫೆಬ್ರವರಿಯಲ್ಲಿ ನಡೆಯಲ್ಲಿರುವ ಚಾಂಪಿಯನ್ಸ್ ಟ್ರೋಫಿ ಹಾಗೂ ಜನವರಿಯ ಕೊನೆಯ ವಾರದಿಂದ ಆರಂಭವಾಗಿರುವ ಇಂಗ್ಲೆಂಡ್ ವಿರುದ್ಧದ ಟಿ20 ಮತ್ತು ಏಕದಿನ ಸರಣಿಗಾಗಿ ಟೀಂ ಇಂಡಿಯಾವನ್ನು ಇನ್ನು ಕೆಲವೇ ಗಂಟೆಗಳಲ್ಲಿ ಪ್ರಕಟಿಸುವ ಸಾಧ್ಯತೆ ಇದೆ. ವರದಿ ಪ್ರಕಾರ, ಜನವರಿ 11 ರೊಳಗೆ ಈ ಎರಡು ಪಂದ್ಯಾವಳಿಗಾಗಿ ಟೀಂ ಇಂಡಿಯಾವನ್ನು ಪ್ರಕಟಿಸಲಾಗುವುದು. ಇಂಗ್ಲೆಂಡ್ ವಿರುದ್ಧ ಟಿ20 ಹಾಗೂ ಏಕದಿನ ಸರಣಿ ಟೀಂ ಇಂಡಿಯಾಕ್ಕೆ ಚಾಂಪಿಯನ್ಸ್ ಟ್ರೋಫಿಯ ತಯಾರಿಗೆ ಅತ್ಯಂತ ಮಹತ್ವದ್ದಾಗಿದೆ. ಹೀಗಾಗಿ ಈ ಎರಡು ಸರಣಿ ಮತ್ತು ಚಾಂಪಿಯನ್ಸ್ ಟ್ರೋಫಿಯ ತಂಡದಲ್ಲಿ ಯಾರಿಗೆ ಸ್ಥಾನ ಸಿಗಲಿದೆ, ಯಾರಿಗೆ ಸ್ಥಾನ ಸಿಗುವುದಿಲ್ಲ ಎಂಬ ಚರ್ಚೆ ನಡೆಯುತ್ತಿದೆ. ಈ ಚರ್ಚೆಯ ನಡುವೆ ಕನ್ನಡಿಗ ಕೆಎಲ್ ರಾಹುಲ್ ಇಂಗ್ಲೆಂಡ್ ವಿರುದ್ಧದ ಸರಣಿಯಿಂದ ಹೊರಗುಳಿದಿದ್ದಾರೆ ಎಂದು ವರದಿಯಾಗಿದೆ.

**8 ಪಂದ್ಯಗಳಿಗೂ ರಾಹುಲ್ ಅಲಭ್ಯ:** ಟೈಮ್ಸ್ ಆಫ್ ಇಂಡಿಯಾದ ವರದಿ ಪ್ರಕಾರ, ಇಂಗ್ಲೆಂಡ್ ವಿರುದ್ಧದ ಟಿ20 ಹಾಗೂ ಏಕದಿನ ಸರಣಿಯಿಂದ ರಾಹುಲ್‌ಗೆ ವಿಶ್ರಾಂತಿ ನೀಡಲು ನಿರ್ಧರಿಸಲಾಗಿದೆ. ಆದರೆ, ಇದರ ಹೊರತಾಗಿಯೂ ಚಾಂಪಿಯನ್ಸ್ ಟ್ರೋಫಿಗೆ ಆಯ್ಕೆಯಾಗಿರುವ ತಂಡದಲ್ಲಿ ರಾಹುಲ್‌ಗೆ ಸ್ಥಾನ ಸಿಗಲಿದೆ ಎಂದು ಆಯ್ಕೆ ಸಮಿತಿ ಭರವಸೆ ನೀಡಿದೆ. ಇದರರ್ಥ ರಾಹುಲ್ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿ ಮತ್ತು ಏಕದಿನ ಸರಣಿಯನ್ನು ಆಡದೆ ಚಾಂಪಿಯನ್ಸ್ ಟ್ರೋಫಿಗೆ ಕಾಲಿಡಲಿದ್ದಾರೆ. **ಆಘಾತಕಾರಿ ನಿರ್ಧಾರ:** ಆಯ್ಕೆ ಸಮಿತಿಯ ಈ ನಿರ್ಧಾರ ಆಘಾತಕಾರಿಯಾಗಿದೆ. ಏಕೆಂದರೆ ರಾಹುಲ್ ದೀರ್ಘಕಾಲ ಟಿ20 ತಂಡದ ಭಾಗವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಟಿ20 ಸರಣಿಗೆ ಅವರು ಆಯ್ಕೆಯಾಗುವ ನಿರೀಕ್ಷೆ ಇರಲಿಲ್ಲ. ಆದರೆ ಚಾಂಪಿಯನ್ಸ್ ಟ್ರೋಫಿಗೆ ಮುನ್ನ ನಡೆಯುವ ಏಕದಿನ ಸರಣಿಯಿಂದ ರಾಹುಲ್‌ಗೆ ವಿಶ್ರಾಂತಿ ನೀಡುವ ನಿರ್ಧಾರ ಖಂಡಿತವಾಗಿಯೂ ಅಚ್ಚರಿ ಮೂಡಿಸುತ್ತದೆ. ಏಕೆಂದರೆ ಟೀಂ ಇಂಡಿಯಾ ಈಗಾಗಲೇ ಆಸ್ಟ್ರೇಲಿಯಾದಿಂದ ವಾಪಸಾಗಿದ್ದು, ಫೆಬ್ರವರಿ 6 ರಿಂದ ಏಕದಿನ ಸರಣಿ ಆರಂಭವಾಗಲಿದೆ.



ಇಂತಹ ಪರಿಸ್ಥಿತಿಯಲ್ಲಿ ರಾಹುಲ್‌ಗೆ ವಿಶ್ರಾಂತಿ ಪಡೆಯಲು ಸಾಕಷ್ಟು ಸಮಯವಿದೆ. ಹೀಗಿರುವಾಗ ಚಾಂಪಿಯನ್ಸ್ ಟ್ರೋಫಿಗೆ ಆಯ್ಕೆಯಾಗುವುದು ಖಚಿತ ಎಂದಾದ ಮೇಲೆ ರಾಹುಲ್, ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯನ್ನು ಆಡಿದ್ದರೆ ತಯಾರಿಯ ದೃಷ್ಟಿಯಿಂದ ಅವರಿಗೆ, ತಂಡಕ್ಕೆ ಉತ್ತಮವಾಗಿರುತ್ತಿತ್ತು. ಆದರೆ ಅವರಿಗೆ ಏಕದಿನ ಸರಣಿಯಿಂದ ವಿಶ್ರಾಂತಿ ನೀಡಲು ನಿರ್ಧರಿಸಲಾಗಿದೆ. ಚಾಂಪಿಯನ್ಸ್ ಟ್ರೋಫಿಯಂತಹ ದೊಡ್ಡ ಟೂರ್ನಿಗೆ ಯಾವುದೇ ಪೂರ್ವಸಿದ್ಧತೆ ಇಲ್ಲದೆ ಪ್ರವೇಶಿಸುವುದು ರಾಹುಲ್ ಅವರ ಮೇಲೆ ಒತ್ತಡವನ್ನುಂಟು ಮಾಡಬಹುದು. ಏಕೆಂದರೆ ಒಂದು ವೇಳೆ ಟೂರ್ನಿಯಲ್ಲಿ ರಾಹುಲ್ ಕಳಪೆ ಪ್ರದರ್ಶನ ನೀಡಿದರೆ ಅದು ಅವರಿಗೆ ಮಾತ್ರವಲ್ಲದೆ ತಂಡದ ಮೇಲೆಯೂ ಪರಿಣಾಮ ಬೀರಲಿದೆ.

ರಾಹುಲ್‌ಗೆ ವಿಶ್ರಾಂತಿ ನೀಡಲು ಕಾರಣವೇನು ರಾಹುಲ್‌ಗೆ ಆಯ್ಕೆ ಮಂಡಳಿ ವಿಶ್ರಾಂತಿ ನೀಡಲು ಕಾರಣವೂ ಇದ್ದು, ರಾಹುಲ್ ಅವರ ಪತ್ನಿ ಅಥಿಯಾ ಶೆಟ್ಟಿ ಶೀಘ್ರದಲ್ಲೇ ಮಗುವಿಗೆ ಜನ್ಮ ನೀಡಲಿರುವ ಕಾರಣ ಬಿಸಿಸಿಐನಿಂದ ವಿರಾಮ ಕೇಳಿರುವ ಸಾಧ್ಯತೆಯೂ ಇದೆ. ರಾಹುಲ್ ಮತ್ತು ಅಥಿಯಾ ಮೊದಲ ಮಗುವಿನ ನಿರೀಕ್ಷೆಯಲಿದ್ದು, ಈ ವಿಶೇಷ ಸಂದರ್ಭದಲ್ಲಿ ಕುಟುಂಬದೊಂದಿಗೆ ಇರಲು ರಾಹುಲ್ ಬಯಸಿರುವ ಸಾಧ್ಯತೆಯಿದೆ. ಆದ್ದರಿಂದ ಅವರಿಗೆ ವಿಶ್ರಾಂತಿ ನೀಡಲಾಗಿದೆ. 2023 ರ ವಿಶ್ವಕಪ್‌ನಲ್ಲಿ ರಾಹುಲ್ ಉತ್ತಮ ಪ್ರದರ್ಶನ ನೀಡಿದ್ದ ಕಾರಣದಿಂದ ಆಯ್ಕೆ ಸಮಿತಿಯು ಈಗಾಗಲೇ ರಾಹುಲ್ ಅವರನ್ನು ಮುಖ್ಯ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲು ನಿರ್ಧರಿಸಿದೆ.

## ವದಂತಿಯ ಬಗ್ಗೆ ಮೌನ ಮುರಿದ ಚಹಾಲ್




ಕ್ರಿಕೆಟಿಗ ಯುಜ್ವೇಂದ್ರ ಚಹಾಲ್ ಮತ್ತು ಅವರ ಪತ್ನಿ ಧನಶ್ರೀ ವರ್ಮಾ ನಡುವಿನ ಸಂಬಂಧದ ಬಗ್ಗೆ ಊಹಾಪೋಹಗಳು ಮತ್ತು ವದಂತಿಗಳು ವೇಗ ಪಡೆದುಕೊಳ್ಳುತ್ತಿವೆ. ಈ ಇಬ್ಬರ ವೈವಾಹಿಕ ಜೀವನ ಮುರಿದು ಬಿದ್ದಿದ್ದು, ಇಷ್ಟರಲ್ಲೇ ವಿಚ್ಛೇದನ ಪಡೆಯಲಿದ್ದಾರೆ ಎಂದು ವರದಿಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವರು ಚಹಾಲ್‌ರನ್ನು ಟ್ರೋಲ್ ಮಾಡುತ್ತಿದ್ದರೆ, ಇನ್ನು ಕೆಲವರು ಧನಶ್ರೀ ಅವರನ್ನು ಗುರಿಯಾಗಿಸಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಇಬ್ಬರೂ ಇದುವರೆಗೆ ಏನನ್ನೂ ಹೇಳಿಲ್ಲ. ಆದರೆ ಈ ಇಬ್ಬರು ಟ್ರೋಲಿಂಗ್ ಬಗ್ಗೆ ಹೇಳಿಕೆಗಳನ್ನು ನೀಡಿದ್ದಾರೆ. ಈ ಮೊದಲು ಧನಶ್ರೀ ತನ್ನ ಗೌರವಕ್ಕೆ ದಕ್ಕೆಯನ್ನುಂಟು ಮಾಡಿದವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರೆ, ಇದೀಗ ಚಹಾಲ್ ಕೂಡ ಹೇಳಿಕೆ ನೀಡಿದ್ದು, ತನಗೆ ಮತ್ತು ತನ್ನ ಕುಟುಂಬಕ್ಕೆ ತೊಂದರೆಯಾಗುವುದರಿಂದ ತನ್ನ ವೈಯಕ್ತಿಕ ಜೀವನದ ಬಗ್ಗೆ ಯಾವುದೇ ಊಹಾಪೋಹಗಳನ್ನು ಮಾಡಬೇಡಿ ಎಂದು ಮನವಿ ಮಾಡಿದ್ದಾರೆ. ನಿಜವಿರಬಹುದು ಅಥವಾ ಇಲ್ಲದಿರಬಹುದು ಟೀಮ್ ಇಂಡಿಯಾದಿಂದ ಹೊರಗುಳಿದಿರುವ ಲೆಗ್ ಸ್ಪಿನ್ನರ್ ಚಹಾಲ್ ಅವರು ಜನವರಿ 9ರ ಗುರುವಾರ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್‌ವೊಂದನ್ನು ಮಾಡಿ ದ್ದಾರೆ. ಇದರಲ್ಲಿ ಅವರು, ' ತನಗೆ ಇಷ್ಟೊಂದು ಪ್ರೀತಿ ಮತ್ತು ಬೆಂಬಲ ನೀಡಿದ ಅಭಿಮಾನಿಗಳಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ. ಅಲ್ಲದೆ ಟೀಂ ಇಂಡಿಯಾದಲ್ಲಿ ತನ್ನ ಪ್ರಯಾಣ ಇನ್ನೂ ಮುಗಿದಿಲ್ಲ ಎಂದಿರುವ ಚಹಾಲ್, ನನ್ನ ದೇಶ, ನನ್ನ ತಂಡ ಮತ್ತು ನನ್ನ ಅಭಿಮಾನಿಗಳಿಗಾಗಿ ನಾನು ಇನ್ನೂ ಅನೇಕ ಉತ್ತಮ ಓವರ್‌ಗಳನ್ನು ಬೌಲ್ ಮಾಡಬೇಕಾಗಿದೆ ಎಂದಿದ್ದಾರೆ.

## ಟೀಂ ಇಂಡಿಯಾ ಘಾತುಕ ವೇಗಿ



ಅಂತರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ

ಭಾರತೀಯ ವೇಗದ ಬೌಲರ್ ವರುಣ್ ಆರಾನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. 2011ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ವರುಣ್, 9 ಏಕದಿನ ಮತ್ತು 9 ಟೆಸ್ಟ್ ಪಂದ್ಯಗಳಲ್ಲಿ 29 ವಿಕೆಟ್‌ಗಳನ್ನು ಪಡೆದಿದ್ದಾರೆ. ಐಪಿಎಲ್‌ನಲ್ಲಿಯೂ ಅವರು ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೂ, ಆಗಾಗ್ಗೆ ಗಾಯದಿಂದ ಬಳಲುತ್ತಿದ್ದ ಅವರ ಅಂತರಾಷ್ಟ್ರೀಯ ಕ್ರಿಕೆಟ್ ಜೀವನ ಬಹಳ ದಿನಗಳವರೆಗೆ ನಡೆಯಲಿಲ್ಲ.

ಕಳೆದ ಕೆಲವು ದಿನಗಳಿಂದ ಟೀಂ ಇಂಡಿಯಾದಲ್ಲಿ ಆಟಗಾರರ ನಿವೃತ್ತಿಯ ಪರ್ವ ಆರಂಭವಾಗಿದೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಅವರ ಬಳಿಕ ಮತ್ತೊಬ್ಬ ವೇಗಿ ರಿಷಿ ಧವನ್ ಕೂಡ ಸೀಮಿತ ಓವರ್‌ಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ಇದೀಗ ಮತ್ತೊಬ್ಬ ವೇಗದ ಬೌಲರ್ ವರುಣ್ ಆರೋನ್ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. 2011 ರಲ್ಲಿ ಎಂಎಸ್ ಧೋನಿ ನಾಯಕತ್ವದಲ್ಲಿ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದ ವರುಣ್, ಭಾರತದ ಪರ 9 ಏಕದಿನ ಮತ್ತು ಅಷ್ಟೇ ಸಂಖ್ಯೆಯ ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಇದರಲ್ಲಿ ಅವರು ಒಟ್ಟು 29 ವಿಕೆಟ್‌ಗಳನ್ನು ಪಡೆದಿದ್ದಾರೆ. ತನ್ನ ವೇಗದ ಬೌಲಿಂಗ್ ಮೂಲಕವೇ ಸಂಚಲನ ಮೂಡಿಸಿದ್ದ ವರುಣ್ ಅವರು ಆಗಾಗ್ಗೆ ಗಾಯಕ್ಕೆ ತುತ್ತಾಗಿ ತಂಡದಿಂದ ಹೊರಗುಳಿಯುತ್ತಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966